ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 17 | ಏಪ್ರಿಲ್ 19–25, 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com



ಕೆಂಪು ರೋಸಾ 'ಕ್ರಾಂತಿಯ ಬೆಂಕಿ'



ಚುನಾವಣಾ ಆಯೋಗದ ಘನತೆಗೆ ಅಪಾಯ!

ವಲಸೆ ಕಾರ್ಮಿಕರ ಹಕ್ಕು ವಂಚನೆ



ಕೋವಿಡ್ ಎರಡನೇ ಅಲೆ-ಬಹುಕ್ರೂರ

ಆಸ್ಪತ್ರೆಯಲ್ಲಿ ಜಾಗವಿಲ್ಲ ಮಸಣದಲ್ಲೂ ಕ್ಯೂ







ರಾಜ್ಯ ರಸ್ತೆ ಸಾರಿಗೆ ನೌಕರರ ಚರಿತ್ರಾರ್ಹ ಮುಷ್ಕರ

ಕೋವಿಡ್ ಮಹಾಸೋಂಕು: ತಕ್ಷಣವೇ ಯುದ್ಧೋಪಾದಿಯಲ್ಲಿ ಕ್ರಿಯೆಗಿಳಿಯಬೇಕು

ಕೊವಿಡ್ ಮಹಾಸೋಂಕು ದೇಶಾದ್ಯಂತ ಹತೋಟಿಯಿಲ್ಲದಂತೆ ಎಗರುತ್ತಿದೆ. ಸಾವುಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ತಡೆದು ನಿಲ್ಲಿಸಲು ಮತ್ತು ಆರೋಗ್ಯ ಸೌಕರ್ಯಗಳ ಕೊರತೆಯನ್ನು ನೀಗಿಸಲು ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಕೇಂದ್ರ ಸರಕಾರ ಜನಗಳು ಸೋಂಕು–ನಿರೋಧಕ ಆಚರಣೆಗಳನ್ನು ಅನುಸರಿಸುತ್ತಿಲ್ಲ ಎಂದು ದೂಷಿಸಿ ಅಥವ ರಾಜ್ಯ ಸರಕಾರಗಳ ಮೇಲೆ ಅವನ್ನು ವರ್ಗಾಯಿಸಿ ತನ್ನ ಹೊಣೆಯನ್ನು ನಿಭಾಯಿಸದೇ ಇರುವುದು ಸಾಧ್ಯವಿಲ್ಲ. ಅದು ತಕ್ಷಣವೇ ಎಲ್ಲ ಬಣ್ಣಗಳ ಸಾಮೂಹಿಕ ಜಮಾವಣೆಗಳನ್ನು ನಿಷೇಧಿಸಬೇಕು; ಚುನಾವಣಾ ಸಭೆಗಳಲ್ಲಿ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿಯಂತ್ರಿಸಬೇಕು; ಎಲ್ಲ ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ಉಚಿತವಾಗಿ ಹೋಗಲು ವಿಶೇಷ ರೈಲುಗಳನ್ನು ವ್ಯವಸ್ಥೆ ಮಾಡಬೇಕು; ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಲು ಹೆಚ್ಚುವರಿ ಸಂಪನ್ಮೂಲಗಳನ್ನು ಮತ್ತು ಪಿಎಂ ಕೇರ್ಸ್ ನಲ್ಲಿ ಸಂಗ್ರಹವಾಗಿರುವ ಎಲ್ಲ ನಿಧಿಗಳನ್ನು ಒದಗಿಸಬೇಕು ಮತ್ತು ಸಾಮೂಹಿಕ ಲಸಿಕೆ ನೀಡಿಕೆಯನ್ನು ತುರ್ತಾಗಿ ತೀವ್ರಗೊಳಿಸಬೆಕು.

ಈ ಸನ್ನಿವೇಶ ಜನಗಳ ಜೀವನೋಪಾಯಗಳ ಪರಿಸ್ಥಿತಿಗಳನ್ನು ಕೂಡ ಉಲ್ಬಣಗೊಳಿಸುತ್ತಿದೆ ಮತ್ತು ಹೆಚ್ಚಿನ ಸಂಕಟಗಳನ್ನು ಹೇರುತ್ತಿದೆ. ಸರಕಾರ ತಕ್ಷಣವೇ ತಿಂಗಳಿಗೆ ರೂ.7500ರೂ. ನೇರ ನಗದು ವರ್ಗಾವಣೆ ಮತ್ತು ಅಗತ್ಯವಿರುವ ಎಲ್ಲರಿಗೆ ಆಹಾರ ಧಾನ್ಯಗಳ ಉಚಿತ ವಿತರಣೆ ಮೂಲಕ ಜನಗಳಿಗೆ ಪರಿಹಾರ ಒದಗಿಸಬೇಕು, ಮತ್ತು ಮನರೇಗ ಕಾರ್ಯಕ್ರಮವನ್ನು ವಿಶಾಲವಾಗಿ ವಿಸ್ತರಿಸಬೇಕು. ಆದಷ್ಟು ಬೇಗನೇ ಒಂದು ನಗರ ಉದ್ಯೋಗ ಖಾತ್ರಿ ಕಾರ್ಯಕ್ರಮವನ್ನು ಕೂಡ ಆರಂಭಿಸಬೇಕು

ಇವು ತಕ್ಷಣವೇ ಕೈಗೊಳ್ಳಬೇಕಾದ ಕನಿಷ್ಟ ಕ್ರಮಗಳು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ಕ್ರಮಗಳನ್ನಾದರೂ ಯುದ್ಧೋಪಾದಿಯಲ್ಲಿ ಜಾರಿಗೊಳಿಸಬೇಕು ಎಂದು ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರಕಾರವನ್ನು ಆಗ್ರಹಿಸಿದೆ.



ಭಾರತದ ಎರಡನೇ ಅಲೆ ಮೊದಲನೆಯದಕ್ಕಿಂತ ಕೆಟ್ಟದಾಗಿರುತ್ತದೆ: ವಿಜ್ಞಾನಿಗಳ ಎಚ್ಚರಿಕೆ

ಪುಟ 12 ನೋಡಿ

ಭಾರತದ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಬೇಕು

"ಮೋದಿ ಸರಕಾರಕ್ಕೆ ಆತ್ಮಗೌರವ ಇದ್ದರೆ 'ಕ್ವಾಡ್'ನಿಂದ ಹೊರ ಬರಬೇಕು"

ಅಮೆರಿಕಾದ ನೌಕಾಪಡೆಯ ಏಳನೇ ಫ್ಲೀಟಿನ(ಹಡಗುಪಡೆಯು) ಯುದ್ಧ ಹಡಗು ಲಕ್ಷದ್ವೀಪದ ಕರಾವಳಿಯಲ್ಲಿ ಭಾರತದ ಸ್ವಂತ ಆರ್ಥಿಕ ವಲಯ(ಇ.ಇ.ಝಡ್)ದೊಳಗೆ ಅತಿಕ್ರಮಣ ಮಾಡಿರುವುದು ಭಾರತದ ಸಾರ್ವಭೌಮತೆಗೆ ಒಂದು ಅನಪೇಕ್ಷಿತ ಸವಾಲು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಈ ಕಾರ್ಯಾಚರಣೆ "ಭಾರತದ ಸಮುದ್ರ ಸಂಬಂಧಿ ಮಿತಿಮೀರಿದ ದಾವೆಗಳಿಗೆ ಸವಾಲು ಹಾಕಲಿಕ್ಕಾಗಿ" ಎಂಬ ಏಳನೇ ಫ್ಲೀಟಿನ ಹೇಳಿಕೆ ಸ್ಪಷ್ಟವಾಗಿದೆ.

ಅಮೆರಿಕ ಸಂಯುಕ್ತ ಸಂಸ್ಥಾನ ನಾಚಿಕೆಯಿಲ್ಲದೆ ಧೂರ್ತತನ ಪ್ರದರ್ಶಿಸುತ್ತಿದೆ. ವಿಶ್ವ ಸಂಸ್ಥೆಯ ಸಮುದ್ರಗಳ ಕಾನೂನಿನ ಕುರಿತ ಅಧಿನಿರ್ಣಯಕ್ಕೆ ಭಾರತ ಸಹಿ ಹಾಕಿದೆ, ಆದರೆ ಅಮೆರಿಕ ಸಹಿ ಹಾಕಿಲ್ಲ. ಆದರೂ ಈ ಅಂತರ್ರಾಷ್ಟ್ರೀಯ ಕಾನೂನಿನ ಪ್ರಕಾರ ವರ್ತಿಸುತ್ತಿರುವುದಾಗಿ ಹೇಳಿಕೊಂಡಿದೆ.

ಇಂತಹ ವೈರತ್ವದ ಕ್ರಮಕ್ಕೆ ಮೋದಿ ಸರಕಾರದ ಸ್ಪಂದನೆಯೆಂದರೆ ಭಾರತದ ಇ.ಇ.ಝಡ್ ನೊಳಗಿಂದ ಮಿಲಿಟರಿ ಹಡಗುಗಳು ಹೋಗುವುದಕ್ಕೆ ಭಾರತದ ಸಮ್ಮತಿಯನ್ನು ಪಡೆಯಬೇಕು ಎಂದು ಮೆದುವಾಗಿ ಹೇಳಿರುವುದು. ಆದರೆ ಅಮೆರಿಕ ಇದನ್ನು ಒಪ್ಪಿಕೊಳ್ಳಲು ನಿರಾಕರಿಸಿದೆ.

ಕ್ವಾಡ್‌ಮೈತ್ರಿಕೂಟ ಸೇರಿಕೊಂಡು ಮೋದಿ ಸರಕಾರ ಅಮೆರಿಕನ್‌ಹಿತಗಳನ್ನು ಈಡೇರಿಸಲು ತನ್ನನ್ನು ತಾನೇ ಬದ್ಧಗೊಳಿಸಿಕೊಂಡಿದೆ, ಭಾರತ–ಶಾಂತಸಾಗರ ಪ್ರದೇಶದಲ್ಲಿ "ನೌಕಾಯಾನದ ಸ್ವಾತಂತ್ರ್ಯ'ವೆಂಬ ಅಮೆರಿಕನ್ ಸೂತ್ರೀಕರಣವನ್ನು ಒಪ್ಪಿಕೊಂಡು ತನ್ನ ಸ್ವಂತ ನಿಲುವನ್ನು ಬಿಟ್ಟುಕೊಟ್ಟಿದೆ.

ಅಮೆರಿಕಾದ ಸಶಸ್ತ್ರ ಪಡೆಗಳು ಭಾರತವನ್ನು ಅಮೆರಿಕಾದ ಪ್ರಾದೇಶಿಕ ಮಾಂಡಲಿಕನಂತೆ ಕಾಣುತ್ತಿದೆ. ಇದೀಗ ಅದರ ಏಳನೇ ಹಡಗುಪಡೆ ಕೊಟ್ಟಿರುವ ಸಂದೇಶ ಎಂದು ವಿಶ್ಲೇಷಿಸಿರುವ ಸಿಪಿ(ಎಂ) ಪೊಲಿಟ್ ಬ್ಯುರೊ, ಮೋದಿ ಸರಕಾರಕ್ಕೆ ಏನಾದರೂ ಆತ್ಮಗೌರವ ಎಂಬುದು ಇದ್ದರೆ ಮತ್ತು ಭಾರತದ ಸಾರ್ವಭೌಮತೆಯ ಬಗ್ಗೆ ಗೌರವ ಇದ್ದರೆ, ಅದು ತಕ್ಷಣವೇ ಕ್ವಾಡ್ ಮೈತ್ರಿಕೂಟದಿಂದ ಹೊರ ಬರಬೇಕು ಎಂದು ಹೇಳಿದೆ.

ಗ್ಯಾನವಾಪಿ ಮಸೀದಿ: ಸಿವಿಲ್ ಕೋರ್ಟಿನ ಆದೇಶ ಕಾನೂನಿನ ಉಲ್ಲಂಘನೆ

ವಾರಣಾಸಿಯ ಸಿವಿಲ್ ನ್ಯಾಯಾಲಯವೊಂದು ಅಲ್ಲಿರುವ ಗ್ಯಾನವಾಪಿ ಮಸೀದಿಯಿದ್ದಲ್ಲಿ ಒಂದು ದೇವಸ್ಥಾನ ಅಸ್ತಿತ್ವದಲ್ಲಿ ಇತ್ತೇ ಎಂದು ಖಚಿತ ಪಡಿಸಿಕೊಳ್ಳಲು ಒಂದು ಸರ್ವೇ ನಡೆಸಬೇಕು ಎಂದು ಭಾರತದ ಪುರಾತತ್ವ ಸರ್ವೇ (ಆರ್ಕಿಯೊಲಾಜಿಕಲ್ ಸರ್ವೆ ಆಫ್ ಇಂಡಿಯ –ಎ.ಎಸ್.ಐ.)ಗೆ ಆದೇಶ ನೀಡಿರುವುದು ಈ ವಿಷಯದಲ್ಲಿ ಈಗಿರುವ ಕಾನೂನಿನ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಪ್ರತಿಕ್ರಿಯಿಸಿದೆ.

ಪೂಜಾಸ್ಥಳಗಳು (ವಿಶೇಷ ಉಪಬಂಧಗಳು) ಕಾಯ್ದೆ ಇಂಥ ಎಲ್ಲ ಪೂಜಾಸ್ಥಳಗಳಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ವಿಧಿಸುತ್ತದೆ. ಆದ್ದರಿಂದ ಉನ್ನತ ನ್ಯಾಯಾಂಗ ತಕ್ಷಣವೇ ಮಧ್ಯಪ್ರವೇಶಿಸಿ ಕೆಳಗಣ ಕೋರ್ಟಿನ ಆದೇಶವನ್ನು ತೊಡೆದು ಹಾಕಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಆಗ್ರಹಿಸಿದೆ.



ಕೇಂದ್ರ ಸರಕಾರಕ್ಕೆ ಮತ್ತೊಮ್ಮೆ ರೈತರ ಎಚ್ಚರಿಕೆ

ಮೂರು ಕೃಷಿ ಕಾಯ್ದೆಗಳ ವಿರುದ್ಧ ನಾಲ್ಕೂವರೆ ತಿಂಗಳಿಂದ ಹೋರಾಡುತ್ತಿರುವ ರೈತರು ದಿಲ್ಲಿ ರಾಜಧಾನಿ ಪ್ರದೇಶದ ಜೀವನರೇಖೆಯಾದ ಪಶ್ಚಿಮ ಹೊರವಲಯ ಹೆದ್ದಾರಿ ಅಥವ ಕುಂಡ್ಲಿ– ಮನೇಸರ್–ಪಲ್ವಲ್ (ಕೆಎಂಪಿ) ಹೆದ್ದಾರಿ ತಡೆ ನಡೆಸಿ ಕೇಂದ್ರ ಸರಕಾರಕ್ಕೆ ಮತ್ತೊಂದು ಎಚ್ಚರಿಕೆ ಕೊಟ್ಟರು

ಸಂಯುಕ್ತ ಕಿಸಾನ್ ಮೋರ್ಚಾದ ಕರೆಯ ಮೇರೆಗೆ ಎಪ್ರಿಲ್ 10 ರಂದು ನಿಗದಿತ ಬೆಳಿಗ್ಯೆ 8 ಗಂಟೆಯ ಮೊದಲೇ ನೆರದ ರೈತರು ಈ ಹೆದ್ದಾರಿಯಲ್ಲಿ ಹೋಗುವ ಎಲ್ಲ ಓಡಾಟಗಳನ್ನು ಸ್ಥಬ್ಧಗೊಳಿಸಿದರು, ಕೇವಲ ಅಂಬ್ಯುಲೆನ್ಸ್ ಮತ್ತಿತರ ತುರ್ತು ವಾಹನಗಳಿಗೆ ಮಾತ್ರ ಅವಕಾಶ ಕೊಟ್ಟರು. ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಹಿರಿಯ ಮತ್ತು ಮಹಿಳಾ ರೈತರನ್ನು ಸುಡುಬಿಸಿಲಿನಲ್ಲಿ ತಂಪಾಗಿಡಲು ಪಾನಕಗಳನ್ನು ಹಂಚುತ್ತ ಇಡೀದಿನ ರಸ್ತೆ ತಡೆ ನಡೆಯುವಂತೆ ಮಾಡಿದರು.

ಸರಕಾರ ತಬ್ಬಿಬ್ಬುಗೊಂಡಿದೆ

ಹೆದ್ದಾರಿ ತಡೆಯಲ್ಲಿ ಭಾಗವಹಿಸಿದ್ದವರನ್ನು ಉದ್ದೇಶಿಸಿ ಮಾತಾಡುತ್ತ ರೈತ ಮುಖಂಡರು ಕೇಂದ್ರೀಯ ಏಜೆಂಸಿಗಳ ಬಂಟರು ಚಳುವಳಿಗೆ ಕೆಟ್ಟ ಹೆಸರು ತರಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ, ಈ ಬಗ್ಗೆ ಎಚ್ಚರದಿಂದಿರಬೇಕು ಎಂದರು. "ಸುಮಾರು ಐದು ತಿಂಗಳ ಕಾಲ ಈ ಹೋರಾಟವನ್ನು ಯಶಸ್ವಿಯಾಗಿ ನಡೆಸುತ್ತಿದ್ದೇವೆ, ಈ ಹೋರಾಟ ಪಂಜಾಬ್–ಹರ್ಯಾಣಗಳ ಎಲ್ಲೆ ಮೀರಿ ಇಡೀ ದೇಶವನ್ನು ವ್ಯಾಪಿಸಿದೆ. ಇದು ಸರಕಾರವನ್ನು ತಬ್ಬಿಬ್ಬುಗೊಳಿಸಿದೆ, ಚುನಾವಣಾ ಫಲಿತಾಂಶಗಳ ನಂತರ ದಾಳಿಗಳು ಇನ್ನಷ್ಟು ಹೆಚ್ಚಲಿವೆ, ಇದಕ್ಕೆ ಸಿದ್ಧವಾಗಿರಬೇಕು" ಎಂದರು.

ಮೊತ್ತಮೊದಲ ಬಾರಿಗೆ ಕಾರ್ಪೊರೇಟ್‌ಗಳ ವಿರುದ್ಧ ಇಂತಹ ಸಮರವನ್ನು ಇಡೀ ಜಗತ್ತು ಹೆಮ್ಮೆ ಮತ್ತು ಆಶಾಭಾವನೆಯಿಂದ ನೋಡುತ್ತಿದೆ. ಈ ಆಂದೋಲನ ಜಾತಿ, ಧರ್ಮ, ಪ್ರದೇಶಗಳನ್ನು ಮೀರಿ ಜನಗಳನ್ನು ಒಂದುಗೂಡಿಸಿದೆ. ಹೊಡೆದು, ಬಡಿದು, ಚಚ್ಚಿ, ಅಜೇಯ ಎನಿಸಿಕೊಂಡು ಮುಂದೊತ್ತುತ್ತಿದ್ದ ಹಿಂದುತ್ವ ಪಡೆಗಳನ್ನು ತಡೆದು ನಿಲ್ಲಿಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ಹೇಳಿದರು.

ಇದು ಒಂದು ರಾಜ್ಯಕ್ಕೆ ಮಾತ್ರ ಸೇರಿದ ಚಳುವಳಿ ಎಂದಿದ್ದವರು ಕೃಷಿ ಕಾಯ್ದೆಗಳ ಜಾರಿಯನ್ನು ಮಾಡಲಾಗಲಿಲ್ಲ. ಈಗ ಕಾರ್ಮಿಕ ಸಂಹಿತೆಗಳನ್ನೂ ಜಾರಿ ಮಾಡಲಾಗಿಲ್ಲ. ರಸಗೊಬ್ಬರ ಬೆಲೆಯೇರಿಕೆಗಳನ್ನೂ ತಡೆಹಿಡಿಯಬೇಕಾಗಿ ಬಂದಿದೆ. ಆಧ್ದರಿಂದ ಬಿಕ್ಕಟ್ಟಿನಲ್ಲಿರುವುದು ಈ ಹೋರಾಟವಲ್ಲ, ಸರಕಾರವೇ ಎಂಬುದು ಅವರ ವಿಶ್ಲೇಷಣೆ.

ದಲಿತರನ್ನು ಎತ್ತಿಕಟ್ಟುವ ಹುನ್ನಾರ

ಎಪ್ರಿಲ್ 14 ರಂದು ಸಿಂಘು ಗಡಿಯ ಬಳಿ ಹರ್ಯಾಣದ ಮುಖ್ಯಮಂತ್ರಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಯೋಜಿಸಿತ್ತು. ಉಪಮುಖ್ಯಂತ್ರಿಗಳು ಕೂಡ ಇನ್ನೊಂದೆಡೆಯಲ್ಲಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದರು. ಬಿಜೆಪಿ–ಜೆಜೆಪಿ ಶಾಸಕರನ್ನು ಬಹಿಷ್ಕರಿಸಲು ರೈತ ಸಂಘಟನೆಗಳು ಕರೆ ನೀಡಿರುವುದನ್ನು ಅವರು ದಲಿತ–ವಿರೋಧಿಗಳು ಎಂದು ಚಿತ್ರಿಸಲು ಬಳಸುವ ಹುನ್ನಾರವಿದು. ಎಂದು ರೈತ ಸಂಘಟನೆಗಳು ಕರೆ ನೀಡಿದವು.

ಸಂಯುಕ್ತ ಕಿಸಾನ್ ಮೋರ್ಚಾದ ಕರೆಯಂತೆ ದಿಲ್ಲಿ ಗಡಿಗಳಲ್ಲಿ ಎಪ್ರಿಲ್ 13 ರಂದು ಪಂಜಾಬ್ ಮತ್ತು ಹರ್ಯಾಣದ ರೈತರು ಬೈಸಾಖಿ ಹಬ್ಬವನ್ನು ಆಚರಿಸಿದರು ಮತ್ತು ಎಪ್ರಿಲ್ 14 ರಂದು ಅಂಬೇಡ್ಕರ್ ಜಯಂತಿಯನ್ನು ಆಚರಿಸಿದರು ಎಂದೂ ವರದಿಯಾಗಿದೆ.

ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರಕ್ಕೆ ಸಿಐಟಿಯು ಬೆಂಬಲ

ರಾಜ್ಯ ಸರಕಾರ ದಮನಕಾರೀ ಕ್ರಮಗಳನ್ನು ಕೈಬಿಟ್ಟು ಬೇಡಿಕೆಗಳನ್ನು ಇತ್ಯರ್ಥಗೊಳಿಸಬೇಕು

ಬಹಳ ದಿನಗಳಿಂದ ಇತ್ಯರ್ಥವಗದೇ ಉಳಿದಿರುವ ವೇತನ ಪರಿಷ್ಕರಣೆಯನ್ನು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಕೆ ನೌಕರರು ನಡೆಸುತ್ತಿರುವ ಮುಷ್ಕರಕ್ಕೆ ಸಿಐಟಿಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದೆ. ಈ ಪ್ರಶ್ನೆಯ ಇತ್ಯರ್ಥಕ್ಕೆ ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ನೌಕರರು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸರಕಾರ ದೊಡನೆಯೂ ಸರ್ವಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಸಂಬಂಧಪಟ್ಟವರ ನಕಾರಾತ್ಮಕ ನಿಲುವಿನಿಂದಾಗಿ ಏನೂ ಅಗಿಲ್ಲವದ್ದರಿಂದ ನೌಕರರು ನಿರ್ವಾಹವಿಲ್ಲದೆ ಮುಷ್ಲರ ಕಾರ್ಯಾಚರಣೆಗೆ ಇಳಿಯಲೇ ಬೇಕಾಗಿ ಬಂದಿದೆ.

ಅತ್ಯಂತ ದುರದೃಷ್ಟದ ಸಂಗತಿಯೆಂದರೆ, ಮುಷ್ಕರನಿರತ ನೌಕರರು ಮತ್ತು ಸಂಘಗಳೊಡನೆ ದ್ವಿಪಕ್ಷೀಯ ಸಂವಾದ/ ಮಾತುಕತೆಗಳ ಮೂಲಕ ಇತ್ಯರ್ಥ ಮಾಡುವ ಬದಲು ಕರ್ನಾಟಕದ ಬಿಜೆಪಿ ಸರಕಾರ ಮುಷ್ಕರ ಮುರಿಯಲು ದಮನಕಾರೀ ಕ್ರಮಕ್ಕಿಳಿದಿದ್ದಾರೆ. ನೌಕರರನ್ನು ಸರ್ವಾಧಿಕಾರಶಾಹೀ ರೀತಿಯಲ್ಲಿ ಪೀಡಿಸುತ್ತಿದೆ. ರಾಜ್ಯಾದ್ಯಂತ ಮುಷ್ಕರ ವಿರುದ್ಧ ಪ್ರತಿಬಂಧಕ ಆದೇಶಗಳನ್ನು ಹೇರಲಾಗಿದೆ. ಖಾಸಗಿ ಸಾರಿಗೆಯುವರನ್ನು ಈ ಮುಷ್ಕರವನ್ನು ಮುರಿಯಲಿಕ್ಕಾಗಿ ಬಳಸಲು ಸರಕಾರ ಮುಂದಾಗಿದೆ. ಆದರೆ ನೌಕರರ ಬೇಡಿಕೆಗಳ ಬಗ್ಗೆ ನ್ಯಾಯಬದ್ಧ ಚರ್ಚೆಗಳನ್ನು ಆರಂಭಿಸಲು ಸರಕಾರವೂ, ಕೆಎಸ್‌ಆರ್‌ಟಿಸಿಯೂ ಮುತುವರ್ಜಿ ವಹಿಸಿಲ್ಲ.

ಆದ್ದರಿಂದ ಕರ್ನಾಟಕದ ಕಾರ್ಮಿಕರು, ಕಾರ್ಮಿಕ ಸಂಘಗಳು ಮತ್ತು ಜನತೆ ಮುಷ್ಕರನಿರತ ನೌಕರರಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂದಿರುವ ಸಿಐಟಿಯು, ರಾಜ್ಯದ ಮುಖ್ಯಮಂತ್ರಿಗಳು ತುರ್ತಾಗಿ ಮಧ್ಯಪ್ರವೇಶಿಸಬೇಕು, ಎಲ್ಲಾ ನಿಷೇಧ ಹೇರುವ, ದಮನ ಮಾಡುವ, ಹಗೆಸಾಧಕ ಕ್ರಮಗಳನ್ನು ಹಿಂತೆಗೆದುಕೊಳ್ಳಬೇಕು, ಒಂದು ಸಕಾರಾತ್ಮಕ ನಿಲುವಿನೊಂದಿಗೆ ಮುಷ್ಕರನಿರತ ಕಾರ್ಮಿಕರು ಮತ್ತು ಅವರ ಸಂಘಟನೆಗಳೊಂದಿಗೆ ಮುಕ್ತ ಚರ್ಚೆ ನಡೆಸಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ರಾಜ್ಯ ರಸ್ತೆ ಸಾರಿಗೆ ನೌಕರರ ಚರಿತ್ರಾರ್ಹ ಮುಷ್ಕರಕ್ಕೆ ಜನಬೆಂಬಲ ಹರಿದು ಬರಲಿ

ಆರನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಜಾರಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರ ಅನಿರ್ದಿಷ್ಟವಾಗಿ ಮುಂದುವರೆದಿದೆ. ಯಡಿಯೂರಪ್ಪ ಸರ್ಕಾರದ ಬೆದರಿಕೆಗಳಿಗೆ ಸೊಪ್ಪು ಹಾಕದೆ ಇದು ತಮ್ಮ ಜೀವನ್ಮರಣದ ಹೋರಾಟ ಎಂಬಂತೆ ಹೋರಾಡುತ್ತಿರುವ ಸಾವಿರಾರು ನೌಕರರು ಮತ್ತು ಅವರ ಕುಟುಂಬಗಳ ಸದಸ್ಯರಿಗೆ ನಾಡಿನ ಜನರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬೇಕು. ಸಾರಿಗೆ ನೌಕರರು ಬಹುದಿನಗಳಿಂದ ಅದುಮಿಟ್ಟ ಅತೃಪ್ತಿ ಸ್ಫೋಟಗೊಂಡಂತೆ ಕಾಣುತ್ತದೆ. ಇದರಿಂದ ರಾಜ್ಯಾದ್ಯಂತ ಬಸ್ ಪ್ರಯಾಣಿಕರು ಬಾರೀ ಬವಣೆ ಅನುಭವಿಸಿವಂತಾಗಿರುವುದು ನಿಜ. ಸರ್ಕಾರಿ ಬಸ್ಸುಗಳನ್ನೇ ಅವಲಂಬಿಸಿರುವ ಜನಸಾಮಾನ್ಯರ ಗೋಳು ಹೇಳತೀರದಾಗಿದೆ. ಈ ನಡುವೆ ರಾಜ್ಯ ಬಿಜೆಪಿ ಸರ್ಕಾರದ ಹಠಮಾರಿ ಧೋರಣೆಯನ್ನು ಯಾರೂ ಬೆಂಬಲಿಸುವ ಪರಿಸ್ಥಿತಿ ಉಳಿದಿಲ್ಲ.

ಹೋರಾಟಗಳ ನಡುವೆಯೇ ತಾನು ಬೆಳೆದು ಬಂದವನು ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಯಡಿಯೂರಪ್ಪ ಶ್ರಮಿಕರ ಹೋರಾಟಗಳನ್ನು ದಮನ ಮಾಡುವುದೇ ತನ್ನ ಪ್ರವೃತ್ತಿ ಎಂದು ಹಲವು ಬಾರಿ ಪ್ರದರ್ಶಿಸಿದ್ದಾರೆ. ಜನರ ಹೋರಾಟಗಳಿಗೆ ಸ್ಪಂದಿಸುವ ಕಿಂಚಿತ್ತೂ ಮಾನವೀಯತೆ ಅವರಲ್ಲಿ ಇಲ್ಲ. ಮುಷ್ಕರ ಕೈಬಿಡದೆ ಮಾತುಕತೆ ಸಾಧ್ಯವಿಲ್ಲ ಎಂದು ಬಿಗಿಪಟ್ಟು ಹಿಡಿದಿದ್ದಾರೆ. ನೂರಾರು ನೌಕರರನ್ನು ಶಿಸ್ತುಕ್ರಮಕ್ಕೆ ಒಳಪಡಿಸಿ ಕೆಲಸದಿಂದ ವಜಾ ಮಾಡಿದ್ದಾರೆ. ಯುಗಾದಿ ಹಬ್ಬದ ಸಂದರ್ಭದಲ್ಲಿ ಸಂಬಳವನ್ನು ನಿರಾಕರಿಸಿ ಕ್ರೌರ್ಯವನ್ನು ಮೆರೆದಿದ್ದಾರೆ. ಸೇಡಿನ ಕ್ರಮವಾಗಿ ನೌಕರರನ್ನು ಮನಬಂದಂತೆ ವರ್ಗಾವಣೆ ಮಾಡಿದ್ದಾರೆ. ಅನೇಕ ಮಂದಿ ನೌಕರರನ್ನು ಬಂಧಿಸಿ ಮಾನಸಿಕ ಕ್ಷೋಭೆಗೆ ಒಳಪಡಿಸಿದ್ದಾರೆ. ಕೆಲವು ನೌಕರರು ಈಗಾಗಲೇ ಬೇರೆ ದಾರಿ ಕಾಣದಂತಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ನೌಕರರ ಹೆಂಡರು ಮಕ್ಕಳ ಗೋಳು ಹೇಳತೀರದಾಗಿದೆ. ಊಟದ ಖಾಲಿ ತಟ್ಟೆಗಳನ್ನು ಬಾರಿಸುತ್ತಾ ಬೀದಿಗಳಲ್ಲಿ ಭಿಕ್ಷಾಟನೆ ಮಾಡಿದ್ದಾರೆ. ಅವರೊಂದಿಗೆ ಸಾರ್ವಜನಿಕರು ಸೇರಿಕೊಂಡು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಸಾರಿಗೆ ನೌಕರರ ಬದುಕನ್ನು ಕತ್ತಲಲ್ಲಿ ಇಟ್ಟಿರುವ ಸರ್ಕಾರದ ಕರಾಳ ನಡೆಯನ್ನು ಖಂಡಿಸಿ ಮೇಣದಬತ್ತಿ ಹಿಡಿದು ಪ್ರತಿಭಟನೆ ಮಾಡಿದ್ದಾರೆ. ರಾಜ್ಯದ ಎಲ್ಲಾ ಶಾಸಕರ ಮನೆ ಮುಂದೆ ಪಕ್ಷಾತೀತವಾಗಿ ಧರಣಿ ನಡೆಸಿದ್ದಾರೆ. ಆದರೆ ಇದು ಯಾವುದೂ ಕಲ್ಲು ಹೃದಯದ ಮುಖ್ಯಮಂತ್ರಿಗೆ ತಟ್ಟದಿರುವುದು ನಾಡಿನ ದುರಂತ.



ಇವರಂತಹ ಮನುಷ್ಯತ್ವವಿಲ್ಲದೆ ಮನುಷ್ಯರು ಅಧಿಕಾರಕ್ಕೆ ಬಂದರೆ ಏನೆಲ್ಲಾ ಆಗಬಹುದು, ದೇಶದಲ್ಲಿ ಆಗಬಹುದು ಎಂಬುದನ್ನು ನಾವೆಲ್ಲರೂ ನೋಡಿದಂತಾಯಿತು. ನಮ್ಮನ್ನು ಆತ್ಮಹತ್ಯೆಗೆ ನೂಕಬೇಡ ಎಂದು ಕೂಗುವ ನೇಗಿಲಯೋಗಿಗಳು ಕಳೆದ ಕೆಲವು ತಿಂಗಳು ಗಳಿಂದ ದೇಶದ ರಾಜಧಾನಿಗೆ ಪ್ರವೇಶ ನಿರಾಕರಿಸಲ್ಪಟ್ಟು ದೆಹಲಿ ಗಡಿಗಳಲ್ಲಿ ಕುಟುಂಬಸಮೇತರಾಗಿ ಅತ್ಯಂತ ಶಾಂತಿಯಿಂದ ಧರಣಿ ನಡೆಸುತ್ತಿದ್ದರೂ ಪ್ರಧಾನಿ ಮೋದಿಯವರು ಕರಗಲಿಲ್ಲ. ರಾಜ್ಯದಲ್ಲಿ ಸಾರಿಗೆ ನೌಕರರ ಮುಷ್ಕರ ಅದೇ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿದೆ.

ಶೋಷಿತರು, ದಮನಿತರು ನ್ಯಾಯಕ್ಕಾಗಿ ಹೋರಾಡುವುದು ಸಂವಿಧಾನ ಕೊಡಮಾಡಿದ ಹಕ್ಕು. ನಮ್ಮ ಸಂವಿಧಾನ ಉಳಿಯುವುದು, ಗಟ್ಟಿಗೊಳ್ಳುವುದು ಜನಪರ ಹೋರಾಟಗಳಿಂದ ಮಾತ್ರ. ಪ್ರಜಾಪ್ರಭುತ್ವವನ್ನು ಉಳಿಸಲು ರೈತರು, ಕಾರ್ಮಿಕರು, ಎಲ್ಲರೂ ಹೋರಾಡಬೇಕು. ಜನಪರ ಹೋರಾಟಗಳ ಧ್ವನಿ ಅಡಗಿದರೆ ಪ್ರಜಾಪ್ರಭುತ್ವ ಸಾಯುತ್ತದೆ, ಸರ್ವಾಧಿಕಾರ ತಲೆ ಎತ್ತುತ್ತದೆ. ಸರ್ವಾಧಿಕಾರ ತಲೆ ಎತ್ತುವುದನ್ನು ನಡೆಯಲು ಜನ ಚಳುವಳಿ ಜೀವಂತವಾಗಿರಬೇಕು. ರೈತರ ಚಳುವಳಿ, ಕಾರ್ಮಿಕ ವರ್ಗದ ಚಳುವಳಿ ನಾವೆಲ್ಲರೂ ಕೂಡಿ ನಡೆಸಬೇಕಾದ ಚಳುವಳಿ. ದೆಹಲಿ ಗಡಿಯಲ್ಲಿ ಚರಿತ್ರೆಯನ್ನು ಬರೆಯುತ್ತಿರುವ ಚಳುವಳಿಗೆ ದೇಶದೆಲ್ಲೆಡೆ ಜನಬೆಂಬಲ ಹರಿದು ಬರಬೇಕು. ಅದರಂತೆಯೇ ರಾಜ್ಯದಲ್ಲಿ ನಡೆಯುತ್ತಿರುವ ಸಾರಿಗೆ ನೌಕರರ ಚಳುವಳಿಗೆ ವಿಶಾಲವಾದ ಬೆಂಬಲ ವ್ಯಕ್ತವಾಗಬೇಕು. ಸಾರ್ವಜನಿಕರಿಗೆ ಏನೇ ಅನಾನುಕೂಲತೆ ಉಂಟಾದರೂ ಜನಪರ ಚಳುವಳಿಗೆ ನಾವು ಬೆಂಬಲವಾಗಿ ನಿಲ್ಲಬೇಕು. ಸರ್ಕಾರಗಳ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಬೇಕು.

ರಾಜ್ಯದ ರಸ್ತೆ ಸಾರಿಗೆ ಸಾರ್ವಜನಿಕ ರಂಗದ ಉದ್ದಿಮೆ. ಲಾಭ ಗಳಿಕೆ ಅದರ ಉದ್ದೇಶವಾಗಿರಬಾರದು. ಖಾಸಗೀಕರಣ ಅದರ ಪರಿಹಾರವಲ್ಲ. ನೆಗಡಿ ಬಂದಿದೆ ಎನ್ನುವ ಕಾರಣಕ್ಕೆ ಯಡಿಯೂರಪ್ಪ ರವರು ಮೂಗನ್ನೇ ಕತ್ತರಿಸುತ್ತಾರೊ? ಸಾರಿಗೆ ನೌಕರರಿಗೆ ಕೊಟ್ಟಮಾತಿನಂತೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸೌಹಾರ್ದ ಪ್ರಯತ್ನ ಮಾಡಿದರೆ ಇಂದು ನೌಕರರು ತಮ್ಮ ಬೇಡಿಕೆಗಳ ಬಗ್ಗೆ ಬಿಗಿ ಪಟ್ಟು ಹಿಡಿಯುವ ಪರಿಸ್ಥಿತಿ ಬರುತ್ತಿರಲಿಲ್ಲ. ಸಮಸ್ಯೆಗೆ ಮಾತುಕತೆ ಮೂಲಕವೇ ಪರಿಹಾರ ಕಂಡುಕೊಳ್ಳಬೇಕು ನೌಕರರನ್ನು ಬೆದರಿಸುವ, ಅವರನ್ನು ವಸತಿ ನಿಲಯ ಗಳಿಂದ ಹೊರಹಾಕುವ ಪ್ರಯತ್ನ ಸರ್ಕಾರಕ್ಕೆ ತಿರುಗುಬಾಣವಾಗದೆ ಇರಲಾರದು. ಕಾರ್ಮಿಕ ಕಾನೂನು, ಕಾರ್ಮಿಕ ನ್ಯಾಯಾಲಯಗಳನ್ನು ಬಳಸಿ ಮುಷ್ಕರವನ್ನು ನಿಷೇಧಿಸುವ ಪ್ರಯತ್ನವೂ ಸಹ ಸರ್ಕಾರದ ದೌರ್ಜನ್ಯದ ಕ್ರಮವಾಗಿ ಚರಿತ್ರೆಯಲ್ಲಿ ದಾಖಲಾಗುವುದು. ಯಡಿಯೂರಪ್ಪ ರವರ ಚರಿತ್ರೆ ಒಬ್ಬ ನಿರಂಕುಶ ಆಡಳಿತಗಾರನ ಚರಿತ್ರೆಯಾಗಿ ಮುಂದಿನ ನಮ್ಮ ಪೀಳಿಗೆಗೆ ಅಧ್ಯಯನಕ್ಕೊಂದು ಪಾಠವಾಗಲಿದೆ. ಇನ್ನೂ ಕಾಲ ಮಿಂಚಿಲ್ಲ ಜನ ಪಾಠ ಕಲಿಸುವ ಒಳಗಾಗಿ ಮುಖ್ಯಮಂತ್ರಿ ಯಡಿಯೂರಪ್ಪ ತನ್ನ ತಪ್ಪು ತಿದ್ದಿಕೊಳ್ಳಬೇಕು. ಸಾರಿಗೆ ನೌಕರರ ಪ್ರಶ್ನೆ ಇತ್ಯರ್ಥವಾಗಬೇಕು. ಸಾರಿಗೆ ನೌಕರರಿಗೆ ನಮ್ಮೆಲ್ಲರ ಬೆಂಬಲ.

ಸರ್ವಪಕ್ಷಗಳ ಸಭೆ: ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಬಹಿರಂಗ ಪತ್ರ

ತಡವಾಗಿಯಾದರೂ ತಾವು ಸರ್ವ ಪಕ್ಷಗಳ ಸಮಾಲೋಚನಾ ಸಭೆ ಕರೆದಿರುವುದು ಸ್ವಾಗತಾರ್ಹ ವಿಚಾರ. ಆದರೆ ಸರಕಾರದ ದೋಷ ಪೂರಿತ ತಿಳುವಳಿಕೆಯಂತೆ, ವಿಧಾನಸಭೆ ಹಾಗೂ ಪರಿಷತ್, ಪಾರ್ಲಿಮೆಂಟ್ ನಲ್ಲಿ ಚುನಾಯಿತ ಸದಸ್ಯರನ್ನು ಹೊಂದಿದ ಪಕ್ಷಗಳು ಮಾತ್ರವೇ ಈ ಸಭೆಯಲ್ಲಿ ಪಾಲ್ಗೊಳ್ಳಬೇಕು ಎಂಬುದಾಗಿರುವುದರಿಂದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಈ ಪತ್ರ ಬರೆಯಬೇಕಾಗಿ ಬಂದಿದೆ.

ಕರ್ನಾಟಕ ರಾಜ್ಯ ಮತ್ತೊಮ್ಮೆ ಕೋವಿಡ್ – 19 ರ ಎರಡನೇ ಅಲೆಯ ಬಾಧೆಗೊಳಗಾಗುತ್ತಿರುವುದು ತೀವ್ರ ನೋವಿನ ಸಂಗತಿಯಾಗಿದೆ. ಮಾಹಿತಿಯಂತೆ, ನಿನ್ನೆ ದಿನ ಸುಮಾರು 8,777 ಹೊಸ ಸೋಂಕಿತರು ಕಂಡು ಬಂದಿದ್ದಾರೆ. ಕಳೆದೆರಡು ವಾರಗಳಿಂದ ಸೋಂಕಿತರ ಸಂಖ್ಯೆ ಬೆಳೆಯುತ್ತಲೇ ಇದೆ. ಸಾವುಗಳ ಸಂಖ್ಯೆಯು ಬೆಳೆಯುತ್ತಲೇ ಇದೆ.

ಆದರೇ, ಕೋವಿಡ್ – 19 ಎರಡನೇ ಅಲೆಯ ಸೋಂಕಿನ ಬೆಳವಣಿಗೆಯನ್ನು ತಮ್ಮ ಸರಕಾರವು ಕೇವಲ ತೋರಿಕೆಯ ಆತಂಕದಿಂದ ಗಮನಿಸುತ್ತಿರುವುದನ್ನು ಬಿಟ್ಟರೆ, ಅದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಕೈಗೊಂಡ ಕ್ರಮಗಳು ಏನೇನು ಇಲ್ಲವಾಗಿದೆ. ಜಗತ್ತಿನ ಅನುಭವದಂತೆ ಮಾರ್ಪಾಟುಗೊಂಡ ಅಥವಾ ಎರಡನೇ ಅಲೆಯ ವೈರಾಣು ದಾಳಿ ನಿಯಂತ್ರಿಸಲು, ಅದನ್ನು ಎದುರಿಸಲು ಬೇಕಾದ ಸಿದ್ಧತೆಯನ್ನು ತಮ್ಮ ಸರಕಾರ ಮಾಡಿಕೊಳ್ಳಲಿಲ್ಲ. ಕಳೆದ ವರ್ಷದ ದಾಳಿಯ ಅನುಭವವನ್ನು ಕ್ರೋಢೀಕರಿಸಿಕೊಂಡು ಆರೋಗ್ಯ ಇಲಾಖೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳನ್ನು ಬಲ ಪಡಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈಗ ಬೆಳೆಯುತ್ತಿರುವ ಸೋಂಕಿತರ ಸಂಖ್ಯೆಗೆ ಅನುಸಾರವಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಮತ್ತು ವೆಂಟಿಲೇಟರ್‌ಗಳು ದೊರೆಯುತ್ತಿಲ್ಲವೆಂಬುದು ಸೋಂಕಿತರ ಹಾಗೂ ಅವರ ಕುಟುಂಬದ ಸದಸ್ಯರ ಅಳಲಾಗಿದೆ. ಇದರಿಂದಾಗಿ ಹಲವು ಸೋಂಕಿತರು ಮರಣ ಹೊಂದಿದ್ದಾರೆ. ಖಾಸಗಿ ಆಸ್ಪತ್ರೆಗಳು, ಜನಗಳ ಈ ದುಸ್ಥಿತಿಯನ್ನು ಬಳಸಿಕೊಂಡು ಸುಲಿಗೆಗೆ ನಿಂತಿವೆಯೆಂದರೆ ತಪ್ಪಾಗಲಾರದು.

ಇದರಿಂದಾಗಿ, ರಾಜ್ಯದ ನಾಗರಿಕರಲ್ಲಿ ಮತ್ತಷ್ಟು ಭೀತಿಯುಂಟಾಗಿದೆ. ಮೊದಲೇ ರಾಜ್ಯವು ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಜೊತೆಗೆ ಕಳೆದ ಎರಡು–ಮೂರು ವರ್ಷಗಳ ಬರಗಾಲ ಮತ್ತು ಪ್ರವಾಹಗಳು ಇನ್ನಷ್ಟು ಸಂಕಷ್ಟಗಳನ್ನು ಜನತೆಯ ಮೇಲೆ ಅದಾಗಲೇ ಹೇರಿದ್ದವು. ಕಳೆದ ವರ್ಷದಿಂದ ಈ ಕೋವಿಡ್ ಬಾಧೆ, ಅವೈಜ್ಞಾನಿಕ ಲಾಕ್ ಡೌನ್ ಅದರ ದುಷ್ಪರಿಣಾಮಗಳು ಮತ್ತು ಇದೀಗ ಮುಂದುವರೆದ ವೈರಸ್ ದಾಳಿ ರಾಜ್ಯವನ್ನು ನಲುಗುವಂತೆ ಮಾಡಿದೆ. ಇಂತಹ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಅಗತ್ಯ ಪರಿಹಾರದ ಕ್ರಮಗಳನ್ನು ಕೈಗೊಳ್ಳುವಂತೆ ಸಿಪಿಐ(ಎಂ) ಹಾಗೂ ನಾಗರೀಕರು ನಿರಂತರ ಒತ್ತಾಯ ಮಾಡುತ್ತಾ ಬಂದರೂ ತಮ್ಮ ಸರಕಾರ ಆ ಕುರಿತು ಗಮನವನ್ನೇ ಹರಿಸಲಿಲ್ಲ.

ಇದರಿಂದಾಗಿ, ಜನತೆಯ ಸಂಕಷ್ಟಗಳನ್ನು, ಅವರುಗಳೇ ಪರಿಹರಿಸಿಕೊಳ್ಳುವಂತೆ ಅವರ ಮೇಲೆಯೇ ನಿರ್ದಯಿಯಾಗಿ ತಮ್ಮ ಸರಕಾರ ಬಿಟ್ಟು ಬಿಟ್ಟುದರಿಂದ ಸಾಮಾನ್ಯರು, ಬಡವರು, ತಮ್ಮ ಬಳಿ ಇದ್ದ ಸಣ್ಣ ಪುಟ್ಟ ಆಸ್ತಿಗಳನ್ನು ಉಳ್ಳವರಿಗೆ ದುಬಾರಿ ಬಡ್ಡಿಯ ಸಾಲಕ್ಕಾಗಿ ಮಾರಾಟ ಮಾಡುತ್ತಿದ್ದಾರೆ. ಸಾಲಬಾಧಿತರಾಗಿದ್ದಾರೆ. ಇದರಿಂದ ಶ್ರೀಮಂತರು ಭಾರೀ ಶ್ರೀಮಂತರಾದರೆ, ಬಡವರು ಮತ್ತಷ್ಟು ಕಡುಬಡವರಾಗುತ್ತಿದ್ದಾರೆ.

ಈಗ ರಾಜ್ಯವು ಮರಳಿ ಮತ್ತಷ್ಟು ದುಸ್ಥಿತಿಯ ಕಡೆ ಚಲಿಸುವಂತಾಗಿದೆ. ಒಂದೆರಡು ತಿಂಗಳಿನಿಂದ ಉದ್ಯೋಗ ಅರಸಿ ಹೊರಟಿದ್ದ ವಲಸೆ ಕಾರ್ಮಿಕರು, ಬೆಳೆಯುತ್ತಿರುವ ಸೋಂಕಿನ ಕಾರಣದಿಂದ ಆತಂಕಗೊಂಡು ಮರಳಿ ಸ್ವಂತ ಊರುಗಳ ಕಡೆ ಮುಖ ಮಾಡುತ್ತಿದ್ದಾರೆ. ನಿರುದ್ಯೋಗ ಮತ್ತೊಮ್ಮೆ ಬೃಹದಾಕಾರವಾಗಿ ಬೆಳೆಯುವ ಲಕ್ಷಣ ಕಂಡು ಬರುತ್ತಿದೆ.

ಮತ್ತೊಂದು ಕಡೆ, ತಮ್ಮ ಹಾಗೂ ಕೇಂದ್ರ ಸರಕಾರಗಳು ಜಾರಿ ಮಾಡುತ್ತಿರುವ ಲೂಟಿ ಕೋರ ಕಾರ್ಪೋರೇಟ್ ಪರವಾದ ನೀತಿಗಳು, ಜನತೆಯನ್ನು ಇನ್ನಷ್ಟು ಆತಂಕಿತರನ್ನಾಗಿಸಿ ಇಂತಹ ವೈರಾಣು ದಾಳಿಯ ನಡುವೆಯೂ ಅವರು ಬೀದಿಗಿಳಿಯುವಂತೆ ಬಲವಂತ ಮಾಡಿದೆ.

ಆದ್ದರಿಂದ, ರಾಜ್ಯವನ್ನು ಇಂತಹ ದುಸ್ಥಿತಿಯಿಂದ ಮತ್ತು ತೀವ್ರತರವಾದ ಆತಂಕಗಳಿಂದ ಮೇಲೆತ್ತಲು ಮತ್ತು ಈ ಸಂಕಷ್ಟಗಳನ್ನು ಜನತೆ ಐಕ್ಯತೆಯಿಂದ ಎದುರಿಸುವಂತಾಗಲು, ಈ ಕೂಡಲೇ,

ರೈತರು ಹಾಗೂ ಕಾರ್ಮಿಕರ ಮತ್ತು ನಾಗರಿಕರ ವಿರೋಧಿಯಾದ ಕಾರ್ಮಿಕ ಸಂಹಿತೆಗಳು ಮತ್ತು ಕೃಷಿ ಕಾಯ್ದೆಗಳು, ಭೂಸುಧಾರಣಾ ತಿದ್ದುಪಡಿ ಕಾಯ್ದೆ – 2020, ಎಪಿಎಂಸಿ ತಿದ್ದುಪಡಿ ಕಾಯ್ದೆ– 2020, ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ – 2020 ಹಾಗೂ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ ಮತ್ತು ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಗಳನ್ನು ತಕ್ಷಣ ವಾಪಾಸು ಪಡೆಯಬೇಕು.

ಅಲ್ಲದೇ, ರಾಜ್ಯದಲ್ಲಿ ಕೋವಿಡ್ ತುರ್ತು ಸ್ಥಿತಿಯನ್ನು ಘೋಷಿಸಿ ಕೆಳಕಂಡ ಕ್ರಮಗಳನ್ನು

ಪುಟ 5 ಕ್ಕೆ

ಸಾರಿಗೆ ನೌಕರರ ಹೋರಾಟಕ್ಕೆ ಆಂಧ್ರ ಸಾರಿಗೆ ನೌಕರರ ಸಂಘದ ಬೆಂಬಲ



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಕೂಡಲೇ ರಾಜ್ಯದ ಮುಖ್ಯಮಂತ್ರಿಗಳು ಮಧ್ಯಪ್ರವೇಶಕ್ಕೆ ಆಂಧ್ರಪ್ರದೇಶ ಸಾರಿಗೆ ನೌಕರರ ಫೆಡರೇಷನ್ ಆಗ್ರಹಿಸಿದೆ.

ಕಳೆದ ಹತ್ತು ದಿನಗಳಿಂದ ಬಿಎಂಟಿಸಿ ಒಳಗೊಂಡು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ನಾಲ್ಕು ನಿಗಮಗಳ ನೌಕರರು ನಡೆಸುತ್ತಿರುವ ಅನಿರ್ದಿಷ್ಟ ಮುಷ್ಕರವನ್ನು ಇತ್ಯರ್ಥಗೊಳಿಸಲು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಿ.ಎಸ್ ಯಡಿಯೂರಪ್ಪನವರು ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆ ಇತ್ಯರ್ಥಪಡಿಸಬೇಕೆಂದು ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಸಿಐಟಿಯು ಸಂಯೋಜಿತ) ಆಗ್ರಹಪಡಿಸಿದೆ ಮತ್ತು ಸಾರಿಗೆ ನೌಕರರ ಹೋರಾಟಕ್ಕೆ ಅದು ತನ್ನ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದೆ.

ಇಂದು ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಸಿಐಟಿಯು ಸಂಯೋಜಿತ) ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್ ಸುಂದರಯ್ಯ, ರಾಜ್ಯ ಉಪ ಪ್ರಧಾನ ಕಾರ್ಯದರ್ಶಿ ಕಟ್ಟಾಸುಬ್ರಮಣ್ಯ, ರಾಜ್ಯ ಸಮಿತಿ ಸದಸ್ಯರಾದ ಯಾಕೂಬ್ ಖಾನ್, ಆರ್ ಪ್ರವೀಣ್ ಕುಮಾರ್ ಅವರನ್ನೊಳಗೊಂಡ ನಿಯೋಗ ಬೆಂಗಳೂರಿನ ಮೆಜೆಸ್ಟಿಕ್ ಮತ್ತು ಶಾಂತಿನಗರ ಬಸ್ ಡಿಪೋ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿತು.

ಎಚ್.ಸುಂದರಯ್ಯ ಅವರು ಮಾತನಾಡಿ, ಆಂಧ್ರಪ್ರದೇಶದ ರಸ್ತೆ ಸಾರಿಗೆ ನಿಗಮಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರು ಸದ್ಯ ಅಲ್ಲಿನ ಸರಕಾರಿ ನೌಕರರಗಿಂತ ಉತ್ತಮ ವೇತನ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಅಲ್ಲಿನ ಸಾರಿಗೆ ನೌಕರರು ಕಾರ್ಮಿಕ ಕಾಯ್ದೆಯ ಪ್ರಾವಾಧಾನಗಳ ಅಡಿಯಲ್ಲಿರುವ ಸಾಮೂಹಿಕ ಚೌಕಾಸಿ ಹಕ್ಕಿನ ಅವಕಾಶಗಳನ್ನು ಬಳಸಿಕೊಂಡು ಹಾಲಿ 2019 ಫೆಬ್ರವರಿ 6 ರಿಂದಲೇ 11ನೇ ವೇತನ ಒಪ್ಪಂದದ ಅನ್ವಯ ಶೇ 25 ರಷ್ಟು ವೇತನ ಹೆಚ್ಚಳ ಒಪ್ಪಂದ ಮಾಡಿಕೊಂಡಿದ್ದಾರೆ ಮತ್ತು ಮತ್ತು ಇನ್ನೂ ಕೆಲವೇ ತಿಂಗಳುಗಳಲ್ಲಿ 12ನೇ ವೇತನ ಒಪ್ಪಂದದ ಅನ್ವಯ ಶೇ 34 ರಿಂದ 35 ರಷ್ಟು ವೇತನ ಒಪ್ಪಂದ ಮಾಡಿಕೊಳ್ಳುವ ತಯಾರಿಯಲ್ಲಿದ್ದಾರೆ ಎಂದು ಹೇಳಿದರು.

ಕಟ್ಟಾಸುಬ್ರಮಣ್ಯ ಅವರು ಮಾತನಾಡಿ, ವೈದ್ಯಕೀಯ ಸೌಲಭ್ಯಗಳ ವಿಚಾರದಲ್ಲೂ ಕೂಡ ಆಂಧ್ರದ ಸರ್ಕಾರಿ ನೌಕರರಿಗಿಂತ ಸಾರಿಗೆ ನೌಕರರು ಒಂದು ಹೆಜ್ಜೆ ಮುಂದೆ ಇದ್ದಾರೆ. ಮಾತ್ರವಲ್ಲ ಮಹಿಳಾ ಸಬಲೀಕರಣದ ಭಾಗವಾಗಿ ಸಾರಿಗೆ ನಿಗಮಗಳಲ್ಲಿ ಕೆಲಸ ಮಾಡುವ ಮಹಿಳಾ ನಿರ್ವಾಹಿಯಕಿಯರು ಪುರುಷ ನಿರ್ವಾಹಕರಿಗಿಂತ ವಾರ್ಷಿಕ 5 ವೇತನ ಸಹಿತ ಹೆಚ್ಚುವರಿ ರಜೆಗಳನ್ನು ಈಗ ಪಡೆಯುತ್ತಿದ್ದಾರೆ. ಜೊತೆಗೆ ಆಂಧ್ರ ಪ್ರದೇಶ ಸರ್ಕಾರ ಅಲ್ಲಿನ ಸಾರಿಗೆ ನೌಕರರನ್ನು ಸರಕಾರಿ ನೌಕರರನ್ನಾಗಿ ಸೇರ್ಪಡೆ ಮಾಡಿಕೊಂಡಿರುವುದರಿಂದ 2021 ಏಪ್ರಿಲ್ ನಿಂದ ಅವರು ಕಾರ್ಮಿಕರ ಸಂಘಗಳ ಹಕ್ಕುಗಳನ್ನು ಕಳೆದುಕೊಂಡರೂ ಸರ್ಕಾರಿ ವೇತನವನ್ನು ಪಡೆಯುವ ಕಾತುರತೆಯಲ್ಲಿದ್ದಾರೆ. ಇನ್ನು ಮುಂದೆ ಆಂಧ್ರ ಸರಕಾರ ವಾರ್ಷಿಕವಾಗಿ ರೂ 3600 ಕೋಟಿಯಷ್ಟು ಹಣವನ್ನು ಸಾರಿಗೆ ನೌಕರರ ವೇತನಕ್ಕಾಗಿ ಬಜೆಟ್ ನಲ್ಲಿ ಮೀಸಲಿಡಲಿದೆ ಅಲ್ಲದೆ ಗ್ರಾಮೀಣ ಸೇವೆ ಸಲ್ಲಿಸುವ ಸಾರಿಗೆ ವಾಹನಗಳ ತೆರಿಗೆಯನ್ನು ರಾಜ್ಯ ಸರ್ಕಾರ ರದ್ದು ಭರವಸೆ ನೀಡಿದೆ. ಇದೆಲ್ಲವೂ ಸಾಧ್ಯವಾಗಿದ್ದು ಆಂಧ್ರ ಪ್ರದೇಶ ಸಾರಿಗೆ ನೌಕರರ ಐಕ್ಯ ಹೋರಾಟದಿಂದ ಎಂದು ವಿವರಣೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ರಾಜ್ಯ ಅಧ್ಯಕ್ಷರಾದ ಹೆಚ್.ಡಿ. ರೇವಪ್ಪ ಅವರು ಮಾತನಾಡಿ ಆಂಧ್ರ ಪ್ರದೇಶದ ಸಾರಿಗೆ ನೌಕರರ ವೇತನ, ಭತ್ಯೆ ಮತ್ತು ಇತರೆ ಸೌಲಭ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದ ಸಾರಿಗೆ ನೌಕರರ ಪರಿಸ್ಥಿತಿ ಹೀನಾಯ ಸ್ಥಿತಿಯಲ್ಲಿದೆ. ಅತ್ಯಂತ ಕಡಿಮೆ ವೇತನ ಭತ್ಯೆಗಳು ಮಾತ್ರವಲ್ಲ, ಅಧಿಕಾರಿಗಳಿಂದ ನೌಕರರಿಗೆ ಅದರಲ್ಲೂ ಮಹಿಳಾ ನೌಕರರಿಗೆ ನಿತ್ಯ ಕಿರುಕುಳ, ಕೆಲಸ ನಿರಾಕರಣೆ, ವಿವಿಧ ರೀತಿಯ ದಂಡಗಳ ಹಿಂಸೆಗಳು, ದೌರ್ಜನ್ಯ ಮತ್ತು ವ್ಯಾಪಕವಾದ ಭ್ರಷ್ಟಾಚಾರದಂತಹ ಪ್ರಕರಣಗಳು ವರದಿಯಾಗುತ್ತಲೇ ಇವೆ ಈ ಒತ್ತಡ ತಾಳಲಾರದೇ ಹಲವಾರು ನೌಕರರು ಆತ್ಮಹತ್ಯೆಗೆ ಶರಣಾಗುತ್ತಿರುವುದು ಅತ್ಯಂತ ಕಳವಳದ ಸಂಗತಿ.

ಇಂತಹ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರಕಾರ ಮತ್ತು ಸಾರಿಗೆ ನಿಗಮಗಳ ಹಿರಿಯ ಅಧಿಕಾರಿಗಳು ವಿಫವಾಗಿದ್ದಾರೆ. ಇದರಿಂದಾಗಿ ತೀವ್ರ ಬೇಸರ, ಆಕ್ರೋಶ ಇಲ್ಲಿನ ನೌಕರರಲ್ಲಿ ಮಡುಗಟ್ಟಿರುವ ಪರಿಣಾಮವೇ ಇವತ್ತು ಸರಕಾರ ಎದುರಿಸುತ್ತಿರುವ ಈ ಅನಿರ್ದಿಷ್ಟ ಪ್ರತಿಭಟನೆಯಾಗಿದೆ.

ಯಾಕೂಬ್ ಖಾನ್ ಕರ್ನಾಟಕ ರಾಜ್ಯ ಸರಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಅನಿರ್ದಿಷ್ಟವಾದ ಹೋರಾಟವನ್ನು ಅಂತ್ಯಗೊಳಿಸಲು ಕೂಡಲೇ ಸಾರಿಗೆ ನಿಗಮಗಳಲ್ಲಿ ಕ್ರಿಯಾಶೀಲವಾಗಿರುವ ಮತ್ತು ನೊಂದಾವಣೆಯಾಗಿರುವ ಎಲ್ಲಾ ನೌಕರರ ಸಂಘಗಳ ಜೊತೆ ಮಾತುಕತೆ ನಡೆಸಿ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿರುವ ಕರ್ನಾಟಕ ಸಾರಿಗೆ ನೌಕರರ ಬದುಕನ್ನು ಉತ್ತಮಪಡಿಸಲು ಬೇಕಾದ ಹಣಕಾಸಿನ ನೆರವನ್ನು ಪ್ರಕಟಿಸಬೇಕೆಂದು ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಸಿಐಟಿಯು ಸಂಯೋಜಿತ) ರಾಜ್ಯ ಸರ್ಕಾರವನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರಲ್ಲಿ ಆಗ್ರಹಪೂರ್ವಕ ವಿನಂತಿ ಮಾಡುತ್ತದೆ ಮತ್ತು ಹೋರಾಟ ನಿರತ ಸಾರಿಗೆ ನೌಕರರು ಮತು ಅವರ ಕುಟುಂಬಗಳ ಜೊತೆ ತನ್ನ ಸೌಹಾರ್ದಯುತ ಬೆಂಬಲವನ್ನು ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಸಿಐಟಿಯು ಸಂಯೋಜಿತ) ವ್ಯಕ್ತಪಡಿಸುತ್ತದೆ ಎಂದರು.

ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಬೆಂಗಳೂರಿನ ವಿವಿಧ ಡಿಪೋಗಳಿಗೆ ಭೇಟಿ ನೀಡಿದ ನಂತರ ಸಿಐಟಿಯು ರಾಜ್ಯ ಸಮಿತಿ ಕಚೇರಿಗೆ ತೆರಳಿ ಅಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ಮತ್ತು ಸಿಐಟಿಯು ರಾಜ್ಯ ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.

ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮಗಳ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್(ಸಿಐಟಿಯು ಸಂಯೋಜಿತ) ನಿಯೋಗದ ಜೊತೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ರಾಜ್ಯ ಅಧ್ಯಕ್ಷರಾದ ಹೆಚ್.ಡಿ. ರೇವಪ್ಪ ಮತ್ತು ಜಂಟಿ ಕಾರ್ಯದರ್ಶಿ ಚಂದ್ರಪ್ಪ ರಾಜ್ಯದ ಪರವಾಗಿ ಮಾತುಕತೆ ನಡೆಸಿದರು. ■

ಕೋವಿಡ್ ಎರಡನೇ ಅಲೆ: ಅತ್ತ ಅಂತ್ಯ ಸಂಸ್ಕಾರಕ್ಕೆ ಕ್ಯೂ, ಇತ್ತ ಬೆಡ್‌ಗಳ ಕೊರತೆ

ಗುರುರಾಜ್ ದೇಸಾಯಿ

ಬೆಂಗಳೂರು: ಕೊರೊನಾ ಎರಡನೇ ಎಲೆ ಶುರುವಾಗಿದ್ದು, ಜನರಲ್ಲಿ ಮತ್ತೆ ಭಯ ಹುಟ್ಟಿದೆ. ರಾಜ್ಯದಲ್ಲಿ ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಜೊತೆಗೆ ಮರಣ ಸಂಖ್ಯೆಯೂ ಹೆಚ್ಚಳವಾಗುತ್ತಿದೆ. ರಾಜ್ಯದ ರಾಜಧಾನಿಯಲ್ಲಿ ಕೊರೊನಾ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ ಹೆಚ್ಚಾದ ಪರಿಣಾಮ ಚಿತಾಗಾರದ ಎದುರು ಮೃತದೇಹಗಳ ಅಂತ್ಯಸಂಸ್ಕಾರಕ್ಕೆ ಕ್ಯೂ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೊಂದೆಡೆ ಬೆಡ್‌ಗಳ ಕೊರತೆ ಉಂಟಾಗಿದ್ದು, ಜನರನ್ನು ಮತ್ತಷ್ಟು ಆತಂಕಕ್ಕೆ ತಳ್ಳುತ್ತಿದೆ.

ನಿನ್ನೆ ಒಂದೇ ದಿನ 55 ಮಂದಿ ಕೊರೊನಾಗೆ ಬಲಿಯಾಗಿದ್ದರು. ಮೃತಪಟ್ಟವರ ಅಂತ್ಯಸಂಸ್ಕಾರ ಮಾಡಲು ಯಲಹಂಕದ ಮೇಡಿ ಅಗ್ರಹಾರದಲ್ಲಿ ಸರತಿ ಸಾಲಿನಲ್ಲಿ ನಿಲ್ಲಬೇಕಾಗಿದೆ. ಸುಮನಹಳ್ಳಿ ಚಿತಾಗಾರದಲ್ಲೂ ಅಂತ್ಯಕ್ರಿಯೆಗೆ ಕಾಯುವ ಸ್ಥಿತಿ ಎದುರಾಗಿದೆ. ಬೆಂಗಳೂರಿನಲ್ಲಿ 10 ದಿನದಿಂದ ಸಾವಿನ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಚಿತಾಗಾರಗಳಲ್ಲಿ ನಮಗೆ ಯಾವುದೇ ಸುರಕ್ಷತೆ ಇಲ್ಲ ಎಂದು ಚಿತಾಗಾರದ ಸಿಬ್ಬಂದಿ ರವಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಜನವರಿಯ ಇಡೀ ತಿಂಗಳಿನಲ್ಲಿ 66 ಜನ ಸೋಂಕಿತರು ಸಾವನ್ನಪ್ಪಿದ್ದರು. ಫೆಬ್ರವರಿ ತಿಂಗಳಲ್ಲಿ 88 ಜನ ಮೃತಪಟ್ಟಿದ್ದರು. ಹಾಗೂ ಮಾರ್ಚ್ ಇಡೀ ತಿಂಗಳಿನಲ್ಲಿ 147 ಜನ ಸೋಂಕಿತರು ಬಲಿಯಾಗಿದ್ದರು. ಆದರೆ ಏಪ್ರಿಲ್ ತಿಂಗಳ 13ಕ್ಕೆ ಅಂದ್ರೆ ಕೇವಲ 13 ದಿನದಲ್ಲಿ 280 ಜನ



ಸೋಂಕಿತರು ಮೃತಪಟ್ಟಿದ್ದಾರೆ. ತಿಂಗಳಾಂತ್ಯಕ್ಕೆ ಸಾವಿನ ಸಂಖ್ಯೆ ಒಂದು ಸಾವಿರ ಸೋಂಕಿತರು ಬಲಿಯಾಗಬಹುದೆಂದು ಅಂದಾಜಿಸಲಾಗಿದೆ.

ಹೆಚ್ಚಾಗುತ್ತಿದೆ ಬೆಡ್ ಸಮಸ್ಯೆ:

ನಗರದಲ್ಲಿ ಕೊರೋನಾ ಸೋಂಕಿತರ ಚಿಕಿತ್ಸೆಗಾಗಿ 2,119 ಹಾಸಿಗೆಗಳನ್ನು ಮಾತ್ರ ಮೀಸಲಿಡಲಾಗಿದೆ. ಈ ಪೈಕಿ ಈಗಾಗಲೇ 1,635 ಭರ್ತಿಯಾಗಿದ್ದು, 484 ಮಾತ್ರ ಖಾಲಿ ಇವೆ. ಇವುಗಳಲ್ಲಿ ಬಹುತೇಕ ಸಾಮಾನ್ಯ ಬೆಡ್‌ಗಳು ಮಾತ್ರ ಖಾಲಿ ಇವೆ. ಐಸಿಯು ಹಾಗೂ ವೆಂಟಿಲೇಟರ್ ಸಹಿತ ಐಸಿಯು ಬೆಡ್‌ಗಳು ಲಭ್ಯತೆ ಇಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ 3,584 ಖಾಸಗಿ ಬೆಡ್ ವ್ಯವಸ್ಥೆ ಮಾಡಿರುವುದಾಗಿ ಹೇಳುತ್ತಿದ್ದರೂ ಕೇವಲ ಕಾಗದಕ್ಕೆ ಸೀಮಿತವಾಗಿದೆ.

ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಆಸ್ಪತ್ರೆಗಳಲ್ಲಿ ಬೆಡ್‌ಗಳ ಸಮಸ್ಯೆ ತಲೆದೋರಿದೆ. ಸಮಸ್ಯೆಯನ್ನ ಅರಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಖಾಸಗಿ ಆಸ್ಪತ್ರೆಗಳ ಪಕ್ಕದ ಹೋಟೆಲ್ ಗಳನ್ನ ಕೊರೊನಾ ಕೇರ್ ಸೆಂಟರ್, ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ಮುಂದಾಗಿದೆ.

ಈ ಸಂಬಂಧ ಖಾಸಗಿ ಆಸ್ಪತ್ರೆಗಳ ಅಸೋಸಿಯೇಷನ್ ಹಾಗೂ ಹೋಟೆಲ್ ಅಸೋಸಿಯೇಷನ್ ಜೊತೆ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಈಗಾಗಲೇ ಎರಡು ಹೋಟೆಲ್‌ಗಳನ್ನ ಕೊರೊನಾ ಕೇರ್ ಸೆಂಟರ್‌ಗಳಾಗಿ ಪರಿವರ್ತಿಸಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೋಟೆಲ್ ಗಳನ್ನ ಪರಿವರ್ತಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ 50 ರಿಂದ 100 ಹಾಸಿಗೆ ಸಾಮರ್ಥ್ಯವಿರುವ ಹೋಟೆಲ್‌ಗಳನ್ನ ಗುರುತಿಸಲಾಗಿದೆ.



ಪ್ರತಿ ಹೋಟೆಲ್‌ನಲ್ಲಿ ಖಾಸಗಿ ಆಸ್ಪತ್ರೆಯಿಂದ ಓರ್ವ ನರ್ಸ್ ಹಾಗೂ ವೈದ್ಯರನ್ನ ವ್ಯವಸ್ಥೆ ಮಾಡಲಾಗುತ್ತದೆ. ಆಂಬ್ಯುಲೆನ್ಸ್, ಸೋಂಕಿತರಿಗೆ ಸರಿಯಾದ ಊಟದ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಇನ್ನೆರಡು ದಿನದಲ್ಲಿ ಇನ್ನಷ್ಟು ಹೋಟೆಲ್‌ಗಳನ್ನ ಗುರುತಿಸುವುದಾಗಿ ಹೋಟೆಲ್ ಮಾಲೀಕರ ಸಂಘ ತಿಳಿಸಿದೆ. ಇದರ ನಿರ್ವಹಣೆಗಾಗಿ ಖಾಸಗಿ ಆಸ್ಪತ್ರೆ, ಹೋಟೆಲ್ ಅಸೋಸಿಯೇಷನ್ ಹಾಗೂ ಬಿಬಿಎಂಪಿ ಅಧಿಕಾರಿಗಳ ಕಮಿಟಿ ಕೂಡ ರಚನೆಯಾಗಿದೆ. ಬಿಬಿಎಂಪಿ ವಿಶೇಷ ಆಯುಕ್ತ ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ ಡಾ.ವಿಜಯೇಂದ್ರ, ಫಾನಾ ಅಧ್ಯಕ್ಷ ಡಾ. ಹೆಚ್. ಎಂ.ಪ್ರಸನ್ನ, ಫಾನಾ ಸದಸ್ಯ ರವೀಂದ್ರ, ಹೋಟೆಲ್ ಸಂಘದ ಅಧ್ಯಕ್ಷ ಪಿ.ಸಿ.ರಾವ್, ಮಧುಕರ್ ಶೆಟ್ಟಿ ಈ ಸಮಿತಿಯಲ್ಲಿದ್ದಾರೆ. ಆ ಹೋಟೆಲ್ ಕಮ್ ಕೇರ್ ಸೆಂಟರ್‌ಗಳಲ್ಲಿ ಎಸಿಮ್‌ಟಮ್ಯಾಟಿಕ್ ಸೋಂಕಿತರಿಗೆ ಆರೈಕೆ ಮಾಡಲು ವ್ಯವಸ್ಥೆ ಮಾಡಲಾಗುತ್ತದೆ. ■



ಆಳುವ ಸರ್ಕಾರ ಇಂದು ಉಳ್ಳವರ ಪರವಿದೆ: ಎಸ್ ವರಲಕ್ಷ್ಮಿ

ಆಳುವ ಸರಕಾರಗಳು ಉಳ್ಳವರ ಪರ ಇರುವ ಕಾರಣದಿಂದಾಗಿ ಇಂದು ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಸಂಕಷ್ಟಕ್ಕೆ ತಳ್ಳುತ್ತಿದ್ದಾರೆ. ಕೇಂದ್ರ, ರಾಜ್ಯ ಸರಕಾರಗಳು ಅಂಗನವಾಡಿಯನ್ನು ನಿರ್ಲಕ್ಷ್ಯ ಮಾಡುತ್ತಿವೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಆರೋಪಿಸಿದರು.

ದಾಂಡೇಲಿಯ ಅಂಬೇಡ್ಕರ್ ಭವನದಲ್ಲಿ ಮೂರು ದಿನಗಳ ಕಾಲ ನಡೆಯುವ ಅಂಗನವಾಡಿ ನೌಕರರ ರಾಜ್ಯ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಾ, ಸಂಕಷ್ಟದಲ್ಲಿ ಅಂಗನವಾಡಿ ನೌಕರರು ಸಮುದಾಯದ ಮಧ್ಯೆ ಕೆಲಸ ಮಾಡಿದ್ದನ್ನು ನಾವು ಇಲ್ಲಿ ಸ್ಮರಿಸಬೇಕು, ದೇಶದಲ್ಲಿ ಇಂದು ಉಳ್ಳವರ ಪರ ಇರುವ ಆಡಳಿತ ಪಕ್ಷ ಅಧಿಕಾರಕ್ಕೆ ಬಂದಿದೆ. ದೇಶದಲ್ಲಿ ಕೋವಿಡ್ ಬಾಧಿಸಿದ ಸಂದರ್ಭದಲ್ಲಿ ಜನಸಾಮಾನ್ಯರ ಜೊತೆಗೆ ನಿಲ್ಲಲಿಲ್ಲ, ಇಂದು ಕೂಲಿ ಕಾರ್ಮಿಕರು, ಕಾರ್ಮಿಕರು ಲಕ್ಷಾಂತರ ಸಂಖ್ಯೆಯಲ್ಲಿ ಹಾಗೂ ತಮ್ಮ ಆದಾಯವನ್ನು ಕಳೆದುಕೊಂಡಿದ್ದಾರೆ.

ಅಂಗನವಾಡಿ ನೌಕರರು ತಮ್ಮ ಪ್ರಾಣವನ್ನು ಲೆಕ್ಕಿಸದೆ ಕರ್ತವ್ಯ ನಿರ್ವಹಿಸಿದರು ಅವರಿಗೆ ಕೂಲಿ ಹೆಚ್ಚಳ ಮಾಡುವಲ್ಲಿ, ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ನಿರ್ಲಕ್ಷ ತಾಳಿದೆ. ಪೂರ್ವಯೋಜಿತವಾಗಿ ಹೋರಾಟ ಹತ್ತಿಕ್ಕುವ ಹೆಸರಿನಲ್ಲಿ ಆರ್ಥಿಕ ಬಿಕ್ಕಟ್ಟು ಎನ್ನುವ ಸರ್ಕಾರ ಶ್ರೀಮಂತರ ತೆರಿಗೆಯಲ್ಲಿ ರಿಯಾಯಿತಿ ನೀಡಿದೆ. ಅಂಬಾನಿ ಕುಟುಂಬದ ಆದಾಯ ದಿನಕ್ಕೆ 99 ಕೋಟಿಯಾಗಿದೆ. ಆದರೆ ದುಡಿಯುವ ಜನರಿಗೆ ಕೆಲಸವಿಲ್ಲ ಕೂಲಿ ಇಲ್ಲದೆ ಸಂಕಷ್ಟಕ್ಕೀಡು ಮಾಡಿದೆ. ಬಂಡವಾಳಶಾಹಿ ದೇಶಗಳಲ್ಲಿ ಕನಿಷ್ಠ ಕೂಲಿ ಹೆಚ್ಚಳ ಮಾಡಿದೆ ನಮ್ಮ ದೇಶದಲ್ಲಿ ಕೇವಲ 189 ರೂಪಾಯಿ ಒಂದು ದಿನಕ್ಕೆ ನಿಗದಿ ಮಾಡಿದ್ದಾರೆ. ಅಮೆರಿಕದಂಥ ದೇಶದಲ್ಲಿ ಒಂದು ಗಂಟೆಗೆ 15 ಡಾಲರ್ ನೀಡುತ್ತಾರೆ. ಅಂಗನವಾಡಿ ನೌಕರರು ಸರ್ಕಾರದ ಈ ನೀತಿಯನ್ನು ಅರಿಯಬೇಕಿದೆ ಎಂದರು.

ಅಂಗನವಾಡಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿಯಾದ ಹೆಚ್.ಎಸ್ ಸುನಂದ ರವರು ಪ್ರಸ್ತಾವಿಕವಾಗಿ ಮಾತನಾಡುತ್ತಾ, ಮೂರುದಿನಗಳ ಕಾಲ ನಡೆಯುವ ಅಧ್ಯಯನ ಶಿಬಿರದಲ್ಲಿ ಸಂಘಟನೆ ಬಲಪಡಿಸುವುದು, ಮುಂದನ ಹೋರಾಟದ ರೂಪರೇಷೆ ಕುರಿತು ಚರ್ಚಿಸಲಾಗುವುದು, ಜೊತೆಯಲ್ಲಿ ರಾಜ್ಯ, ರಾಷ್ಟದ ರಾಜಕೀಯ ಬೆಳವಣಿಗೆ ಕುರಿತು ಚರ್ಚಿಸಿ ದೇಶವನ್ನು ಕಟ್ಟುವಲ್ಲಿ ಅಂಗನವಾಡಿ ನೌಕರರು ಹೇಗೆ ತೊಡಗಿಸಿಕೊಳ್ಳಬೇಕು ಎಂದು ಅಧ್ಯಯನ ಶಿಬಿರದಲ್ಲಿ ಚರ್ಚಿಸಲಾಗುವುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉದಯ ನಾಯ್ಕ ಅವರು ವಹಿಸಿದ್ದು, ಮುಖ್ಯಅತಿಥಿಗಳಾಗಿ ಸಿಐಟಿಯು ಜಿಲ್ಲಾಧ್ಯಕ್ಷರಾದ ತಿಲಕ್ ಗೌಡರು, ಹರೀಶ್ ನಾಯ್ಕ, ಡಿ. ಸಾಮ್ಸನ್, ಡಾ. ಕೆ. ಪ್ರಕಾಶ್, ಶಾಂತಾ ಘಂಟಿ, ಉ ಕಮಲಾ, ಸಲೀಂ ಸಯ್ಯದ್ ಉಪಸ್ಥಿತರಿದ್ದರು. ವಿವಿಧ ಜಿಲ್ಲೆಗಳಿಂದ ನೂರಾರು ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ■

ಸರ್ವಪಕ್ಷಗಳ ಸಭೆ: ಮುಖ್ಯಮಂತ್ರಿಗಳಿಗೆ.......... ಪುಟ 3 ರಿಂದ

ಗಂಭೀರವಾಗಿ ಕೈಗೊಳ್ಳುವಂತೆ ಈ ಮೂಲಕ ಸಿಪಿಐ(ಎಂ) ಬಲವಾಗಿ ಒತ್ತಾಯಿಸುತ್ತದೆ.

ಕೋವಿಡ್ ಸೋಂಕಿತರಿಗೆ ಉಚಿತ ಆರೈಕೆ ಮತ್ತು ಚಿಕಿತ್ಸೆ ಒದಗಿಸಲು ಮತ್ತು ಖಾಸಗೀ ಆಸ್ಪತ್ರೆಗಳ ಸುಲಿಗೆಗಳಿಂದ ರಕ್ಷಿಸಲು ಎಲ್ಲಾ ಖಾಸಗೀ ಆಸ್ಪತ್ರೆಗಳನ್ನು ತಾತ್ಕಾಲಿಕವಾಗಿ ಸರಕಾರದ ವಶಕ್ಕೆ ಪಡೆಯಬೇಕು. ಎಲ್ಲಾ ಆಸ್ಪತ್ರೆಗಳಲ್ಲಿ ಅರ್ಧದಷ್ಟು ಹಾಸಿಗೆಗಳನ್ನು ಕೋವಿಡ್ ಬಾಧಿತರಿಗೆ ಮೀಸಲಿಡಬೇಕು. ಈ ಎಲ್ಲದರ ನಿರ್ವಹಣೆಗೆ ಅಗತ್ಯ ಸಿಬ್ಬಂದಿ, ಔಷಧಿ ಹಾಗೂ ಅದಕ್ಕಾಗಿ ಹಣಕಾಸು ನೆರವನ್ನು ಘೋಷಿಸಬೇಕು.ಅದಾಗಲೇ ಕೋವಿಡ್ ವ್ಯಾಕ್ಸಿನ್ ಮೊದಲ ಡೋಸ್ ಪಡೆದವರಿಗೆ ಎರಡನೇ ಡೋಸ್ ಸಮಯಕ್ಕೆ ದೊರೆಯುವಂತೆ ಮತ್ತು ವ್ಯಾಕ್ಸಿನ್ ಪಡೆಯುವವರಿಗೆ ವ್ಯಾಕ್ಸಿನ್ ಕೊರತೆಯಾಗದಂತೆ ಅಗತ್ಯ ಕ್ರಮವಹಿಸಬೇಕು.

ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳಿಗೆ ಮಾಸಿಕ 10,000 ರೂ. ಗಳ ಒದಗಿಸಬೇಕು. ಈ ಎಲ್ಲರಿಗೆ ತಲಾ 10 ಕೆ.ಜಿ. ಸಮಗ್ರ ಆಹಾರ ಧಾನ್ಯಗಳನ್ನು ಮತ್ತು ಕೋವಿಡ್ ಸುರಕ್ಷಿತ ಕ್ರಮಗಳನ್ನು ಕನಿಷ್ಟ ಮುಂದಿನ ಆರು ತಿಂಗಳವರೆಗೆ ಒದಗಿಸಬೇಕು. ಎಲ್ಲಾ ಸಾಮಾಜಿಕ ಪಿಂಚಣಿದಾರರ ಬಾಕಿ ಪಿಂಚಣಿಯನ್ನು ತಕ್ಷಣವೇ ಬಿಡುಗಡೆ ಮಾಡಬೇಕು.

ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಉತ್ಪಾದಕ ಘಟಕಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಕಾರ್ಮಿಕರಿಗೆ ವೇತನ ಸಹಿತ ರಜೆ ಘೋಷಿಸಬೇಕು. ಅಗತ್ಯ ಸೇವೆಯಲ್ಲೂ ಶೇ 50 ರಷ್ಟು ಸಿಬ್ಬಂದಿಯನ್ನು ಸುರಕ್ಷತಾ ಕ್ರಮಗಳೊಂದಿಗೆ ಬಳಸಬೇಕು.

ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ನೀಡಿ ಸರಕಾರವೇ ನೇರವಾಗಿ ಖರೀದಿಸಬೇಕು.

ಉದ್ಯೋಗ ಖಾತ್ರಿ ಕೆಲಸವನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಕೋವಿಡ್ ಸುರಕ್ಷತೆಯೊಂದಿಗೆ ಜಾರಿಗೊಳಿಸಲು ಕ್ರಮ ವಹಿಸಬೇಕು.

ವೃದ್ಧರು ಅಂಗವಿಕಲರು, ಒಂಟಿ ಜೀವನ ನಡೆಸುವ ಅಸಹಾಯಕರುಗಳನ್ನು ಗುರುತಿಸಿ ಅವರಿಗೆ ನೇರ ಊಟದ ಪಾಕೇಟ್ ಗಳನ್ನು ವಹಿಸಲು ಕ್ರಮ ಕೈಗೊಳ್ಳಬೇಕು.

ಆದಾಯ ತೆರಿಗೆ ವ್ಯಾಪ್ತಿಗೆ ಬರದ ಎಲ್ಲಾ ಕುಟುಂಬಗಳ ಎಲ್ಲ ರೀತಿಯ ಸಾಲಗಳನ್ನು ಕೂಡಲೇ ಮನ್ನಾ ಮಾಡಬೇಕು. ■

ಬೆಳ್ತಂಗಡಿಯಲ್ಲಿ ಸಾರಿಗೆ ನೌಕರರ ಪ್ರತಿಭಟನೆ

ವರದಿ: ವಾ.ಉ.

ಮುಷ್ಕರ ನಿರತ ಸಾರಿಗೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಬದಲಾಗಿ ರಾಜ್ಯ ಸರಕಾರ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಇಂದು ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ಸಿಐಟಿಯು ಬೆಳ್ತಂಗಡಿ ತಾಲೂಕು ಸಮಿತಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ನೇತೃತ್ವದಲ್ಲಿ ನೌಕರರ ಕುಟುಂಬಸ್ಥರ ಸಹಭಾಗಿತ್ವದಲ್ಲಿ ದಿನಾಂಕ 12 ರಂದು ಪ್ರತಿಭಟನೆ ನಡೆಯಿತು.

ಸಾರಿಗೆ ನೌಕರರು ಹಾಗೂ ಕುಟುಂಬಸ್ಥರು ತಮ್ಮ ಮಕ್ಕಳೊಂದಿಗೆ ತಹಶೀಲ್ದಾರರ ಕಚೇರಿ ಎದುರು ಸರಕಾರದ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತ ಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ತಾಲೂಕು ಅಧ್ಯಕ್ಷ ನ್ಯಾಯವಾದಿ ಎಸ್. ಎಂ. ಶಿವಕುಮಾರ್, ರಾಜ್ಯ ಸರಕಾರ ಸಾರಿಗೆ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಬದಲಾಗಿ ಮುಷ್ಕರದ ಬಗ್ಗೆ ಸಂವಿಧಾನ ಬಾಹಿರವಾಗಿ ವರ್ತಿಸುತ್ತಿದೆ ಎಂದು ಆರೋಪಿಸಿದ ಅವರು, ನೌಕರರ ಹೋರಾಟದಿಂದಾಗುವ ಅನಾಹುತಕ್ಕೆ ರಾಜ್ಯ ಸರಕಾರ ನೇರ ಹೊಣೆಯಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ಧರ್ಮಸ್ಥಳ ಡಿಪೋ ಅಧ್ಯಕ್ಷ ತಮ್ಮಣ್ಣ ಗೌಡ, ಸಿಐಟಿಯು ತಾಲೂಕು ಉಪಾಧ್ಯಕ್ಷ ಶೇಖರ ಲಾಯ್ಲ ಮಾತನಾಡಿದರು. ಪ್ರತಿಭಟನೆ ವೇಳೆ ಸಾರಿಗೆ ನೌಕರರ ಒಕ್ಕೂಟದ ಹೇಮಂತ್ ಕುಮಾರ್, ಸುದರ್ಶಿನಿ, ಸಿಐಟಿಯು ಮುಖಂಡರಾದ ನ್ಯಾಯವಾದಿ ಸುಕನ್ಯಾ ಹರಿದಾಸ್, ನೀಲೇಶ್ ಎಚ್, ಕುಸುಮಾ ಮಾಚಾರ್ ಉಪಸ್ಥಿತರಿದ್ದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಮಾಜಿ ಶಾಸಕ ಕೆ.ವಸಂತ ಬಂಗೇರ, ಮುಷ್ಕರ ನಿರತ ಸಾರಿಗೆ ನೌಕರರ ಬೇಡಿಕೆ ಈಡೇರಿಸುವಲ್ಲಿ ಸರಕಾರ ವಿಫಲವಾಗಿದ್ದು, ಸಾರಿಗೆ ನೌಕರರ ಪರವಾಗಿ ನಾವಿದ್ದೇವೆ ಎಂದು ಧೈರ್ಯ ತುಂಬಿದರು.



ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆ ಮುಂದೂಡಲು ಎಸ್‌ಎಫ್‌ಐ ಒತ್ತಾಯ

ಬಳ್ಳಾರಿ ವಿ ವಿ ವ್ಯಾಪ್ತಿಯ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡುವಂತೆ ಆಗ್ರಹಿಸಿ ಎಸ್‌ಎಫ್‌ಐ ನಿಂದ ಇಂದು ಗಂಗಾವತಿಯಲ್ಲಿ ಪ್ರತಿಭಟನೆ ನಡೆಸಲಾಯಿತು.



ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯಲ್ಲಿ ಇದೇ ತಿಂಗಳು ಏಪ್ರಿಲ್ ಹತ್ತೊಂಬತ್ತು ರಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಪರೀಕ್ಷೆ ದಿನಾಂಕ ನಿಗದಿ ಮಾಡಿ ಪರೀಕ್ಷೆ ನಡೆಸಲು ತಯಾರಿ ನಡೆಸಿದೆ. ಒಂದೆಡೆ ಸಾರಿಗೆ ಮುಷ್ಕರ ಇನ್ನೊಂದೆಡೆ ಕರೋನಾ ಎರಡನೆಯ ಅಲೆಯಿಂದಾಗಿ ಅನೇಕ ವಿದ್ಯಾರ್ಥಿಗಳಿಗೆ ಸಮಸ್ಯೆ ಸೃಷ್ಟಿಯಾಗಿದೆ.

ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಮಾಡಲು ಬರುತ್ತಾರೆ, ಸಾರಿಗೆ ಮುಷ್ಕರದಿಂದಾಗಿ ಬಸ್‌ಗಳು ಇರದ ಕಾರಣ ವಿದ್ಯಾರ್ಥಿಗಳಿಗೆ ಅನೇಕ ಸಮಸ್ಯೆಗಳಾಗುತ್ತಿವೆ. ಹಾಗಾಗಿ ಸಾವಿರಾರು ವಿದ್ಯಾರ್ಥಿಗಳು ಏಪ್ರಿಲ್ ಹತ್ತೊಂಬತ್ತು ರಿಂದ ಪರೀಕ್ಷೆಗಳು ನಡೆದರೆ ಪರೀಕ್ಷೆಯಿಂದ ವಂಚಿತ ರಾಗುತ್ತಾರೆ. ಈಗಾಗಲೆ ಅನೇಕ ವಿಶ್ವವಿದ್ಯಾಲಯಗಳು ಪರೀಕ್ಷೆಗಳನ್ನು ಮುಂದೂಡಿವೆ. ಮತ್ತು ಇಪ್ಪತ್ತೈದರಂದು ಕೆ ಸೆಟ್ ಪರೀಕ್ಷೆ ನಡೆಸಲು ಮುಂದಾಗಿದ್ದು ಅದೇ ದಿನಾಂಕದಂದು ಸ್ನಾತಕೋತ್ತರ ಕೋರ್ಸ್ ಗಳ ಪರೀಕ್ಷೆ ಇದೆ. ಎರಡರಲ್ಲಿ ಯಾವ ಪರೀಕ್ಷೆ ಬರೆಯಬೇಕು ಎಂಬ ಗೊಂದಲದಲ್ಲಿ ವಿದ್ಯಾರ್ಥಿಗಳು ಇದ್ದಾರೆ ಹಾಗಾಗಿ ಬಳ್ಳಾರಿ ವಿವಿ ವ್ಯಾಪ್ತಿಯ ಎಲ್ಲಾ ಪರೀಕ್ಷೆಗಳನ್ನು ಮುಂದೂಡಬೇಕೆಂದು ಎಸ್‌ಎಫ್‌ಐ ತಾಲ್ಲೂಕ ಅಧ್ಯಕ್ಷ ಗ್ಯಾನೇಶ ಕಡಗದ ಆಗ್ರಹಿಸಿದ್ದಾರೆ.

ಗಂಗಾವತಿ ಸ್ನಾತಕೋತ್ತರ ಕೇಂದ್ರದ ಅಧಿಕಾರಿಗಳ ಮೂಲಕ ಬಳ್ಳಾರಿ ವಿ.ಎಸ್.ಕೆ ವಿಶ್ವವಿದ್ಯಾಲಯ ಕುಲಪತಿಗಳಿಗೆ ಮನವಿ ಸಲ್ಲಿಸಲಾಗಿದೆ. ಈ ಸಂದರ್ಭದಲ್ಲಿ ಎಸ್‌ಎಫ್‌ಐ ನ ಸಹ ಕಾರ್ಯದರ್ಶಿ ಹನುಮೇಶ, ಸದಸ್ಯರಾದ ಶಿವುಕುಮಾರ, ಶರೀಫ್, ಟಿಪ್ಪು, ದೇವರಾಜ, ಬಸವರಾಜ ಗರ್ಜನಾಳ, ಭೀಮೇಶ, ಯಮನೂರ ಸೇರಿದಂತೆ ಅನೇಕ ವಿದ್ಯಾರ್ಥಿಗಳು ಇದ್ದರು.

ಪುರುಷರಿಗೆ ಹೋಲಿಸಿದರೆ, ನೈಸರ್ಗಿಕವಾಗಿ ಮಹಿಳೆಯರು ದುರ್ಬಲರಾದ್ದರಿಂದ ಅವರು ಮಾಡುವ ಶ್ರಮವೂ ಸಹ ಸಾಪೇಕ್ಷವಾಗಿ ಕಡಿಮೆಯಾದ್ದರಿಂದ ಅವರಿಗೆ ಕೊಡುವ ಕೂಲಿ/ವೇತನವೂ ಕಡಿಮೆ ಆಗುವುದು ಸ್ವಾಭಾವಿಕವೆಂದೂ, ಪುರುಷರಿಗೆ ಸಮಾನವಾಗಿ ಕೊಟ್ಟರೆ ಮಾಲೀಕರು 'ಪಾಪರ್' ಆಗುತ್ತಾರೆಂದೂ, ಈ ಬಗ್ಗೆ 'ವಿಚಾರವಂತರು' ಯೋಚಿಸಬೇಕೆಂದೂ ಕನ್ನಡದ ಪ್ರಖ್ಯಾತ ಪತ್ರಿಕೆಯೊಂದರಲ್ಲಿ ಓದುಗರೊಬ್ಬರು ಕರೆಕೊಟ್ಟಿದ್ದರು.. .. ..ಸಮಾಜದಲ್ಲಿ, ಗುತ್ತಿಗೆದಾರ–ಕೆಲಸಗಾರ ಸಂಬಂಧಗಳಿಲ್ಲದೆ, ಕುಟುಂಬದ ಸದಸ್ಯರಾಗಿ ಪರಸ್ಪರರ ನಡುವೆ ಸಾಧ್ಯವಿರುವ ಮಾನವೀಯ ಸಂಬಂಧಗಳು ಸಮಾಜದ ವಿವಿಧ ಶಕ್ತಿ–ಸಾಮರ್ಥ್ಯದ, ಕನಿಷ್ಠ ಅಗತ್ಯಗಳ ಬೇಡಿಕೆ–ಪೂರೈಕೆಗಳಿಗೆ ತಕ್ಕಂತೆ ಹಂಚಿಕೆಯಾಗುವಂಥಾ ಸಾಮಾಜಿಕ ಸಂಬಂಧಗಳಾಗಿರಲು ಸಾಧ್ಯವಿಲ್ಲವೆ? ಅದಕ್ಕೆ ಬೇಕಾದ ನ್ಯಾಯ ಯಾವುದು? ಹಾಗಾಗದಿರಲು ಇರುವ ತೊಡಕುಗಳು ಯಾವುವು? ಇವನ್ನೂ ವಿಚಾರವಂತರು ಯೋಚಿಸಬೇಕಲ್ಲವೆ?





ಪ್ರೊ.ವಿ.ಎನ್. ಲಕ್ಷ್ಮೀನಾರಾಯಣ

'ವಿಚಾರವಂತರು ಯೋಚಿಸಬೇಕಾದ್ದು'..

ಇತ್ತೀಚೆಗೆ ಕನ್ನಡದ ಪ್ರಖ್ಯಾತ ಪತ್ರಿಕೆಯೊಂದರಲ್ಲಿ ಓದುಗರೊಬ್ಬರು ದೈಹಿಕ ಶ್ರಮವನ್ನು ಬೇಡುವ ಕೆಲಸಗಳಲ್ಲಿ ಪುರುಷರಿಗೆ ಹೆಚ್ಚು ಕೂಲಿ/ವೇತನವನ್ನೂ, ಮಹಿಳೆಯರಿಗೆ ಕಡಿಮೆ ಕೂಲಿ/ವೇತನಗಳನ್ನೂ ಕೊಡುವುದು ಸರಿಯೇ ಎಂದು ಪ್ರಶ್ನೆ ಹಾಕಿಕೊಂಡು, ಅವರ ಸಂಶೋಧನೆ ಮತ್ತು ಅನುಭವವನ್ನು ಆಧರಿಸಿ, ದೈಹಿಕ ಶ್ರಮವನ್ನು ಬೇಡುವ ಕೆಲಸಗಳಲ್ಲಿ ಪುರುಷರಿಗೆ ಹೆಚ್ಚು ಕೂಲಿ/ವೇತನವನ್ನೂ, ಮಹಿಳೆಯರಿಗೆ ಕಡಿಮೆ ಕೂಲಿ/ವೇತನಗಳನ್ನೂ ಕೊಡುವುದು ಸರಿಯಾಗಿದೆ ಎಂಬ ತೀರ್ಮಾನವನ್ನು ಪ್ರಕಟಿಸಿದರು. ಅವರ ಪ್ರಕಾರ, ಪುರುಷರಿಗೆ ಹೋಲಿಸಿದರೆ, ನೈಸರ್ಗಿಕವಾಗಿ ಮಹಿಳೆಯರು ದುರ್ಬಲರಾದ್ದರಿಂದ ಅವರು ಮಾಡುವ ಶ್ರಮವೂ ಸಹ ಸಾಪೇಕ್ಷವಾಗಿ ಕಡಿಮೆಯಾದ್ದರಿಂದ ಅವರಿಗೆ ಕೊಡುವ ಕೂಲಿ/ವೇತನವೂ ಕಡಿಮೆ ಆಗುವುದು ಸ್ವಾಭಾವಿಕವೆಂದೂ, ಪುರುಷರಿಗೆ ಸಮಾನವಾಗಿ ಕೊಟ್ಟರೆ ಮಾಲೀಕರು 'ಪಾಪರ್' ಆಗುತ್ತಾರೆಂದೂ, ಈ ಬಗ್ಗೆ 'ವಿಚಾರವಂತರು' ಯೋಚಿಸಬೇಕೆಂದೂ ಅವರು ಕರೆಕೊಟ್ಟಿದ್ದರು.

ಈ ಬಗ್ಗೆ 200 ವರ್ಷಗಳಷ್ಟು ಹಿಂದೆಯೇ ಯೋಚಿಸಿದ ವಿಚಾರವಂತರು ಇದ್ದರೆಂಬ ಸಂಗತಿ ಅವರಿಗೆ ಗೊತ್ತಿಲ್ಲ. ಮತ್ತು ಮಹಿಳಾ ಕಾರ್ಮಿಕರು ಮಾತ್ರವಲ್ಲ, ಬಾಲಕಾರ್ಮಿಕರು ಮತ್ತು ದುರ್ಬಲ ಪುರುಷ ಕಾರ್ಮಿಕರೂ ಸಹ ಕಡಿಮೆ ಕೂಲಿ/ವೇತನಗಳನ್ನು ಪಡೆದು ಮಾಲೀಕರನ್ನು ಪಾಪರ್ ಆಗದಂತೆ ರಕ್ಷಿಸುತ್ತಾ ಬಂದಿದ್ದಾರೆಂಬ ಸಂಗತಿಯೂ ಈ ಓದುಗರಿಗೆ ಗೊತ್ತಿಲ್ಲ. ಹಾಗಾಗಿ ಈ ಬಗ್ಗೆ ಯೋಚಿಸಲು ಇಂದಿನ 'ವಿಚಾರವಂತ'ರಿಗೆ ಕರೆಕೊಟ್ಟಿದ್ದಾರೆನ್ನುವುದು ಸುಸ್ಪಷ್ಟ. ಈ ಲಿಂಗಾಧಾರಿತ ವರ್ಗೀಕರಣದ ಕಾರ್ಮಿಕರು ಅನುಭವಿಸುತ್ತಿರುವ ಕೂಲಿ/ವೇತನದ ತಾರಮ್ಯದ ಜೊತೆಗೆ ದೈಹಿಕ ಶ್ರಮ, ಬೌದ್ಧಿಕ ಶ್ರಮ ಮತ್ತು ವಿಶೇಷ ಶ್ರಮಗಳೂ ಸೇರಿದಂತೆ ಅವನ್ನು ಮಾಡುವ ಶ್ರಮಿಕರ, ವಿಶೇಷ ಚೇತನದ ಶ್ರಮಿಕರ ಮತ್ತು ಲೈಂಗಿಕ ಅಲ್ಪಸಂಖ್ಯಾತ ಶ್ರಮಿಕರ ಕೂಲಿ/ವೇತನದಲ್ಲಿ, ಅವರ ಶಕ್ತಿ–ಸಾಮರ್ಥ್ಯಗಳ ಆಧಾರದ ಮೇಲೆ ಮಾಡುವ ತಾರತಮ್ಯವನ್ನು ತೆಗೆದುಹಾಕಿದರೆ ಅವರನ್ನು ನೇಮಿಸಿಕೊಳ್ಳುವ ಮಾಲೀಕರು ಪಾಪರ್ ಆಗುತ್ತಾರೆಯೇ, ಆಗಿದ್ದಾರೆಯೇ ಅಥವಾ ಆಗಿಬಿಟ್ಟರೆ ಅವರ ಗತಿ ಏನು ಎಂಬ ಬಗ್ಗೆಯೂ 'ವಿಚಾರವಂತ'ರು ಯೋಚಿಸಬೇಕಾಗಿದೆ.

ಕನ್ನಡದ ಪ್ರಖ್ಯಾತ ಪತ್ರಿಕೆಯ ಮಾನ್ಯ 'ವಿಚಾರವಂತ' ಓದುಗರು, ತಮ್ಮ ಸಂಶೋಧನೆ ಮತ್ತು ತೀರ್ಮಾನಕ್ಕಾಗಿ ತತ್ವಜ್ಞಾನಿಗಳಂತೆ ಯಾವುದೇ ಊಹಾ ಸತ್ಯವನ್ನು ಆಧರಿಸದೆ 'ವಸ್ತುಸ್ಥಿತಿ'ಯನ್ನೇ ಆಧರಿಸಿದ್ದಾರೆ ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಈ ಓದುಗರೇ ಸ್ವತಹ ಕಂಡಂತೆ ಕಟ್ಟಡ ಕೆಲಸ ಮಾಡುವ ಒಬ್ಬ ಪುರುಷ ಕೆಲಸಗಾರನು ನೆಲಮಟ್ಟದಿಂದ ಮೇಲಿನ ಅಂತಸ್ತಿಗೆ 'ಎರಡು ಸನಿಕೆ' ಗಾರೆ ತುಂಬಿದ ಬಾಣಲೆಯನ್ನು ತಲೆಯ ಮೇಲೆ ಹೊತ್ತು ಸಾಗಿಸುತ್ತಾನೆ. ಅದೇ ಕಟ್ಟಡದ ಮಹಿಳಾ ಕೆಲಸಗಾರ್ತಿಯು ಕೇವಲ 'ಒಂದುವರೆ ಸನಿಕೆ' ಗಾರೆಯ ಬಾಣಲೆಯನ್ನು ತಲೆಯಮೇಲೆ ಹೊತ್ತು ನೆಲದಿಂದ ಮೇಲಂತಸ್ತಿಗೆ ಸಾಗಿಸುತ್ತಾಳೆ. ಲೆಕ್ಕದ ಸೌಲಭ್ಯಕ್ಕಾಗಿ ಇಬ್ಬರೂ ದಿನವೊಂದಕ್ಕೆ 8 ಗಂಟೆಗಳ ಕಾಲ 100 ಬಾಣಲೆ ಲೆಕ್ಕದಲ್ಲಿ ಗಾರೆಯನ್ನು ಸಾಗಿಸುತ್ತಾರೆ ಎಂದು ಭಾವಿಸಿದರೆ, ಪುರುಷ ಕೆಲಸಗಾರನಿಂದ 200 ಸನಿಕೆ ಗಾರೆಯೂ, ಮಹಿಳಾ ಕೆಲಸಗಾರಳಿಂದ 150 ಸನಿಕೆ ಗಾರೆಯೂ ಕೆಳಗಿನಿಂದ ಮೇಲಕ್ಕೆ ಸಾಗಣೆಯಾಗುತ್ತದೆ. ಈ ಕೆಲಸಕ್ಕಾಗಿ ಪುರುಷ ಕೆಲಸಗಾರನಿಗೆ ಗುತ್ತಿಗೆದಾರನು 600 ರೂ ಪಾವತಿಸಿದರೆ ಮಹಿಳಾ ಕೆಲಸಗಾರ್ತಿಗೆ 450 ರೂ. ಕೊಡುವುದು ನ್ಯಾಯವಾಗಿಯೇ ಇದೆ. ಇದು ಪ್ರಖ್ಯಾತ ಕನ್ನಡ ಪತ್ರಿಕೆಯ ವಿಚಾರವಂತ ಓದುಗ ಮಾಡುವ ತೀರ್ಮಾನ. ಈ ಕೆಲಸಕ್ಕಾಗಿ ಯಂತ್ರ ಬಳಸಿದರೆ ಹೇಗೆ? ಮತ್ತು ಲಿಂಗಾಧಾರಿತ ತಾರತಮ್ಯ ಕಾನೂನು ಬಾಹಿರವೆ? ಎಂಬ ಪ್ರಶ್ನೆಗಳು ಸದ್ಯಕ್ಕೆ ಪ್ರಸ್ತುತವಲ್ಲ.

ಓದುಗರು ಬಳಸುವ ತರ್ಕವನ್ನೇ ಬಳಸಿ ನೋಡಿದರೆ ಪುರುಷ ಕೆಲಸಗಾರ ಮತ್ತು ಮಹಿಳಾ ಕೆಲಸಗಾರರಿಬ್ಬರನ್ನೂ ನೇಮಿಸಿಕೊಂಡು ಕಟ್ಟಡದ ಕೆಲಸ ಮಾಡಿಸುವ, ಗುತ್ತಿಗೆದಾರನು ಕಟ್ಟಡದ ಕೆಲಸದ ಸಮಯದಲ್ಲಿ ಅರ್ಧ ಸನಿಕೆ ಗಾರೆಯನ್ನೂ ಸಾಗಿಸುವುದಿಲ್ಲ. ಆದ್ದರಿಂದ ಅವನ ಆದಾಯವನ್ನು ಯಾವುದರ ಆಧಾರದಿಂದ ನಿರ್ಧರಿಸಬೇಕು ಎಂಬುದನ್ನೂ 'ವಿಚಾರವಂತ' ಓದುಗ ಅಥವಾ ವಿಚಾರವಂತರು ಯೋಚಿಸಬೇಕಲ್ಲವೆ? ಗುತ್ತಿಗೆದಾರನು ತಾನೇ ಗಾರೆ ಹೊರದೆ, ಕೆಲಸಗಾರರಿಂದ ಗಾರೆಹೊರಿಸಿದ್ದರಿಂದಲೇ ಅವನು ಕೆಲಸಗಾರನಾಗದೆ, ಗುತ್ತಿಗೆದಾರನಾಗಿದ್ದಾನೆ ಎಂಬುದು ಬೆಳಕಿನಷ್ಟೇ ನಿಚ್ಚಳವಾದ ಸತ್ಯ.

ಕನ್ನಡದ ಪ್ರಖ್ಯಾತ ಪತ್ರಿಕೆಯ ವಿಚಾರವಂತ ಓದುಗ, ಕಟ್ಟಡದ ಕೆಲಸದ ಗುತ್ತಿಗೆದಾರ, ಪತ್ರಿಕೆಯ ಮಾಲೀಕ, ಸಂಪಾದಕ, ಯಾರೇ ಆದರೂ ಅವರವರ ಮನೆಗಳಲ್ಲಿ ಇದೇ ತರ್ಕವನ್ನು ಬಳಸಿದರೆ, ಆಗ ಆ ಕುಟುಂಬಗಳ ಅಜ್ಜ–ಅಜ್ಜಿಯರಿಗೆ, ದುರ್ಬಲರು–ಹೆಂಗಸರು–ಮಕ್ಕಳಿಗೆ ಅವರವರು ಮಾಡುವ ಕೆಲಸದ ಅಂದಾಜು ಬೆಲೆ/ಮೌಲ್ಯ/ಆದಾಯವನ್ನು ಆಧರಿಸಿ ತುಂಡು ಬಟ್ಟೆ, ಮೂಲೆ ನೆಲ, ಮುರುಕು ಕುರ್ಚಿ, ಕಾಲು ಹಾಸಿಗೆ, ಅರ್ಧತಟ್ಟೆ ಅನ್ನ–ರೊಟ್ಟಿ, ಬೇಳೆ–ತರಕಾರಿಗಳಿಲ್ಲದ ಕಡಿಮೆ ವೆಚ್ಚದ/ಪೌಷ್ಟಿಕಾಂಶದ ಸಾರು ಇತ್ಯಾದಿ ಜೀವನಾವಶ್ಯಕ ವಸ್ತುಗಳನ್ನು ಮತ್ತು ಸೌಲಭ್ಯವನ್ನು ಒದಗಿಸಿದರೆ ಅನ್ಯಾಯವೆನಿಸುತ್ತದೆಯೋ? ಅಥವಾ ಒಂದುವೇಳೆ ಕುಟುಂಬದ ಎಲ್ಲರಿಗೂ ಅವರವರು ನಿರ್ವಹಿಸುವ ಕೆಲಸ–ಕರ್ತವ್ಯ–ಕ್ರಿಯೆ–ಚಟುವಟಿಕೆಗಳನ್ನು ಸಮಾನ ಮೌಲ್ಯದ್ದಾಗಿರಬೇಕೆಂದು ಬಯಸದೆ/ಆಗ್ರಹಿಸದೆ ಅವರವರ ಅಗತ್ಯಕ್ಕೆ ತಕ್ಕಂತೆ ಮನೆಯಲ್ಲಿ ಲಭ್ಯವಿರುವ ಜೀವನಾವಶ್ಯಕ ವಸ್ತುಗಳನ್ನು ಮತ್ತು ಸೌಲಭ್ಯಗಳನ್ನು ಹಂಚಿಕೊಂಡು ಬದುಕಬಹುದಾದರೆ ಕುಟುಂಬದ ಎಲ್ಲಾ ಸದಸ್ಯರೂ ನೆಮ್ಮದಿಯಾಗಿ ಇರಬಹುದೋ ಇಲ್ಲವೋ?


ಕುಟುಂಬವು ಯಾವುದೇ ಸಮಾಜದ ಕನಿಷ್ಠರೂಪ. ಸಮಾಜದಲ್ಲಿ, ಗುತ್ತಿಗೆದಾರ–ಕೆಲಸಗಾರ ಸಂಬಂಧಗಳಿಲ್ಲದೆ, ಕುಟುಂಬದ ಸದಸ್ಯರಾಗಿ ಪರಸ್ಪರರ ನಡುವೆ ಸಾಧ್ಯವಿರುವ ಮಾನವೀಯ ಸಂಬಂಧಗಳು ಸಮಾಜದ ವಿವಿಧ ಶಕ್ತಿ–ಸಾಮರ್ಥ್ಯದ, ಕನಿಷ್ಠ ಅಗತ್ಯಗಳ ಬೇಡಿಕೆ–ಪೂರೈಕೆಗಳಿಗೆ ತಕ್ಕಂತೆ ಹಂಚಿಕೆಯಾಗುವಂಥಾ ಸಾಮಾಜಿಕ ಸಂಬಂಧಗಳಾಗಿರಲು ಸಾಧ್ಯವಿಲ್ಲವೆ? ಅದಕ್ಕೆ ಬೇಕಾದ ನ್ಯಾಯ ಯಾವುದು? ಹಾಗಾಗದಿರಲು ಇರುವ ತೊಡಕುಗಳು ಯಾವುವು? ವಿಚಾರವಂತರು ಯೋಚಿಸಬೇಕಲ್ಲವೆ?

"ವಸುಧೈವಕ ಕುಟುಂಬಕಂ", "ಸರ್ವೇ ಜನಾಃ ಸುಖಿನೋ ಭವಂತು"ಎಂದು ಬಯಸುವ ದೇಶ ಭಾರತ, ಆಧ್ಯಾತ್ಮಿಕವಾಗಿ ವಿಶ್ವಕ್ಕೇ ಗುರುಸ್ಥಾನದಲ್ಲಿರುವ ದೇಶ ಭಾರತ ಎಂದು ಎಲ್ಲಾ ರಾಜಕಾರಣಿಗಳೂ ಅವಕಾಶ ಸಿಕ್ಕಿದಾಗಲೆಲ್ಲಾ ಹೇಳುತ್ತಾರೆ. ಎಲ್ಲರೂ ಒಡಹುಟ್ಟಿದವರಂತೆ, ಒಟ್ಟಿಗೆ ಶಾಂತಿ–ಸೌಹಾರ್ದತೆ–ನೆಮ್ಮದಿಗಳಿಂದ ಬದುಕಬೇಕೆಂದು ನಿತ್ಯವೂ ಪ್ರಾರ್ಥಿಸುವ ಜನರಿರುವ ದೇಶ ಭಾರತವೆಂಬ ಈ ಪುಣ್ಯಭೂಮಿಯೆಂದು ಮಧ್ಯಮವರ್ಗದ ಧಾರ್ಮಿಕ ಮನಸ್ಸಿನ ಸಜ್ಜನರು ಹೆಮ್ಮೆ ಪಡುತ್ತಾರೆ. ಬಸ್ಸು–ರೈಲುಗಳಲ್ಲಿ ಇಬ್ಬರಿಗೆ ಅವಕಾಶ ಮಾಡಿಕೊಡುವ ಸೀಟಿನಲ್ಲಿ ಮೂವರು ಕುಳಿತು, 'ಅಡ್ಜೆಸ್ಟ್ ಮಾಡಿಕೊಳ್ಳಬೇಕು, ಲೈಫೇ ಒಂದು ಅಡ್ಜೆಸ್ಟ್‌ಮೆಂಟ್' ಎಂದು ಹೇಳುವ ಜನಸಾಮಾನ್ಯರ ಸಜ್ಜನಿಕೆ–ತಿಳುವಳಿಕೆ–ತೀರ್ಮಾನಗಳು ಹಣದ ವಿಷಯ, ಖಾಸಗಿ ಆಸ್ತಿಯ ವಿಷಯ ಬಂದಾಗ ಕೆಲಸಕ್ಕೆ ಬರುವುದಿಲ್ಲ. ಹೀಗಾಗಲು ಕಾರಣವಾಗುವ ತೊಡಕು ಯಾವುದು? ವಿಚಾರವಂತರು ಯೋಚಿಸಬೇಕಲ್ಲವೆ?

'ಈ ಪುಣ್ಯಭೂಮಿ'ಯಲ್ಲಿ, ಕಟ್ಟಿಕೊಂಡ ಮಲದ ಗುಂಡಿಯಲ್ಲಿಳಿದು ಸ್ವಚ್ಛಮಾಡುವವರು 'ಎಲ್ಲರಿಗೂ ತಂದೆಯಾದ'ದೇವರ ಗುಡಿಯೊಳಗೆ ಕುಳಿತು ಪ್ರಾರ್ಥನೆ ಮಾಡುವಂತಿಲ್ಲ. ಗರ್ಭಗುಡಿಗೆ ಹೋಗುವುದಂತೂ ಸಾಧ್ಯವೇ ಇಲ್ಲ. ದೇವಸ್ಥಾನದ ಅರ್ಚಕರಾಗಿ ಜೀವನ ಮಾಡುವವರು 'ಪ್ರಾಣಹೋದರೂ ಸರಿ' ಗಾರೆ ಹೊರಲು ಹೋಗುವುದಿಲ್ಲ. 'ಜನರು ಚುನಾಯಿಸುವ ಸರ್ಕಾರ'ದಿಂದ ಪ್ರಶಸ್ತಿ–ಪದವಿ–ಬಹುಮಾನಗಳ ಮನ್ನಣೆಗೆ ಪಾತ್ರರಾದ ಸಾಹಿತಿಗಳು ಸಾರಿಗೆ ಬಸ್ಸಿನಲ್ಲಿ ಪ್ರಯಾಣಿಸುವ ನಾಗರಿಕರ ಪಕ್ಕ ಕುಳಿತುಕೊಳ್ಳಲು ಬಯಸುವುದಿಲ್ಲ. 'ಜನರ ಸೇವೆಯೇ ಜನಾರ್ದನನ ಸೇವೆ'ಯೆಂದು ನಂಬುವ ಧರ್ಮಾಧಿಕಾರಿಗಳು, ಜಗದ್ಗುರುಗಳು, ಮಠಾಧಿಪತಿಗಳು 'ಜನತಾ ಜನಾರ್ದನನ' ಪಕ್ಕದಲ್ಲಿ ನೆಲದ ಮೇಲೆ ಕುಳಿತು ನಿತ್ಯವೂ ಅವರುಣ್ಣುವ 'ಪ್ರಸಾದ'ವನ್ನೇ ತಾವೂ ತಿಂದು ಜೀವಿಸುವುದಿಲ್ಲ. ಬಸ್‌ನಿಲ್ದಾಣ, ರೈಲು ನಿಲ್ದಾಣ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಜನರಿಗೆಂದೇ ಹಾಕಿಸಿದ 'ಶುದ್ಧ ಕುಡಿಯುವ ನೀರನ್ನು' ಯಾವ ವೈದ್ಯ, ವಿಜ್ಞಾನಿ, ಬುದ್ಧಿಜೀವಿ, ಜನನಾಯಕ/ನಾಯಕಿಯೂ ಕುಡಿಯುವುದಿಲ್ಲ. ಇದಕ್ಕಿರುವ ಅಡ್ಡಿ ಯಾವುದು? ವಿಚಾರವಂತರು ಯೋಚಿಸಬೇಕಲ್ಲವೆ?

ಭಾರತದಲ್ಲಿ, ವೈದ್ಯಪದವಿ ಪಡೆದವರು ವೈದ್ಯರಾಗದೆ ಜಿಲ್ಲಾಧಿಕಾರಿಯಾಗಬಹುದು. ಕೆಲಸ ಮಾಡಲು ಮೈ ಬಗ್ಗದ, ಹಣವಂತ, ಭ್ರಷ್ಟ, ಚಾಲೂಕಿ ಮನುಷ್ಯರು/ ಸಿನೆಮಾ ನಟ ನಟಿಯರು ರಾಜಕಾರಣಿಗಳಾಗುವ, ಮಂತ್ರಿಗಳಾಗುವ ಅವಕಾಶವಿದೆ. ಕೈಗಾರಿಕೋದ್ಯಮಿಗಳು ಶಿಕ್ಷಣವೇತ್ತರಾಗುವುದು ಸಾಧ್ಯ. ಬಿ.ಇ ಪದವೀಧರರು ಪೋಲೀಸ್ ಪೇದೆಗಳಾಗಲು ಮುಂದೆ (ಅಥವಾ ಹಿಂದೆ) ಬರಬಹುದು. ಸೈನ್ಯ ಸೇರಿ ದೇಶಕ್ಕಾಗಿ ಹೋರಾಡಿ ಹುತಾತ್ಮರಾಗಬಹುದು. ಒಟ್ಟಿನಲ್ಲಿ ಏನು ಬೇಕಾದರೂ ಸಾಧ್ಯ. ಹೇಗೆಂದು ಗೊತ್ತಿದ್ದರೆ, ಅಧಿಕಾರಸ್ಥರೊಂದಿಗೆ ಕೈಜೋಡಿಸಿ, ನ್ಯಾಯಾಧೀಶರೂ ಆಗಬಹುದು. ಇದ್ಯಾವುದೂ ಆಗದಿದ್ದರೆ ನಿರುದ್ಯೋಗಿಯಾದರೂ ಆಗಿ ಹೇಗೋ (ಅಂದರೆ, ಕಳ್ಳತನ, ಭಿಕ್ಷಾಟನೆ, ವೇಶ್ಯಾವೃತ್ತಿ,...ಅಥವಾ ಗೊತ್ತಿಲ್ಲದ ಇನ್ನೂ ಎಷ್ಟೋ ರೀತಿಯಲ್ಲಿ) ಬದುಕಬಹುದು. ಹೇಗೋ ಬದುಕುವುದು ಸಾಯುವುದಕ್ಕಿಂತಾ ಯಾವಾಗಲೂ ಮೇಲು. ನಾಡಿನ ಉದ್ದಾಮ ಅರ್ಥಶಾಸ್ತ್ರಜ್ಞರು ಹೇಳುವಂತೆ 'ಉದ್ಯೋಗಿಗೆ ಅವಕಾಶಗಳು ಸ್ಥಗಿತಗೊಂಡಿರುತ್ತವೆ. ಆದರೆ ನಿರುದ್ಯೋಗಿಗೆ ಅನೇಕ ಅವಕಾಶಗಳು ಸದಾ ತೆರೆದುಕೊಂಡಿರುತ್ತವೆ.' ಇದಕ್ಕಿರುವ ಅಡ್ಡಿ ಯಾವುದು? ಭಾರತ ಪ್ರಜಾಪ್ರಭುತ್ವವಾದೀ ದೇಶವಾಗಿದೆ ಎಂಬ ಕಾರಣಕ್ಕಾಗಿಯಾದರೂ ವಿಚಾರವಂತರು ಯೋಚಿಸಬೇಕಲ್ಲವೆ?

ಈಗಿನ ಕೋವಿಡ್ ಕಾಲದಲ್ಲಿ ಒಂದು ಕಡೆ, ಕೂಲಿ / ವೇತನಕ್ಕಾಗಿ ಕೆಲಸ ಮಾಡುತ್ತಿದ್ದವರೂ ನಿರುದ್ಯೋಗಿಗಳಾಗಿದ್ದಾರೆ. ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡು ಜೀವಿಸುತ್ತಿದ್ದವರು ಗಿರಾಕಿಗಳಿಲ್ಲದೆ ಇದ್ದ ವ್ಯಾಪಾರವನ್ನೂ ಕಳೆದುಕೊಂಡು ನಿರ್ಗತಿಕರಾಗಿ ಒದ್ದಾಡುತ್ತಿದ್ದಾರೆ. ಸರ್ಕಾರಗಳು ವರ್ಷ ವರ್ಷವೂ ಜಾಗತಿಕ ಬ್ಯಾಂಕುಗಳಲ್ಲಿ ಸಾಲ ಮಾಡಿ ಜನರ ತಲೆಯಮೇಲಿನ ಸಾಲದ ಹೊರೆಯನ್ನು ಹೆಚ್ಚಿಸುತ್ತಲೇ ಇವೆ. ಜನರಿಗಾಗಿ ಎಂದು ಜನರ ದುಡ್ಡಿನಲ್ಲಿ ಸ್ಥಾಪಿಸಲಾದ, ಲಾಭದಲ್ಲೇ ನಡೆಯುತ್ತಿದ್ದರೂ ನಷ್ಟದ ನೆಪವೊಡ್ಡಿ, ಬ್ಯಾಂಕು, ವಿಮೆ, ಟೆಲಿಫೋನ್, ರೈಲು, ವಿಮಾನ ಸಂಸ್ಥೆಗಳನ್ನು, ಖಾಸಗಿ ವ್ಯಾಪಾರಿಗಳಿಗೆ ಮಾರಲಾಗುತ್ತಿದೆ. ಅವುಗಳಿಂದ ಬಂದ ಹಣವು ಎಲ್ಲೆಲ್ಲೋ ಇಂಗಿ ಹೋಗುತ್ತಿದೆ. ಮತ್ತೊಂದು ಕಡೆ, ರಾಜಕೀಯ ಪಕ್ಷಗಳು ಚುನಾವಣೆಗಳಲ್ಲಿ ಗೆಲ್ಲಲು ಹಣದ ಹೊಳೆಯನ್ನೇ ಹರಿಸುತ್ತಿವೆ. ಟೀವಿ–ಪತ್ರಿಕೆಗಳ ಮುಖಗಳನ್ನು ಚಿನ್ನದ ವ್ಯಾಪಾರ, ಕಾರುಗಳ ವ್ಯಾಪಾರಗಳಿಗೆ ಗಿರಾಕಿಗಳನ್ನು ಕರೆಯುವ ಜಾಹಿರಾತುಗಳು ಮುಚ್ಚಿ ಸುದ್ದಿಗಳನ್ನೇ ಮರೆಮಾಡುತ್ತಿವೆ. ಇವೆಲ್ಲದರಲ್ಲಿರುವ ಹಣದ ಹೊಳೆ ಎಲ್ಲಿಂದ ಹರಿದುಬರುತ್ತಿದೆ? ಜನರ ಬೆವರು ಹಣವಾಗುತ್ತಿದೆಯೋ? ಅಥವಾ ಹಣವೇ ಮತ್ತಷ್ಟು ಹಣವಾಗುತ್ತಾ ಹಣರೂಪದ ಗುಳ್ಳೆಗಳಾಗಿ ಹಾರುತ್ತಿವೆಯೋ? ಈ ಹಣದ ಗುಳ್ಳೆಗಳು ಒಡೆದಾಗ ಏನಾಗುತ್ತದೆ? ಅವು ಯಾವ ರೂಪಗಳಲ್ಲಿ ಮತ್ತೆ ಕಾಣಿಸಿಕೊಳ್ಳುತ್ತವೆ? ಭಾರತದ ಕೋಟ್ಯಾಧೀಶರ ಸಂಖ್ಯೆ ಈ ಕೋವಿಡ್ ಕಾಲದಲ್ಲೂ ಏರುತ್ತಲೇ ಇದೆ. ಇವೆಲ್ಲಕ್ಕಿಲ್ಲದ ಅಡ್ಡಿ ಯಾವುದು? ವಿಚಾರವಂತರು ಯೋಚಿಸಬೇಕಲ್ಲವೆ?



ಕಳೆದ ಹಲವು ದಶಕಗಳಲ್ಲಿ ವಿಶ್ವಾಸಾರ್ಹ ನಡೆ ದಾಖಲಿಸಿದ್ದ ಕೇಂದ್ರ ಚುನಾವಣೆ ಆಯೋಗ, ಈಗ ತನ್ನ ಪ್ರತಿಷ್ಠೆ–ಘನತೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ. ಮೋದಿ ಸರ್ಕಾರ, ಈಗ ಎಲ್ಲರಿಗೂ ವಿದಿತವಾಗಿ ಬಿಟ್ಟಿರುವ ತನ್ನ ನಿರ್ದಿಷ್ಟ ಕಾರ್ಯವಿಧಾನದ ಮೂಲಕ ಚುನಾವಣೆ ಆಯೋಗವನ್ನು 'ಪಳಗಿಸುತ್ತಿದೆ'. ಚುನಾವಣಾ ಆಯೋಗದ ನಡೆಯೇ ಸಂದೇಹಾಸ್ಪದವಾದರೆ, ಅದು ಸಂಸದೀಯ ಪ್ರಜಾಪ್ರಭುತ್ವಕ್ಕೇ ಗಂಡಾಂತರ ತರುತ್ತದೆ. ಚುನಾವಣೆ ಆಯೋಗವನ್ನು ಮೋದಿ ಸರ್ಕಾರದ ಕಪಿಮುಷ್ಟಿಯಿಂದ ಮುಕ್ತಗೊಳಿಸುವುದು ತುಂಬಾ ಮುಖ್ಯವಾಗಿದೆ. ಹಣ ಬಲ ಹಾಗೂ ಪಕ್ಷಾಂತರ ನಿಯಂತ್ರಣಕ್ಕೆ ಮತ್ತು ಚುನಾವಣಾ ವ್ಯವಸ್ಥೆಯನ್ನು ಹೆಚ್ಚು ಪ್ರಾತಿನಿಧಿಕವಾಗಿಸಲು ಚುನಾವಣಾ ಸುಧಾರಣೆಗಳು ತುರ್ತಾಗಿ ಆಗಬೇಕಿದೆ. ಆದರೆ ಈ ಎಲ್ಲ ಸುಧಾರಣೆಗಳು ಚುನಾವಣೆ ಆಯೋಗದ ಸುಧಾರಣೆಯೊಂದಿಗೇ ಆರಂಭ ಆಗಬೇಕಿದೆ.



ಚುನಾವಣೆ ಆಯೋಗವನ್ನು ಬುಡಮೇಲು ಮಾಡುವ ಕೃತ್ಯ

* ಪ್ರಕಾಶ್ ಕಾರಟ್

ನರೇಂದ್ರ ಮೋದಿ ಆಡಳಿತದಲ್ಲಿ ಸಂಸದೀಯ ಸಂಸ್ಥೆಗಳನ್ನು ಬುಡಮೇಲು ಮಾಡುವ ಪ್ರಕ್ರಿಯೆ ಬಹಳ ವೇಗದಿಂದ ಸಾಗಿದೆ. ಇದಕ್ಕೆ, ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿ) ಬಂದೆರಗಿದ ಸ್ಥಿತಿಗಿಂತ ಬೇರೆ ಉದಾಹರಣೆ ಬೇಕಿಲ್ಲ.

ಕೇರಳದಿಂದ ಖಾಲಿಯಿರುವ ಮೂರು ರಾಜ್ಯಸಭೆ ಸ್ಥಾನಗಳಿಗೆ ನಡೆಯಬೇಕಿರುವ ಚುನಾವಣೆಗೆ ಸಂಬಂಧಿಸಿದಂತೆ ಇ.ಸಿ. ತಳೆದಿರುವ ನಿಲುವು, ಚುನಾವಣೆ ಆಯೋಗವು ಮೋದಿ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ರಾಜ್ಯವೊಂದರಿಂದ ಸಂಸತ್ತಿನ ಮೇಲ್ಮನೆಯಲ್ಲಿ ಖಾಲಿಯಿರುವ ಸ್ಥಾನಗಳಿಗೆ ಚುನಾವಣೆ ನಡೆಸುವ ಮಾಮೂಲಿ ಪ್ರಕ್ರಿಯೆ ಬಗ್ಗೆ ಆಯೋಗ ತಳೆದಿರುವ ವಿಚಿತ್ರ ನಿಲುವಿನ ಬಗ್ಗೆ ಇದಕ್ಕಿಂತ ಬೇರೆ ವಿವರಣೆ ಅಗತ್ಯವಿಲ್ಲ.

2021 ಏಪ್ರಿಲ್ 12ರಂದು ಚುನಾವಣೆ ನಡೆಸಲಾಗುವುದೆಂದು ಆಯೋಗ ಮೊದಲು ಪ್ರಕಟಿಸಿತ್ತು. ಒಂದು ವಾರದ ನಂತರ, ಕಾನೂನು ಮತ್ತು ನ್ಯಾಯ ಸಚಿವಾಲಯ ಕಳಿಸಿರುವ ಒಂದು ಟಿಪ್ಪಣಿಯನ್ನು ಪರಿಶೀಲಿಸುವ ಸಲುವಾಗಿ ಚುನಾವಣೆಯನ್ನು ಸದ್ಯ ಮುಂದೂಡುವುದಾಗಿ ತಿಳಿಸಿತು. ಆಯೋಗದ ಈ ನಿರ್ಧಾರ ಪ್ರಶ್ನಿಸಿ ಕೇರಳ ವಿಧಾನಸಭೆಯ ಕಾರ್ಯದರ್ಶಿ ಮತ್ತು ಸಿಪಿಐ(ಎಂ)ನ ಶಾಸಕರೊಬ್ಬರು ಕೇರಳ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಹಾಲಿ ವಿಧಾನಸಭೆಯ ಶಾಸಕರ ಹಕ್ಕನ್ನು ಕಸಿದುಕೊಳ್ಳಲಾಗದು ಎಂದವರು ವಾದಿಸಿದ್ದಾರೆ. ಸದಸ್ಯರ ಅವಧಿ ಮುಗಿಯುವುದರೊಳಗೆ ಚುನಾವಣೆ ನಡೆಸುವುದಾಗಿ ಕೋರ್ಟ್‌ಗೆ ಆಶ್ವಾಸನೆ ನೀಡಿದ ಇ.ಸಿ. ವಕೀಲರು, ಆ ಹೇಳಿಕೆಯನ್ನು ದಾಖಲಿಸುವಂತೆ ಕೋರ್ಟ್ ಸೂಚಿಸಿದಾಗ ಹಿಂದೇಟು ಹಾಕಿದರು.

ನಂತರದ ವಿಚಾರಣೆಯಲ್ಲಿ, ರಾಜ್ಯದ ಜನರು ಹೊಸ ಅಸೆಂಬ್ಲಿಯನ್ನು ಚುನಾಯಿಸಲು ಏಪ್ರಿಲ್ 6ರಂದು ಮತದಾನ ಮಾಡಿದ್ದು ವಿಧಾನಸಭೆಯ ಈಗಿನ ಅವಧಿಯಲ್ಲಿ ಚುನಾವಣೆ ನಡೆಸುವುದು ಅನಗತ್ಯ ಎಂದು ಕಾನೂನು ಮತ್ತು ನ್ಯಾಯ ಸಚಿವಾಲಯ ಸಲಹೆ ಮಾಡಿದೆ ಎಂದು ಆಯೋಗ ಹೇಳಿದೆ. ಸರ್ಕಾರದ ಈ ಸಲಹೆಯನ್ನು ಒಪ್ಪಿಕೊಂಡಿದ್ದಾಗಿ ಆಯೋಗ ದಾಖಲಿಸಿದಂತಾಗಿದೆ. ಇದನ್ನು ತಳ್ಳಿ ಹಾಕಿದ ಹೈಕೋರ್ಟ್, ಮೇ 2ರಂದು ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗುವುದರೊಳಗಾಗಿ ರಾಜ್ಯಸಭೆ ಸ್ಥಾನಗಳಿಗೆ ಚುನಾವಣೆ ನಡೆಸುವಂತೆ ನಿರ್ದೇಶಿಸಿದೆ. ಈ ಮೂಲಕ, ಮೂರು ಸ್ಥಾನಗಳಲ್ಲಿ ಎರಡರಲ್ಲಿ ಗೆಲ್ಲುವ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್)ನ ಅವಕಾಶವನ್ನು ಕಸಿಯುವ ಮೋದಿ ಸರ್ಕಾರದ ಯತ್ನವನ್ನು ಕೋರ್ಟ್ ವಿಫಲಗೊಳಿಸಿದೆ. ಮೋದಿ ಸರ್ಕಾರದ ಆಸೆಯಂತೆ ನಡೆಯಲು ಚುನಾವಣೆ ಆಯೋಗ ಯಾವ ಮಟ್ಟಕ್ಕಾದರೂ ಇಳಿಯುತ್ತದೆ ಎನ್ನುವುದನ್ನು ಈ ಪ್ರಕರಣ ಎತ್ತಿ ತೋರಿಸಿದೆ.

ತಲೆಬಾಗುವ ಚಾಳಿ

ಸರ್ಕಾರದ ಮಾರ್ಗದರ್ಶನಗಳಿಗೆ ತಲೆಬಾಗುವ ಪ್ರಕ್ರಿಯೆಗೆ ಚುನಾವಣೆ ಆಯೋಗ ಈ ಮೊದಲೇ ಒಳಗಾಗಿತ್ತು. 2019ರ ಏಪ್ರಿಲ್–ಮೇ ತಿಂಗಳಲ್ಲಿ ನಡೆದ ಲೋಕಸಭೆ ಚುನಾವಣೆಗಳ ಜೊತೆಯಲ್ಲೇ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ನಿರ್ಧಾರ ಅದಾಗಿದೆ. ಲೋಕಸಭೆ ಚುನಾವಣೆಯೊಂದಿಗೆ ಜಮ್ಮು–ಕಾಶ್ಮೀರ ಅಸೆಂಬ್ಲಿಗೆ ಆಯೋಗ ಚುನಾವಣೆ ನಡೆಸಲಿಲ್ಲ. 2018 ನವೆಂಬರ್‌ನಿಂದಲೂ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವಿತ್ತು. ಹೀಗಾಗಿ, ಲೋಕಸಭೆ ಚುನಾವಣೆ ಜೊತೆಯಲ್ಲೇ ಅಸೆಂಬ್ಲಿ ಚುನಾವಣೆಯೂ ನಡೆಯಲಿದೆ ಎನ್ನುವ ನಿರೀಕ್ಷೆ ಸಹಜವಾಗಿತ್ತು. ಆದರೆ ಭದ್ರತಾ ಕಾರಣಗಳಿಂದಾಗಿ ಎನ್ನುತ್ತ ಚುನಾವಣೆ ನಡೆಸಲು ಆಯೋಗ ನಿರಾಕರಿಸಿತ್ತು.

ಇದು ಭಾರಿ ದುರದೃಷ್ಟಕರವಾಗಿ ಪರಿಣಮಿಸಿತು. ಲೋಕಸಭೆ ಚುನಾವಣೆ ನಡೆದ ಮೂರೇ ತಿಂಗಳಲ್ಲಿ ಮೋದಿ ಸರ್ಕಾರ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿತು ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸ್ಥಾನಮಾನವನ್ನೇ ಕಿತ್ತು ಹಾಕಿತು. ರಾಜ್ಯಪಾಲರ ಆಡಳಿತ ಇದ್ದಿದ್ದರಿಂದ, ವಿಷಯವನ್ನು ರಾಜ್ಯ ವಿಧಾನ ಸಭೆಯ ಪರಿಶೀಲನೆಗೆ ಒಪ್ಪಿಸುವ ಸಾಂವಿಧಾನಿಕ ಅಗತ್ಯವನ್ನು ಈ ಮೂಲಕ ಜಾಣ್ಮೆಯಿಂದ ನಿರಾಕರಿಸಲಾಯಿತು. ವಿಧಾನಸಭೆಯ ಬದಲಿಗೆ ರಾಜ್ಯಪಾಲರೊಂದಿಗೆ ಸಮಾಲೋಚಿಸಿದರೆ ಸಾಕೆಂಬ ವಾದ ಮಂಡಿಸಲಾಯಿತು. ಶುದ್ಧವಾಗಿ ಭದ್ರತಾ ಕಾರಣಗಳಿಗಾಗಿಯೇ ಚುನಾವಣೆ ಮುಂದೂಡಿದಂತಿದ್ದ ನಿರ್ಧಾರ, ಈಗ ಹಿಂದಿರುಗಿ ನೋಡುವಾಗ, ನಿಜವಾಗಿಯೂ ಮೋದಿ ಸರ್ಕಾರದ ವಿಸ್ತೃತ ಯೋಜನೆಯ ಭಾಗವಾಗಿತ್ತು ಎನ್ನುವುದು ಇದರಿಂದ ಸಾಬೀತಾಗಿದೆ.

ಚುನಾವಣಾ ಬಾಂಡ್–ಉಲ್ಟಾ ಹೊಡೆದ ಆಯೋಗ

ಚುನಾವಣಾ ಬಾಂಡ್‌ಗೆ ಸಂಬಂಧಿಸಿದ ಇ.ಸಿ. ನಿರ್ಧಾರವೂ ಇನ್ನೊಂದು ಉದಾಹರಣೆಯಾಗಿದೆ. 2017ರಲ್ಲಿ ಚುನಾವಣಾ ಬಾಂಡ್ ಯೋಜನೆಯನ್ನು ಸರ್ಕಾರ ರೂಪಿಸಿದಾಗ ಅದರ ಬಗ್ಗೆ ಅಭಿಪ್ರಾಯ ಸಲ್ಲಿಸುವಂತೆ ಆಯೋಗಕ್ಕೆ ಸೂಚಿಸಲಾಗಿತ್ತು. ಆಯೋಗ ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಬಾಂಡ್ ಯೋಜನೆ ಬಗ್ಗೆ ಪ್ರಬಲ ಆಕ್ಷೇಪ ದಾಖಲಿಸಿತ್ತು. "ರಾಜಕೀಯ ಹಣಕಾಸು/ರಾಜಕೀಯ ಪಕ್ಷಗಳ ನಿಧಿಯ ಪಾರದರ್ಶಕತೆ ವಿಚಾರದಲ್ಲಿ ಭಾರಿ ಅಡ್ಡ ಪರಿಣಾಮ ಬೀರಬಹುದು' ಎಂದು ಆಯೋಗ ಎಚ್ಚರಿಸಿತ್ತು. ಭಾರತದಲ್ಲಿ ಕಾರ್ಯ ನಿರ್ವಹಿಸುವ ವಿದೇಶಿ ಕಂಪೆನಿಗಳು ರಾಜಕೀಯ ಪಕ್ಷಗಳಿಗೆ ಚುನಾವಣಾ ಬಾಂಡ್ ಮೂಲಕ ಸೇರಿದಂತೆ ಯಾವುದೇ ರೀತಿಯಲ್ಲಿ ನಿಧಿ ನೀಡಲು ಅವಕಾಶ ಮಾಡಿಕೊಡುವ ಕಾನೂನು ತಿದ್ದುಪಡಿಗೂ ಚುನಾವಣೆ ಆಯೋಗ ಆಕ್ಷೇಪ ಸೂಚಿಸಿತ್ತು.

ಏಪ್ರಿಲ್‌ನಲ್ಲಿ ಚುನಾವಣಾ ಬಾಂಡ್‌ನ ಇನ್ನೊಂದು ಕಂತು ಮಾರಾಟಕ್ಕೆ ತಡೆ ನೀಡಬೇಕೆಂದು ಕೋರಿ 2021 ಮಾರ್ಚ್‌ನಲ್ಲಿ ಸಲ್ಲಿಸಿದ ಅರ್ಜಿ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬಂದಾಗ, ತಡೆಯಾಜ್ಞೆ ಕೊಡುವುದಕ್ಕೆ ಆಯೋಗ ವಿರೋಧ ವ್ಯಕ್ತಪಡಿಸಿತು. ಚುನಾವಣಾ ಬಾಂಡ್‌ಗೆ ತನ್ನ ವಿರೋಧವಿಲ್ಲ, ಆದರೆ ಪಾರದರ್ಶಕತೆಯನ್ನು ಮಾತ್ರ ತಾನು ಬಯಸುವುದಾಗಿ ಆಯೋಗ ಹೇಳಿತು. ಇಲ್ಲಿಯೂ ಚುನಾವಣೆ ಆಯೋಗ ಬಾಂಡ್ ಯೋಜನೆಗೆ ಆರಂಭದಲ್ಲಿ ದಾಖಲಿಸಿದ್ದ ಬಲಿಷ್ಠ ಆಕ್ಷೇಪದಿಂದ ಹಿಂದೆ ಸರಿದು ಉಲ್ಟಾ ಹೊಡೆದಿದೆ.

ಪಶ್ಚಿಮ ಬಂಗಾಳದ ಎಂಟು ಹಂತಗಳ ಪ್ರಸಕ್ತ ಅಸೆಂಬ್ಲಿ ಚುನಾವಣೆ ವಿಚಾರದಲ್ಲೂ ಆಯೋಗದ ನಡೆ ವಿವಾದಾತ್ಮಕವಾಗಿದೆ. ಸೀತಾಲ್‌ಕುಚಿಯಲ್ಲಿ ಮತದಾನ ಕೇಂದ್ರದ ಹೊರಗೆ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ನಡೆಸಿದ ಗೋಲಿಬಾರಿನಲ್ಲಿ ನಾಲ್ಕು ಯುವಕರು ಪ್ರಾಣ ಕಳೆದುಕೊಂಡಿದ್ದಾರೆ. ಆಯೋಗದ ವೀಕ್ಷಕರು ಸಲ್ಲಿಸಿದ ತಪ್ಪು ದಾರಿಗೆಳೆಯುವ ವರದಿಯ ಆಧಾರದಲ್ಲಿ ಚುನಾವಣಾ ಆಯೋಗವು ಕೇಂದ್ರೀಯ ಪಡೆಯನ್ನು ದೋಷಮುಕ್ತಗೊಳಿಸಿದೆ. ಅಲ್ಲಿ ನಿಜವಾಗಿಯೂ ಏನು ನಡೆಯಿತು ಎನ್ನುವುದನ್ನು ತಿಳಿಯಲು ಸ್ಥಳ ಪರಿಶೀಲನೆ ಕೂಡ ಮಾಡಲಿಲ್ಲ.

ನರೇಂದ್ರ ಮೋದಿ ಮತ್ತು ಅಮಿತ್ ಷಾ ನೇತೃತ್ವದಲ್ಲಿ ಬಿಜೆಪಿ ಎಗ್ಗಿಲ್ಲದೆ ಪ್ರಚೋದನಕಾರಿ ಕೋಮುವಾದಿ ಪ್ರಚಾರದಲ್ಲಿ ತೊಡಗಿದೆ. 2019ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಆದಂತೆ ಈ ಬಾರಿಯೂ ಮಾದರಿ ನೀತಿ ಸಂಹಿತೆ (ಎಂಸಿಸಿ) ಉಲ್ಲಂಘನೆಗಾಗಿ ಬಿಜೆಪಿಯ ಯಾವೊಬ್ಬ ಉನ್ನತ ನಾಯಕನ ವಿರುದ್ಧವೂ ಮೊಕದ್ದಮೆ ದಾಖಲಾಗಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರ ಭಾಷಣಗಳು ಎಂಸಿಸಿಯ ಉಲ್ಲಂಘನೆ ಎಂದು ಆರೋಪಿಸಿ ಆಯೋಗ ಅವರ ಪ್ರಚಾರದ ಮೇಲೆ 24 ತಾಸಿನ ನಿಷೇಧ ಹೇರಿದೆ.

ಘನತೆ ಕಳೆದುಕೊಳ್ಳುವ ಅಪಾಯ

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಯಬೇಕಾದರೆ ಚುನಾವಣೆ ಆಯೋಗ ನಿಷ್ಪಕ್ಷಪಾತವಾಗಿರುವುದು ಅತ್ಯಗತ್ಯ. ಎಲ್ಲ ಪಕ್ಷಗಳಿಗೆ ಸಮಾನ ಅವಕಾಶವನ್ನು ಅದು ಖಾತರಿಪಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಾಗಿ ವರ್ತಿಸಬೇಕು. ಎಲ್ಲ ಮಟ್ಟಗಳಲ್ಲಿ ಕಾರ್ಯಾಂಗದ ಹಸ್ತಕ್ಷೇಪವನ್ನು ಪ್ರತಿರೋಧಿಸಬೇಕು. ಈ ಎಲ್ಲ ವಿಚಾರಗಳಲ್ಲಿ ಕಳೆದ ಹಲವು ದಶಕಗಳಲ್ಲಿ ವಿಶ್ವಾಸಾರ್ಹ ನಡೆ ದಾಖಲಿಸಿದ್ದ ಕೇಂದ್ರ ಚುನಾವಣೆ ಆಯೋಗ, ಈಗ ತನ್ನ ಪ್ರತಿಷ್ಠೆ–ಘನತೆಯನ್ನು ಕಳೆದುಕೊಳ್ಳುವ ಅಪಾಯದಲ್ಲಿದೆ.

ಮೋದಿ ಸರ್ಕಾರ, ಈಗ ಎಲ್ಲರಿಗೂ ವಿದಿತವಾಗಿ ಬಿಟ್ಟಿರುವ ತನ್ನ ನಿರ್ದಿಷ್ಟ ಕಾರ್ಯವಿಧಾನದ ಮೂಲಕ ಚುನಾವಣೆ ಆಯೋಗವನ್ನು 'ಪಳಗಿಸುತ್ತಿದೆ'. 2019ರ ಲೋಕಸಭೆ ಚುನಾವಣೆ ವೇಳೆ ಚುನಾವಣೆ ಆಯುಕ್ತರಲ್ಲಿ ಒಬ್ಬರಾದ ಅಶೋಕ್ ಲವಾಸಾ ಸ್ವತಂತ್ರ ಧೋರಣೆ ತಳೆದಿದ್ದರು. ಮಾದರಿ ಸಂಹಿತೆಯ ಉಲ್ಲಂಘನೆ ವಿಚಾರದಲ್ಲಿ ಮೋದಿ ಮತ್ತು ಷಾರನ್ನು ಆಯೋಗ ದೋಷಮುಕ್ತಗೊಳಿಸಿದ್ದ ಕನಿಷ್ಠ ಐದು ಸಂದರ್ಭಗಳಲ್ಲಿ ಲವಾಸಾ ಭಿನ್ನಮತವನ್ನು ದಾಖಲಿಸಿದ್ದರು. ಅದರ ಫಲವನ್ನು ಲವಾಸಾ ಅನುಭವಿಸಬೇಕಾಯಿತು!. ಲವಾಸಾರ ಪತ್ನಿ, ಮಗ ಮತ್ತು ಸಹೋದರಿ– ಎಲ್ಲರೂ ಆದಾಯ ತೆರಿಗೆ ಇಲಾಖೆಯ ವಿಚಾರಣೆಗ ಒಳಪಡಬೇಕಾಯಿತು. ಅದಕ್ಕೆ ಯೋಜನಾಬದ್ಧವಾಗಿ ವ್ಯಾಪಕ ಮಾಧ್ಯಮ ಪ್ರಚಾರವನ್ನೂ ನೀಡಲಾಯಿತು. ಲವಾಸಾರ ಆಸ್ತಿಪಾಸ್ತಿ ಬಗ್ಗೆ ಕೂಡ ಪರಿಶೀಲನೆ ನಡೆಸಲಾಗುತ್ತಿದೆ ಎನ್ನಲಾಗಿದೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಉನ್ನತ ಹುದ್ದೆ ಸ್ವೀಕರಿಸಿದ ನಂತರ ಲವಾಸಾ 2020 ಜುಲೈನಲ್ಲಿ ಚುನಾವಣಾ ಕಮಿಷನರ್ ಹುದ್ದೆಗೆ ರಾಜೀನಾಮೆ ನೀಡಿದರು.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಸಂಸದೀಯ ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿ

ಸುನಿಲ್ ಅರೋರಾ ಈಗಷ್ಟೆ ಮುಖ್ಯ ಚುನಾವಣಾ ಕಮಿಷನರ್ (ಸಿಇಸಿ) ಹುದ್ದೆಯಿಂದ ನಿವೃತ್ತರಾಗಿದ್ದಾರೆ. ಒಂದು ವೇಳೆ ಲವಾಸಾ ಪದತ್ಯಾಗ ಮಾಡಿರದಿದ್ದರೆ ಅವರೇ ಹೊಸ ಸಿಇಸಿ ಆಗಬೇಕಿತ್ತು. ಒಂದು ಸ್ವತಂತ್ರ, ಸ್ವಾಯತ್ತ ಸಾಂವಿಧಾನಿಕ ಸಂಸ್ಥೆಯಾಗಿ ಚುನಾವಣೆ ಆಯೋಗದ ಕಾರ್ಯ ನಿರ್ವಹಣೆಯಲ್ಲಿನ ದೌರ್ಬಲ್ಯವನ್ನು ಈ ಪ್ರಕರಣ ಅನಾವರಣಗೊಳಿಸಿದೆ. ಸಿಇಸಿ ಮತ್ತು ಇತರ ಆಯುಕ್ತರನ್ನು ಅಂದಂದಿನ ಸರ್ಕಾರಗಳು ಆಯ್ಕೆ ಮಾಡುತ್ತವೆ. ನೇಮಕ ಪೂರ್ಣವಾಗಿ ಕಾರ್ಯಾಂಗದ ಕೈಯಲ್ಲಿರುತ್ತದೆ. ಆರಂಭದಿಂದಲೂ, ಆಡಳಿತ ಸೇವೆಯ ಅಧಿಕಾರಿಗಳು ಅಥವಾ ಸೇವೆಯಿಂದ ನಿವೃತ್ತರಾದವರನ್ನು ಆಯುಕ್ತರನ್ನಾಗಿ ನೇಮಕ ಮಾಡಲಾಗುತ್ತಿತ್ತು. ಉನ್ನತ ಕಾರ್ಯಾಂಗಕ್ಕೆ ಸುಲಭವಾಗಿ ಅಧೀನರಾಗುವ ಆಡಳಿತ ಸೇವಾ ಅಧಿಕಾರಿಗಳನ್ನು ಪಡೆಯುವುದು ಸುಲಭ. ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ತನ್ನ ನಿಯಂತ್ರಣಕ್ಕೆ ತರಲು ಮೋದಿ ಸರ್ಕಾರ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಚುನಾವಣೆ ಆಯೋಗವು ಕೇಂದ್ರ ಸರ್ಕಾರದ ಒಂದು ವಿಸ್ತರಣಾ ಭಾಗವಾಗುವ ಅಪಾಯ ಬಂದೊದಗಿದೆ.

ಚುನಾವಣೆ ಆಯೋಗಕ್ಕೆ ಸಂವಿಧಾನದ 324ನೇ ಕಲಮು ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳಿಗೆ ಚುನಾವಣೆಗಳ "ಉಸ್ತುವಾರಿ, ದಿಕ್ಕು ಮತ್ತು ಹತೋಟಿಯನ್ನು" ವಹಿಸಬೇಕು ಎಂದು ವಿಧಿಸುತ್ತದೆ. ಚುನಾವಣಾ ಆಯೋಗದ ನಡೆಯೇ ಸಂದೇಹಾಸ್ಪದವಾದರೆ, ಅದು ಸಂಸದೀಯ ಪ್ರಜಾಪ್ರಭುತ್ವಕ್ಕೇ ಗಂಡಾಂತರ ತರುತ್ತದೆ.

ಚುನಾವಣೆ ಆಯೋಗವನ್ನು ಮೋದಿ ಸರ್ಕಾರದ ಕಪಿಮುಷ್ಟಿಯಿಂದ ಮುಕ್ತಗೊಳಿಸುವುದು ತುಂಬಾ ಮುಖ್ಯವಾಗಿದೆ. ಅದಕ್ಕಾಗಿ, ಮೊದಲ ಹೆಜ್ಜೆಯಾಗಿ, ಚುನಾವಣಾ ಆಯುಕ್ತರ ಆಯ್ಕೆ ಮತ್ತು ನೇಮಕವು ಸಂಪೂರ್ಣವಾಗಿ ಕೇವಲ ಕಾರ್ಯಾಂಗದ ವಿಶೇಷಾಧಿಕಾರ ಆಗುವುದನ್ನು ನಿಲ್ಲಿಸುವುದು ಅಗತ್ಯವಾಗಿದೆ. ಆಯ್ಕೆಗಾಗಿ ಒಂದು ವಿಶಾಲ ನೆಲೆಯ ಸಮಿತಿ ಅಥವಾ ಕೊಲೇಜಿಯಂ ಇರಬೇಕು. ಅದರಲ್ಲಿ ಕಾರ್ಯಾಂಗ ಮಾತ್ರವಲ್ಲದೆ ಉನ್ನತ ನ್ಯಾಯಾಂಗ, ಪ್ರತಿಪಕ್ಷ ನಾಯಕ ಮತ್ತು ಪ್ರಸಿದ್ಧ ನ್ಯಾಯವಿದರು ಇರಬೇಕು. ಆಯುಕ್ತರಾಗುವ ಅರ್ಹತೆಯನ್ನು ಆಡಳಿತ ಸೇವಾ ಅಧಿಕಾರಿಗಳಿಗೆ ಮಾತ್ರವೇ ಸೀಮಿತಗೊಳಿಸಲಾಗದು; ವಿಖ್ಯಾತ ನ್ಯಾಯವಿದರು ಮತ್ತು ಇತರ ಕ್ಷೇತ್ರಗಳ ಗಣ್ಯರು ಕೂಡ ಇರುವುದು ಸಾಧ್ಯವಿದೆ.

ಆಯೋಗದ ಘನತೆಯನ್ನು ಕಾಯ್ದುಕೊಳ್ಳಬೇಕಾದರೆ, ನಿವೃತ್ತರಾಗುವ ಮುಖ್ಯ ಚುನಾವಣಾ ಆಯುಕ್ತರು ಅಥವಾ ಯಾವುದೇ ಆಯುಕ್ತರು ಯಾವುದೇ ಸರ್ಕಾರಿ–ಪ್ರಾಯೋಜಿತ ಹುದ್ದೆಗಳನ್ನು ಸ್ವೀಕರಿಸುವುದನ್ನು ನಿಷೇಧಿಸಬೇಕು. ಹಣ ಬಲ ಹಾಗೂ ಪಕ್ಷಾಂತರ ನಿಯಂತ್ರಣಕ್ಕೆ ಮತ್ತು ಚುನಾವಣಾ ವ್ಯವಸ್ಥೆಯನ್ನು ಹೆಚ್ಚು ಪ್ರಾತಿನಿಧಿಕವಾಗಿಸಲು ಚುನಾವಣಾ ಸುಧಾರಣೆಗಳು ತುರ್ತಾಗಿ ಆಗಬೇಕಿದೆ. ಚುನಾವಣೆ ಆಯೋಗದ ಸುಧಾರಣೆಯೊಂದಿಗೇ ಈ ಎಲ್ಲ ಸುಧಾರಣೆಗಳ ಆರಂಭ ಆಗಬೇಕಿದೆ.

ಅನು: **ವಿಶ್ವ**



ಕಾರ್ಮಿಕ ಹಕ್ಕುಗಳಿಂದ ವಂಚಿತ ಅಂತರ-ರಾಜ್ಯ ವಲಸೆ ಕಾರ್ಮಿಕರು

ಬಿಜೆಪಿ ಸರ್ಕಾರವು ಒಂದೆಡೆ – ರಾಜ್ಯ ಸರ್ಕಾರಗಳು, ಕಾರ್ಮಿಕ ಇಲಾಖೆ, ಕಾರ್ಮಿಕ ಸಂಘಟನೆಗಳು – ಇವರೆಲ್ಲರನ್ನೂ ವಲಸೆ ಕಾರ್ಮಿಕರ ಸಂಕಷ್ಟಕ್ಕೆ ದೂಷಿಸುತ್ತಿದೆ. ಮತ್ತೊಂದೆಡೆ ಸರ್ಕಾರದ OSH ಸಂಹಿತೆಯು ಹಿಂದೆ ಇದ್ದ ವಲಸೆ ಕಾರ್ಮಿಕರ ಕಾಯಿದೆ ಒದಗಿಸಿದ್ದ ಸವಲತ್ತುಗಳಿಂದ ಅವರನ್ನು ವಂಚಿತರಾಗಿಸಿವೆ ಮತ್ತು ಕಾನೂನು ರಕ್ಷಣೆಯಿಂದ ಇವರಲ್ಲಿ ಬಹುತೇಕರನ್ನು ಹೊರದೂಡಿದೆ.ನೀತಿ ಆಯೋಗದ ಕಾರ್ಯಕಾರಿ ಪಡೆಯು ವಲಸೆ ಕಾರ್ಮಿಕರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ ರಾಜ್ಯ ಸರ್ಕಾರಗಳು ವಲಸೆ ಕಾರ್ಮಿಕರ ಕಾಯಿದೆಯನ್ನು ಕಾಯಿದೆಯ ಆಶಯಗಳಿಗೆ ತಕ್ಕಂತೆ ಜಾರಿ ಮಾಡಲಿಲ್ಲ; ಇರುವ ಸ್ಥಳೀಯ ವೇತನಕ್ಕಿಂತಲೂ ಅತ್ಯಂತ ಕಡಿಮೆ ವೇತನ ಪಡೆಯುವ ಮೂಲಕ ವಲಸೆ ಕಾರ್ಮಿಕರು ಸಂಕಷ್ಟ ಸ್ಥಿತಿಯಲ್ಲಿದ್ದಾರೆ; ಎಂದು ಹೇಳಿದೆ. ವಲಸೆ ಕಾರ್ಮಿಕರ ದುರಂತಕ್ಕೆ ಮೂಲ ಕಾರಣಗಳನ್ನು ಗುರುತಿಸಿರುವ ನೀತಿ ಆಯೋಗದ ಈ ರಾಷ್ಟ್ರೀಯ ನೀತಿ ಡಾಕ್ಯೂಮೆಂಟ್ ಕೇವಲ ವಲಸೆ ಕಾರ್ಮಿಕರ ಮತ ಚಲಾವಣೆ ಬಗ್ಗೆ ಮಾತ್ರ ಪ್ರಸ್ತಾಪಿಸಿದೆ! ಇಷ್ಟೆಲ್ಲಾ ಆದ ಮೇಲೆ, ವಲಸೆ ಕಾರ್ಮಿಕರು ವಿದ್ಯುನ್ಮಾನದ ಮೂಲಕ ರಾಜಕೀಯವಾಗಿ ಸಬಲರಾಗುವುದನ್ನು ವಿರೋಧಿಸುವ ಧೈರ್ಯ ಯಾರಿಗಿರುತ್ತದೆ? ಮಿಕ್ಕ ಕಾರ್ಯಗಳನ್ನು 'ಜಿಯೋ'ಗೆ ನಿರ್ವಹಿಸಲು ಬಿಡಲಾಗಿದೆ.

ಜೆ.ಎಸ್. ಮಜುಂದಾರ್ (ಅನು: ಶ್ರೃಂ.ಶಾ.ನಾ)

ಸಂಸತ್ತಿನಲ್ಲಿ ಫೆಬ್ರವರಿ 2021 ರಲ್ಲಿ ಕೇಂದ್ರ ಕಾರ್ಮಿಕ ಸಚಿವರಾದ ಶ್ರೀ ಸಂತೋಷ ಗಾಂಗ್ವರನೀತಿ ಆಯೋಗದ 'ವಲಸೆ ಕಾರ್ಮಿಕರ ರಾಷ್ಟ್ರೀಯ ನೀತಿ'ಯ ಕರಡನ್ನು ಮಂಡಿಸಿದರು. ಆದರೆ ಅದಕ್ಕೆ "ವಲಸೆ ಹೋದವರ ಮೇಲೆ ಕೋವಿಡ್-19 ಪರಿಣಾಮಗಳಿಗೆ ಸ್ಪಂದನೆ" ಎಂಬ ಸ್ವಲ್ಪ ಬೇರೆಯಾದ ಶೀರ್ಷಿಕೆ ಕೊಡಲಾಗಿತ್ತು. ಮಾರ್ಚ್ 24, 2020 ರಂದು ಪ್ರಧಾನ ಮಂತ್ರಿಗಳು ಧಿಡೀರ್ ಆಗಿ ಘೋಷಿಸಿದ ಲಾಕ್‌ಡೌನ್ ನಂತರ ಸುಮಾರು ಒಂದು ಕೋಟಿ ವಲಸೆ ಕಾರ್ಮಿಕರು ತಮ್ಮ ಮನೆಗಳಿಗೆ ಸುದೀರ್ಘ ನಡಿಗೆ ಪ್ರಾರಂಭಿಸಿದರು ಎಂದು ಈ ವರದಿ ಹೇಳುತ್ತದೆ. ಈ ಲಾಕ್‌ಡೌನ್‌ನಿಂದಾಗಿ ದಿಢೀರ್ ಆಗಿ ಕೆಲಸ ಮತ್ತು ಆದಾಯ ಕಳೆದುಕೊಂಡಿದ್ದು, ವಸತಿ ಮತ್ತು ಆಹಾರ ಇಲ್ಲವಾಗಿದ್ದು, ರೈಲು ಮತ್ತು ರಸ್ತೆ ಸಾರಿಗೆಯ ಸಸಂಪೂರ್ಣ ನಿಲುಗಡೆ-ಲಕ್ಷಗಟ್ಟಲೆ ಅಂತರರಾಜ್ಯ ವಲಸೆ ಕಾರ್ಮಿಕರು ಕೆಲವರು ತಮ್ಮ ಕುಟುಂಬ ಮತ್ತು ಮಕ್ಕಳೊಡನೆ ರಸ್ತೆ ಮತ್ತು ರೈಲು ಹಳಿಗಳ ಮೇಲೆ ನಡಿಗೆ ಶುರು ಮಾಡಿದರು. ನೂರಾರು ಜನರು ಹಿಂದೆಂದೂ ಅನುಭವಿಸಿರದ ಲಾಕ್‌ಡೌನ್ ಮತ್ತು ತಕ್ಷಣದ ಪರಿಹಾರದ ಕೊರತೆಯಿಂದಾಗಿ ಮಾರ್ಗ ಮಧ್ಯದಲ್ಲಿ ನಿಧನರಾದರು, ಕೋವಿಡ್-19 ಸೋಂಕಿನಿಂದಲ್ಲ. ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಬಂದ ವಿವರಗಳು, ಪ್ರಕಟಿಸಿದ ಛಾಯಾ ಚಿತ್ರಗಳು ದೇಶದಾದ್ಯಂತ ಜನರ ಪ್ರಜ್ಞೆಯನ್ನೂ ಕಲಕಿದವು.

ಹುಸಿ ಹೆಗ್ಗಳಿಕೆಗಳು:

ಲಾಕ್‌ಡೌನ್ ದುರಂತದ ನಂತರ ಬೃಹತ್ ಪ್ರಮಾಣದಲ್ಲಿ ಮೂಡಿ ಬಂದ ಸಾರ್ವಜನಿಕ ಅನುಕಂಪವನ್ನು ಬಳಸಿಕೊಂಡು, ಈ ಕರಡು ನೀತಿಯು "ವಿವಿಧ ರಾಜ್ಯಗಳು, ತಜ್ಞರು ಮತ್ತು ನಾಗರಿಕ ಸಮಾಜದ ಬೇಡಿಕೆಗಳಿಗೆ ಸ್ಪಂದನೆಯಾಗಿದೆ" ಎಂದು ಕೇಂದ್ರ ಕಾರ್ಮಿಕ ಸಚಿವರು ಫೆಬ್ರವರಿ 8 ರಂದು ಸಂಸತ್ತಿನಲ್ಲಿ ಘೋಷಿಸಿದರೂ ಸರ್ಕಾರದ ಈ ಹೆಗ್ಗಳಿಕೆ ಪೂರ್ಣ ಸುಳ್ಳು. ಮಾರ್ಚ್ 24, 2020 ರಂದು ಲಾಕ್‌ಡೌನ್ ಘೋಷಣೆಯಾಗಿದ್ದು; ಮನೆಗೆ ಮರಳುತ್ತಿದ್ದ ವಲಸೆ ಕಾರ್ಮಿಕ ದುರಂತ ವರದಿಗಳು ಬರುತ್ತಲೇ ಇದ್ದವು; ವಲಸೆ ಕಾರ್ಮಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲು ಸರ್ಕಾರ ತೋರಿದ ಸಂವೇದನಾಶೂನ್ಯತೆ, ಉಚಿತ ಪಡಿತರ ನೀಡದಿರುವುದು, ಕಾರ್ಮಿಕ ಸಂಘಟನೆಗಳು ಮತ್ತು ಇತರ ವಿಭಾಗಗಳು ಅಗತ್ಯವಿದ್ದವರಿಗೆ ನೇರ ನಗದು ನೀಡುವಂತೆ ಒತ್ತಾಯಿಸಿದರೂ ಇದನ್ನೂ ಕೇಳಿಸಿಕೊಳ್ಳದ ಸರ್ಕಾರದ ಧೋರಣೆಗಳ ವಿರುದ್ಧ ಏಪ್ರಿಲ್-ಜೂನ್ ಅವಧಿಯಲ್ಲಿ ಪ್ರತಿಭಟನೆಗಳು ಸಹ ನಡೆದಿದ್ದವು. ಇದಕ್ಕೆ ಬದಲಾಗಿ ಮೋದಿ ಸರ್ಕಾರವು ಸೆಪ್ಟೆಂಬರ್ 2020 ರಲ್ಲಿ ಅಂತರ-ರಾಜ್ಯ ವಲಸೆ ಕಾರ್ಮಿಕರು (ಉದ್ಯೋಗ ಮತ್ತು ಸೇವಾ ನಿಯಮಗಳ ನಿಯಂತ್ರಣ) ಕಾಯಿದೆ 1979 (ವಲಸೆ ಕಾರ್ಮಿಕರ ಕಾಯಿದೆ)ಯನ್ನು ರದ್ದುಗೊಳಿಸಿತು. ಈಗ, ಫೆಬ್ರವರಿ 2021 ರಲ್ಲಿ ಮೋದಿ ಸರ್ಕಾರವು ವಲಸೆ ಕಾರ್ಮಿಕರ ನೋವು ಬವಣೆಗಳಿಗೆ ಸ್ಪಂದಿಸುತ್ತಿದೆಯಂತೆ!

ಕಾರ್ಪೋರೇಟ್‌ಗಳಿಗೆ ಅನುಕೂಲವಾಗಿರುವ ಮೂರು ರೈತ ವಿರೋಧಿ ಮಸೂದೆಗಳು ಮತ್ತು ಮೂರು ಕಾರ್ಮಿಕ ವಿರೋಧಿ ಕಾರ್ಮಿಕ ಮಸೂದೆಗಳನ್ನು ಸಂಸತ್ತಿನಲ್ಲಿ ವಿರೋಧ ಪಕ್ಷಗಳ ತೀವ್ರ ಪ್ರತಿರೋಧ ಮತ್ತು ಬಹಿಷ್ಕಾರದ ನಡುವೆ ಯಾವುದೇ ರೀತಿಯ ಮತ ಚಲಾವಣೆಗೆ ಅವಕಾಶ ನೀಡದೆ ಅಂಗೀಕಾರಗೊಳಿಸಲಾಯಿತು. ಒಂದೇ ಬಾರಿಗೆ ಈ ಎರಡೂ ಮಸೂದೆಗಳು ಲೋಕಸಭೆಯಲ್ಲಿ ಸೆಪ್ಟೆಂಬರ್ 17 ರಂದು ಮತ್ತು ರಾಜ್ಯಸಭೆಯಲ್ಲಿ ಸೆಪ್ಟೆಂಬರ್ 20 ರಂದು ಅಂಗೀಕಾರವಾದವು ಮತ್ತು ಸೆಪ್ಟೆಂಬರ್ 27, 2020 ರಂದು ರಾಷ್ಟ್ರಪತಿಗಳು ತಮ್ಮ ಅಂಕಿತ ನೀಡಿದರು. ಕೇವಲ 10 ದಿನಗಳಲ್ಲಿ ಮೂರು ಕೃಷಿ ಮಸೂದೆಗಳು ಮತ್ತು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯದ ನಂತರ ದಶಕಗಳ ಹೋರಾಟ, ತ್ಯಾಗಗಳ ಮೂಲಕ ಕಾರ್ಮಿಕರು ಗಳಿಸಿಕೊಂಡಿದ್ದ ಕಾರ್ಮಿಕ ಕಾನೂನುಗಳನ್ನು ಬದಲಿಸಿ ರೂಪಿಸಿದ ಮೂರು ಕಾರ್ಮಿಕ ಸಂಹಿತೆಗಳು ಜಾರಿಗೆ ಬಂದವು. ಈ ಕ್ರಮಗಳಿಂದಾಗಿ ಭಾರತದ ಕೋಟ್ಯಾಂತರ ರೈತರು ಮತ್ತು ಕಾರ್ಮಿಕರು ಕೋವಿಡ್ ನಂತರದ ನವಭಾರತದಲ್ಲಿ ಮೋದಿ ಸರ್ಕಾರವು "ಆತ್ಮ ನಿರ್ಭರ ಭಾರತ" ಎಂದು ನೀಡಿರುವ ದಿಕ್ಕು ತಪ್ಪಿಸುವ ಘೋಷಣೆಯಡಿ ವಿದೇಶಿ ಮತ್ತು ಆಂತರಿಕ ಕಾರ್ಪೋರೇಟ್‌ಗಳ ಮರ್ಜಿಗೆ ಒಳಪಡುತ್ತಿದ್ದಾರೆ.

ಯಾವ ಕಾನೂನು ಸುರಕ್ಷೆಗಳನ್ನು ಮತ್ತು ಹೇಗೆ ತೆಗೆದು ಹಾಕಲಾಗಿದೆ

ಸೆಪ್ಟೆಂಬರ್ 2020 ರಲ್ಲಿ ಅಂಗೀಕಾರವಾದ ಮೂರು ಕಾರ್ಮಿಕ ಸಂಹಿತೆಗಳಲ್ಲಿ ಉದ್ಯೋಗದ ಸುರಕ್ಷತೆ, ಆರೋಗ್ಯ ಮತ್ತು ದುಡಿಮೆಯ ಸ್ಥಿತಿಗಳ ಸಂಹಿತೆ 2020 (OSH ಸಂಹಿತೆ) ಕೂಡಾ ಒಂದು. ಈ OSH ಸಂಹಿತೆಯ ಕಲಮು 143(1) ಮೂಲಕ ವಲಸೆ ಕಾರ್ಮಿಕರ ಕಾಯಿದೆ ಮತ್ತು ಉದ್ಯಮ ಆಧಾರಿತ ಕಾರ್ಮಿಕರಿಗಿದ್ದ 12 ಇನ್ನಿತರ ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಲಾಗಿದೆ. ಈ ಮೂಲಕ ವಲಸೆ ಕಾರ್ಮಿಕರಿಗಿದ್ದ ನಗಣ್ಯ ಕಾನೂನು ಸುರಕ್ಷತೆಯನ್ನೂ ಸಹ ತೆಗೆದು ಹಾಕಲಾಗಿದೆ.

ಕಾರ್ಮಿಕ ಕಾನೂನುಗಳು ಅನ್ವಯವಾಗುವುದರ ಜೊತೆಯಲ್ಲಿಯೇ ಈಗ ರದ್ದುಗೊಳಿಸಲಾದ ವಲಸೆ ಕಾರ್ಮಿಕರ ಕಾಯಿದೆಯಲ್ಲಿ ಕಡ್ಡಾಯವಾಗಿ ಪಾಲಿಸಲೇಬೇಕಿದ್ದ ಕೆಲವು ನಿರ್ದಿಷ್ಟ ಅವಕಾಶಗಳು ವಲಸೆ ಕಾರ್ಮಿಕರಿಗೆ ಇದ್ದವು – ಅವು ಯಾವುವೆಂದರೆ.

(1) (ಎ) ಸಮಾನ ಕೆಲಸಕ್ಕೆ ಬೇರೆ ಕಾರ್ಮಿಕರಿಗೆ ನೀಡುವ ಸಮಾನ ವೇತನ ಅಥವಾ ಕನಿಷ್ಟ ವೇತನ ಕಾಯಿದೆ 1984 ಪ್ರಕಾರ ಕನಿಷ್ಠ ವೇತನ ನೀಡುವುದು (ಯಾವುದು ಹೆಚ್ಚೋ ಅದನ್ನು); (ಬಿ) ಸ್ಥಳಾಂತರ ಅಲೊಯೆನ್ಸ್; (ಸಿ) ಪ್ರಯಣದ ಅವಧಿಯ ವೇತನವೂ ಒಳಗೊಂಡಂತೆ ಮನೆಗೆ ಪ್ರಯಾಣಿಸುವ ಅಲೋಯೆನ್ಸ್; (ಡಿ) ಉಚಿತವಾದ ಸೂಕ್ತ ವಸತಿ ಮತ್ತು ವೈದ್ಯಕೀಯ ಸೌಲಭ್ಯ.

(2) ವಲಸೆ ಕಾರ್ಮಿಕರನ್ನು ನೇಮಿಸುವ ಗುತ್ತಿಗೆದಾರರ ಮೇಲೆ ಜವಾಬ್ದಾರಿ ಹೇರುವುದು – (ಎ) ಮೂಲ ರಾಜ್ಯ ಮತ್ತು ವಲಸೆಗೆ ಹೋದ ರಾಜ್ಯಗಳೆರಡರಲ್ಲೂ ಕಡ್ಡಾಯ ನೋಂದಣಿ; (ಬಿ) 15 ದಿನಗಳೊಳಗೆ ಎರಡೂ ರಾಜ್ಯ ಸರ್ಕಾರಗಳಿಗೆ ವಲಸೆ ಕಾರ್ಮಿಕರ ವಿವರ ಮತ್ತು ನೇಮಕ ಮಾಡಲ್ಪಟ್ಟ ಸಂಸ್ಥೆಯ ವಿವರ ನೀಡುವುದು;(ಸಿ) ವಲಸೆ ಕಾರ್ಮಿಕರ ವಿವರಗಳಿರುವ ರಿಜಿಸ್ಟರ್ ಇಟ್ಟುಕೊಳ್ಳುವುದು ಮತ್ತು (ಡಿ) ಪ್ರಮುಖವಾಗಿ ಪ್ರತಿಯೊಂದು ವಲಸೆ ಕಾರ್ಮಿಕರಿಗೆ ಇಂಗ್ಲಿಷ್, ಹಿಂದಿ ಮತ್ತು ಸ್ಥಳೀಯ ಭಾಷೆಗಳಲ್ಲಿರುವ ಪಾಸ್ ಬುಕ್ ನೀಡಬೇಕು. ವಲಸೆ ಕಾರ್ಮಿಕನ ಪೋಟೋ ಜೊತೆಯಲ್ಲಿ (ಇ) ಹೆಸರು ಮತ್ತು ಉದ್ಯೋಗದ ಸ್ಥಳ; (ಎಫ್) ಉದ್ಯೋಗದ ಅವಧಿ; (ಜಿ) ವೇತನದ ದರ ಮತ್ತು ಪಾವತಿ ವಿಧಾನ; (ಹೆಚ್) ಸ್ಥಳಾಂತರ ಅಲೋಯೆನ್ಸ್ ಪಾವತಿ (ಐ) ಮರಳಿ ಬರುವ ಪ್ರಯಾಣ ವೆಚ್ಚ ನೀಡುವುದು; (ಜೆ) ವೇತನದಲ್ಲಿ ಏನಾದರೂ ಕಡಿತಗೊಳಿಸಿದರೆ, ಅದರ ವಿವರ, ಇತ್ಯಾದಿ; (ಕೆ) ಮಾರಣಾಂತಿಕ ಅಪಘಾತ ಅಥವಾ ಗಂಭೀರ ಗಾಯಗಳ ವರದಿಯನ್ನು ಎರಡೂ ರಾಜ್ಯ ಸರ್ಕಾರಗಳು ಮತ್ತು ವಲಸೆ ಕಾರ್ಮಿಕರ ಸಂಬಂಧಿಕರಿಗೆ ನೀಡುವುದು; (ಎಲ್) ಈ ಕಾಯಿದೆಯ ಅಂಶಗಳ ಉಲ್ಲಂಘನೆಗೆ ವಿಧಿಸಿರುವಶಿಕ್ಷೆಗಳಿಗೆ ಸಿದ್ಧವಾಗಿರುವುದು.

(3) ಸಂಸ್ಥೆಯೊಳಗಿನ ಮಾಲೀಕರಿಗೆ (ಎ) ನೋಂದಣಿ (ಬಿ) ಅಂತರ ರಾಜ್ಯ ಕಾರ್ಮಿಕರ ವಿವರಗಳಿರುವ ರಿಜಿಸ್ಟರ್‌ಗಳನ್ನು ಇಟ್ಟುಕೊಳ್ಳುವುದು; (ಸಿ) ಪ್ರಮುಖ ಮಾಲೀಕರ ನಿಗಾದಲಿ ವೇತನ ಮತ್ತು ಅಲೋಯೆನ್ಸ್‌ಗಳನ್ನು ಗುತ್ತಿಗೆದಾರರು ನೀಡುವ ಜವಾಬ್ದಾರಿ ಮತ್ತು ಒಂದು ವೇಳೆ ಗುತ್ತಿಗೆದಾರ ಪಾವತಿಸದಿದ್ದಲ್ಲಿ, ಪ್ರಮುಖ ಮಾಲೀಕನೇ ನೀಡುವುದು; (ಡಿ) ಈ ಕಾಯಿದೆಯ ಉಲ್ಲಂಘನೆಗೆ ವಿಧಿಸಿರುವ ಶಿಕ್ಷೆಗೆ ಸಿದ್ಧರಿರುವುದು.

OSH ಸಂಹಿತೆಯಲ್ಲಿ ಉಳಿದಿರುವುದು ಏನು?


ಈ OSH ಸಂಹಿತೆಯ ಎರಡನೇ ಭಾಗವು ಅಂತರ-ರಾಜ್ಯ ವಲಸೆ ಕಾರ್ಮಿಕರಿಗೆ ಸಂಬಂಧಪಟ್ಟ ಕೆಲವು ಉಪಬಂಧಗಳನ್ನು ಹೊಂದಿದೆ. ಆಳುವ ಪ್ರಭುತ್ವವು ವಲಸೆ ಕಾರ್ಮಿಕರ ಕಾಯಿದೆಯ ಉಪಬಂಧಗಳನ್ನು ಔಖಊ ನಲ್ಲಿ ಅಡಕಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತದೆ. ಆದರೆ, ಇದೂ ಸಹ ಸುಳ್ಳು. ಕೆಳ ಕಾಣಿಸಿದ ಕೆಲವು ಉಪಬಂಧಗಳನ್ನು ಹೊರತುಪಡಿಸಿ, ರದ್ದುಪಡಿಸಲಾದ ವಲಸೆ ಕಾರ್ಮಿಕ ಕಾಯಿದೆಯ ಉಳಿದೆಲ್ಲಾ ಉಪಬಂಧಗಳನ್ನು ತೆಗೆದುಹಾಕಲಾಗಿದೆ.

1. ವಲಸೆ ಕಾರ್ಮಿಕರ ಕಾಯಿದೆ ಪ್ರಕಾರ ಈ ಕಾಯಿದೆ ಅನ್ವಯವಾಗುವ ಸಂಸ್ಥೆ/ಗುತ್ತಿಗೆದಾರರ ಬಳಿ ಕನಿಷ್ಟ 5 ವಲಸೆ ಕಾರ್ಮಿಕರಿರಬೇಕು ಎಂದಿತ್ತು. ಈಗ OSH ಸಂಹಿತೆಯಲ್ಲಿ ಈ ಕನಿಷ್ಠ ಮಿತಿಯನ್ನು 10 ಕ್ಕೆ ಹೆಚ್ಚಿಸಲಾಗಿದೆ. ಅಂದರೆ, ಬಹು ಸಂಖ್ಯೆಯ ಸಣ್ಣ ಕೈಗಾರಿಕೆಗಳು ಮತ್ತು ಸೇವಾ ಉದ್ದಿಮೆಗಳಲ್ಲಿ ಕೆಲಸ ಮಾಡುವ ವಲಸೆ

ಪುಟ 15 ನೋಡಿ


ರೋಸಾ ಲಕ್ಸಂಬರ್ಗ್ 150 ನೇ ವಾರ್ಷಿಕ

ಕೆಂಪು ರೋಸಾ : 'ಕ್ರಾಂತಿಯ ಬೆಂಕಿ', 'ಎತ್ತರದಲ್ಲಿ ಹಾರುವ ಹದ್ದು'



ರೋಸಾ ಲಕ್ಸಂಬರ್ಗ್ ಮಹಾನ್ ಕಮ್ಯುನಿಸ್ಟ್ ಕ್ರಾಂತಿಕಾರಿ ನಾಯಕರುಗಳಲ್ಲಿ – ಮೊದಲ ಮಹಿಳೆ, ಕ್ರಾಂತಿಯ ಪ್ರಯತ್ನದಲ್ಲಿ ಹುತಾತ್ಮರಾದವರು, ಪರಿಷ್ಕರಣವಾದದ ವಿರುದ್ಧ ಮೊದಲ ದನಿ ಎತ್ತಿದವರು – ಇತ್ಯಾದಿಗಳಿಂದ ವಿಶಿಷ್ಟರಾದವರು. ಪ್ರಸಿದ್ಧ ಮಹಿಳಾ ನಾಯಕಿ ಕ್ಲಾರಾ ಜೆಟ್ಕಿನ್ 'ಕ್ರಾಂತಿಯ ಬೆಂಕಿ' ಮತ್ತು ಲೆನಿನ್ ಅವರು 'ಎತ್ತರದಲ್ಲಿ ಹಾರುವ ಹದ್ದು' ಎಂದು ಅವರನ್ನು ಕರೆದಿದ್ದರು. ಅವರ ಹುಟ್ಟಿನ 150ನೇ ವಾರ್ಷಿಕದ ಸಂದರ್ಭದಲ್ಲಿ ವಿಶೇಷ ಲೇಖನ.

ಬೃಂದಾ ಕಾರಟ್ ಅನುವಾದ: ಲವಿತ್ರ ವಸ್ತ್ರದ



ಮಾರ್ಚ್ 5, 2021 ರೋಸಾ ಲಕ್ಸಂಬರ್ಗ್ ಅವರ 150ನೇ ಜನ್ಮದಿನ. ಲಕ್ಸಂಬರ್ಗ್ ಅವರ ಸಂಗಾತಿಗಳು ಅವರನ್ನು 'ರೆಡ್ ರೋಸಾ'(ಕೆಂಪು ರೋಸಾ) ಎಂದೇ ಕರೆಯುತ್ತಿದ್ದರು. ಅವರೊಬ್ಬ ಮಾರ್ಕ್ಸ್‌ವಾದಿ, ಅಂತರ್ರಾಷ್ಟ್ರೀಯವಾದಿ, ಕ್ರಾಂತಿಕಾರಿ ಮತ್ತು ಕಾರ್ಮಿಕ ವರ್ಗದ ಪ್ರಾಯೋಗಿಕ ಹೋರಾಟಗಳಲ್ಲಿ ಭಾಗಿಯಾಗುವವರು. ಅದಮ್ಯ ಇಚ್ಛಾಶಕ್ತಿಯುಳ್ಳ ಮತ್ತು ಯಾರಿಗೂ ಬಗ್ಗದ ಮಹಿಳೆ ರೆಡ್ ರೋಸಾ. ಅವರ ಬಲ ಮತ್ತು ಧೈರ್ಯವು, ಶೋಷಕರಲ್ಲಿ ನಡುಕವನ್ನುಂಟು ಮಾಡುತ್ತಿತ್ತು. ಅವರು ಪುರುಷರ ಅಬೇಧ್ಯ ಕೋಟೆಗಳಂತಿದ್ದ ಹಲವು ಕ್ಷೇತ್ರಗಳನ್ನು ಬೇಧಿಸಿ ಹೊಕ್ಕ ಧೀರ ಮಹಿಳೆ. ಕಾರ್ಮಿಕ ವರ್ಗದ ದ್ರೋಹಿಗಳು ಮತ್ತು ಆಳುವ ವರ್ಗದ ಏಜೆಂಟರುಗಳಿಂದ ಭೀಕರವಾಗಿ ಕೊಲೆಯಾದ ನೂರು ವರ್ಷಗಳ ನಂತರವೂ ಆಕೆಯ ಕೆಲಸ ಮತ್ತು ಮೇಲ್ಪಂಕ್ತಿಯನ್ನೂ ಇನ್ನೂ ನೆನೆಸಿಕೊಳ್ಳಲಾಗುತ್ತಿರುವ ಅಪ್ರತಿಮ ಮಹಿಳೆ.

ಜೊಮೆಸ್ಕ್ ಎಂಬ ಪೋಲಿಶ್ ನಗರದ ಮಧ್ಯಮವರ್ಗದ ಯಹೂದಿ ಕುಟುಂಬದಲ್ಲಿ ರೋಸಾ ಜನಿಸಿದರು. ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಅವರು ತೀವ್ರವಾಗಿ ಅನಾರೋಗ್ಯಕ್ಕೆ ತುತ್ತಾದರು. ಅವರ ಅನಾರೋಗ್ಯದ ಕಾರಣದಿಂದ ದೇಹದ ಸೊಂಟ ಮತ್ತು ಕಾಲುಗಳಲ್ಲಿ ತೀವ್ರ ನೋವನ್ನು ಜೀವನದುದ್ದಕ್ಕೂ ಅನುಭವಿಸಿದರು. ಆದರೆ ಆಕೆಯ ದುರ್ಬಲವಾದ ಮೈಕಟ್ಟು ಮತ್ತು ದೈಹಿಕ ದೌರ್ಬಲ್ಯಗಳು ಸಮಾಜವಾದದ ಬಗೆಗಿನ ಆಕೆಯ ಅಪಾರ ಬದ್ಧತೆಯನ್ನು, ಚೈತನ್ಯವನ್ನು ಕುಂದಿಸಲಿಲ್ಲ.

ರೋಸಾ ಅವರ ರಾಜಕೀಯ ಜೀವನವು ಅವರ 16ನೇ ವಯಸ್ಸಿನಲ್ಲಿ ಪೋಲೆಂಡಿನ ಪ್ರೊಲೆಟಾರಿಯಟ್ (ಶ್ರಮಜೀವಿ) ಪಕ್ಷಕ್ಕೆ ಸೇರಿದಾಗ ಪ್ರಾರಂಭವಾಯಿತು. ಆ ಸಮಯದಲ್ಲಿ ಆ ಪಕ್ಷವು ತೀವ್ರ ದಬ್ಬಾಳಿಕೆಯಲ್ಲಿತ್ತು. ಅವರ ಮೊದಲ ಹೋರಾಟವೆಂದರೆ ಸಾವಿರಾರು ಕಾರ್ಮಿಕರನ್ನು ಅಣಿನೆರೆದ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿದ್ದು. ಹೋರಾಟಗಳನ್ನು ಹತ್ತಿಕ್ಕಲು ಸರಕಾರವು ಪಕ್ಷದ ನಾಲ್ಕು ಜನ ಮುಖಂಡರನ್ನು ಗಲ್ಲಿಗೇರಿಸಿತ್ತು. ರೋಸಾ ಮತ್ತು ಇತರರು ರಹಸ್ಯವಾಗಿ ಭೇಟಿಯಾಗುವ ಸಂದರ್ಭಗಳು ಏರ್ಪಟ್ಟವು ಏಕೆಂದರೆ ಅವರಲ್ಲಿ ಅನೇಕರ ಹೆಸರು ಪೊಲೀಸರ ಪಟ್ಟಿಯಲ್ಲಿತ್ತು. ಸಂಗಾತಿಗಳು ರೋಸಾಳನ್ನು ಸ್ವಿಜಲ್ಯಾರ್ಂಡಿಗೆ ಹೋಗಲು ನೀಡಿದ ಸಲಹೆಯ ಮೇರೆಗೆ ಆಕೆ 1889 ರಲ್ಲಿ ಅಲ್ಲಿಗೆ ಹೋದರು

ಆಗ ಸ್ವಿಟ್ಜಲ್ಯಾರ್ಂಡ್, ರಷ್ಯಾ ಮತ್ತು ಪೋಲೆಂಡಿನ ಅನೇಕ ಹೋರಾಟಗಾರರ ಕೇಂದ್ರವಾಗಿತ್ತು. ಇವರಲ್ಲಿ ರಷ್ಯಾದ ಮಾರ್ಕ್ಸ್‌ವಾದಿ ಕಾರ್ಮಿಕ ವಿಮೋಚನಾ ಗುಂಪು ಸೇರಿತ್ತು. ಈ ಗುಂಪನ್ನು 1883 ರಲ್ಲಿ ಜಾರ್ಜಿ ಪ್ಲೆಖಾನೋವ್, ವೇರಾ ಜಾಸುಲಿಚ್ ಮತ್ತು ಲಿಯೋ ಡಾಯಿಟ್ಸ್ ಸ್ಥಾಪಿಸಿದ್ದರು. ರೋಸಾ ಅವರು ಲಿಯೋ ಜೋಗಿಚಸ್ (ಅವರ ಮುಂದಿನ ಜೀವನದುದ್ದಕ್ಕೂ ಬಾಳಸಂಗಾತಿಯಾದ ಲಿತುವೇನಿಯನ್ ಮಾರ್ಕ್ಸ್‌ವಾದಿ) ಜೊತೆಗೆ ಜ್ಯೂರಿಚ್ ವಿಶ್ವವಿದ್ಯಾಲಯವನ್ನು ಸೇರಿದರು. ರೋಸಾ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದರು. "ಪೋಲೆಂಡಿನ ಕೈಗಾರಿಕಾ ಅಭಿವೃದ್ಧಿ" ವಿಷಯದ ಕುರಿತು ತಮ್ಮ ಡಾಕ್ಟರೇಟ್ ಪ್ರಬಂಧವನ್ನು ಬರೆದಿದ್ದರು. ರೋಸಾ ಮತ್ತು ಲಿಯೋ ಜೊತೆ ಸೇರಿ ಪೋಲೆಂಡ್ ರಾಜಸತ್ತೆ ಮತ್ತು ಲಿಥುವಾನಿಯದ ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿಯನ್ನು ಸ್ಥಾಪಿಸಿದರು.

ಆ ದಿನಗಳಲ್ಲಿ ಜರ್ಮನಿಯು ಕಾರ್ಮಿಕ ಚಳುವಳಿಯ ಕೇಂದ್ರವಾಗಿತ್ತು. ಇದರೊಂದಿಗೆ ಮಾರ್ಕ್ಸ್‌ವಾದಿ ಚಿಂತನೆಗಳ ಮತ್ತು ಕ್ರಿಯೆಗಳ ಕೇಂದ್ರವೂ ಆಗಿತ್ತು. ಜರ್ಮನಿಯಲ್ಲಿ ಮುಖ್ಯ ಮಾರ್ಕ್ಸ್‌ವಾದಿ ಪಕ್ಷವೆಂದರೆ "ಸೋಶಿಯಲ್ ಡೆಮೊಕ್ರೆಟಿಕ್ ಪಾರ್ಟಿ ಆಫ್ ಜರ್ಮನಿ (ಎಸ್.ಪಿ.ಡಿ) ಆಗಿತ್ತು. ಜರ್ಮನಿಯ ಪೌರತ್ವವನ್ನು ಪಡೆದು ರೋಸಾ 1898 ರಲ್ಲಿ ಸ್ವಿಜಲೆರ್ಂಡ್ ನಿಂದ ಹೊರಟು ಬರ್ಲಿನ್‌ಗೆ ಬಂದರು. ಜರ್ಮನ್ ನಿಯಂತ್ರಣದಲ್ಲಿರುವ ಪೊಲೀಶ್ ಪ್ರದೇಶದಲ್ಲಿ ಎಸ್.ಪಿ.ಡಿ ತನ್ನನ್ನು ತಾನು ಸ್ಥಾಪಿಸಿಕೊಳ್ಳಲು ಕೆಲಸ ಮಾಡುತ್ತಿದ್ದರಿಂದ, ರೋಸಾ ಮೊದಲಿಗೆ ಪಕ್ಷದ ಪೋಲಿಶ್ ಸಂಬಂಧಿತ ಕೆಲಸಗಳಲ್ಲಿ ತೊಡಗಿಸಿಕೊಂಡರು. ಆದರೆ ಬರಿಯ ಪೋಲಿಶ್ ಪರಿಣತೆ ಮಾತ್ರವಾಗಿ ಮುಂದುವರೆಯುವುದು ರೋಸಾಗೆ ಇಷ್ಟವಿರಲಿಲ್ಲ. ಇತರ ಹಲವು ವಾಗ್ವಾದಗಳು ರೋಸಾರನ್ನು ಕರೆಯುತ್ತಿದ್ದವು.


ಜರ್ಮನ್ ಸಮಾಜವಾದಿ ಚಳುವಳಿಯು ಎರಡು – ಕ್ರಾಂತಿಕಾರಿ ಮತ್ತು ಪರಿಷ್ಕರಣವಾದಿ ಪ್ರವೃತ್ತಿಯ–ಮುಖ್ಯ ಮತ್ತು ಸ್ಪರ್ಧಾತ್ಮಕ ಬಣಗಳಾಗಿ ಒಡೆದಿತ್ತು. ಪರಿಷ್ಕರಣವಾದಿಗಳು, ವ್ಯವಸ್ಥೆಯೊಳಗೆ ಕೆಲಸ ಮಾಡಬೇಕು ಮತ್ತು ಸಂಸತ್ತಿನ ಕೆಲಸಕ್ಕೆ ಆದ್ಯತೆ ಕೊಡಬೇಕು ಎಂದು ಪ್ರತಿಪಾದಿಸಿದರು. ಅವರ ಮುಖ್ಯ ವಕ್ತಾರ ಎಡ್ವರ್ಡ್ ಬರ್ನ್‌ಸ್ಟೈನ್ ಆಗಿದ್ದರು. ಜರ್ಮನ್ ಪ್ರಭುತ್ವವು ತನ್ನ ಕಾನೂನುಗಳನ್ನು ಎತ್ತಿ ಹಿಡಿಯುವಂತೆ ಮತ್ತು ತನ್ನ ಕಾರ್ಮಿಕ ವರ್ಗದ ಕುರಿತು ಉದಾರ ಭಾವನೆ ಇರುವಂತೆ ಮಾಡಲು ಎಸ್.ಪಿ.ಡಿ ಒತ್ತಡ ಹೇರಬೇಕು. ಜರ್ಮನ್ ಪ್ರಭುತ್ವದ ದಿಕ್ಕು ಈಗಾಗಲೇ ಸಮಾಜವಾದದ ಕಡೆಗೆ ಇದೆ. ಅದನ್ನು ಆ ವಿಕಾಸದ ಹಾದಿಯಲ್ಲಿ ತಳ್ಳುವುದು ಎಸ್.ಪಿ.ಡಿ ಕೆಲಸವಾಗಿದೆ, ಎಂದು ಬರ್ನ್‌ಸ್ಟೈನ್ ವಾದಿಸಿದರು. ರೋಸಾ ಬರೆದ 'ಸುಧಾರಣೆ ಅಥವಾ ಕ್ರಾಂತಿ' ಎಂಬ ಕಿರುಪುಸ್ತಕ ಪರಿಷ್ಕರಣಾವಾದದ ಕಟುಟೀಕೆಯಾಗಿತ್ತು. ಶ್ರಮಜೀವಿಗಳು ಅಧಿಕಾರವನ್ನು ವಶಪಡಿಸಿಕೊಂಡು ಉತ್ಪಾದನಾ ಪ್ರಕ್ರಿಯೆಯನ್ನು ಪರಿವರ್ತಿಸಿದರೆ ಮಾತ್ರ, ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವಿನ ವೈರುಧ್ಯವನ್ನು ನಿವಾರಿಸಬಹುದು. 'ವಿಕಾಸ ಹೊಂದುತ್ತಿರುವ ಸಮಾಜವಾದ"ದ ಮೂಲಕ ಇದು ಸಾಧ್ಯವಿಲ್ಲ ಎಂದು ರೋಸಾ ನಂಬಿದ್ದರು.

ಅಗಸ್ಟ್ ಬೆಬೆಲ್, ಕಾರ್ಲ್ ಕೌಟ್ಸ್ಕಿ, ವಿಲ್ಹೆಲ್ಮ್ ಲೈಬ್ನಿಕ್ತ್ ಮತ್ತು ರೋಸಾ ಲಕ್ಸಂಬರ್ಗ್ ಅವರನ್ನು ಒಳಗೊಂಡ ಎಸ್.ಪಿ.ಡಿ ಯ ಎಡಪಂಥಿಯರು ಬರ್ನ್‌ಸ್ಟೈನ್‌ರನ್ನು ವಿರೋಧಿಸಿದರು. ಜರ್ಮನಿಗೆ ಬಂದು ಕೇವಲ 2 ವರ್ಷಗಳಾಗಿದ್ದ ರೋಸಾ ಲಕ್ಸಂಬರ್ಗ್ ಬರ್ನ್‌ಸ್ಟೈನ್ ಅವರ ಮೇಲೆ ಸೈದ್ಧಾಂತಿಕ ದಾಳಿಯ ಮುಂದಾಳತ್ವ ವಹಿಸಿದರು. 1900ರಲ್ಲಿ ಮೊದಲು ಪ್ರಕಟವಾದ ಅವರ ಅದ್ಭುತ ಪ್ರಬಂಧ "ಸುಧಾರಣೆ ಅಥವಾ ಕ್ರಾಂತಿ" ಪಕ್ಷದಲ್ಲಿ ಬಹಳ ಚರ್ಚೆಗೆ ಒಳಗಾಯಿತು. ಶತಮಾನಗಳ ನಂತರವೂ ಪ್ರಸ್ತುತವಾಗುವ ಕೆಲವು ಮೂಲಭೂತ ಪ್ರಶ್ನೆಗಳನ್ನು ಈ ಪ್ರಬಂಧವು ಹುಟ್ಟುಹಾಕುತ್ತದೆ. ಇದು ಕಾರ್ಯವ್ಯೂಹ ಮತ್ತು ಕಾರ್ಯತಂತ್ರಗಳ ನಡುವಿನ ಸಂಬಂಧವನ್ನು ಅತ್ಯಂತ ಸರಳವಾದ, ಸ್ಪಷ್ಟವಾದ ಮತ್ತು ನಿಸ್ಸಂದಿಗ್ಧವಾದ ರೀತಿಯಲ್ಲಿ ನಿರೂಪಿಸುತ್ತದೆ. (ಕ್ರಾಂತಿ ಮತ್ತು) ವ್ಯವಸ್ಥೆಯೊಳಗಿನ ಸಾಮಾಜಿಕ ಸುಧಾರಣೆಯ ಹೋರಾಟಗಳ ನಡುವೆ ಯಾವುದೇ ವಿರೋಧಾಭಾಸಗಳಿಲ್ಲ ಎಂದು ಅದು ತೋರಿಸುತ್ತದೆ. ಚುನಾವಣೆಯಲ್ಲಿ ಭಾಗವಹಿಸುವ ಪ್ರಾಮುಖ್ಯತೆಯನ್ನು ರೋಸಾ ಎಂದಿಗೂ ಕಡೆಗಣಿಸಿರಲಿಲ್ಲ. ಜನರನ್ನು ಸಜ್ಜುಗೊಳಿಸಲು ಸಹಾಯಕವಾಗುವ ಬಂಡವಾಳಶಾಹಿ ಒದಗಿಸಿದ ಕಾರ್ಯವಿಧಾನಗಳನ್ನು ಬಳಸುವುದರ ಕುರಿತು ಅವರು ಒತ್ತಿ ಹೇಳಿದರು.

ಇದೇ ಸಂದರ್ಭದಲ್ಲಿ ಇದಕ್ಕೆ ಸಮಾನಾಂತರವಾಗಿ ರಷ್ಯಾದಲ್ಲಿ ಅನೇಕ ಬೆಳವಣಿಗೆಗಳು ನಡೆಯುತ್ತಿದ್ದವು ಮತ್ತು ಅವುಗಳು ಅಂತಿಮವಾಗಿ ಬೋಲ್ಶೆವಿಕ್ ಮತ್ತು ಮೆನ್ಶೆವಿಕ್ ಗಳ ನಡುವಿನ ವಿಭಜನೆಗೆ ಕಾರಣಗಳಾದವು. ಅಲ್ಲೂ 'ಪಾರ್ಲಿಮೆಂಟರಿವಾದ' (ಬೂರ್ಜ್ವಾ ಪಾರ್ಲಿಮೆಂಟರಿ ವ್ಯವಸ್ಥೆಯ ಮೂಲಕವೇ ಸಮಾಜವಾದ ಸಾಧಿಸಬಹುದು) ಮತ್ತು 'ಆರ್ಥಿಕವಾದ' (ಕಾರ್ಮಿಕ ವರ್ಗದ ಆರ್ಥಿಕ ಬೇಡಿಕೆಗಳಿಗೆ ಮಾತ್ರ ಆದ್ಯತೆ ನೀಡಿ ಅದಕ್ಕೆ ಸೀಮಿತಗೊಳ್ಳುವುದು) ವಿವಾದಾತ್ಮಕ ವಿಷಯಗಳಾಗಿದ್ದವು. ಆ ಸಮಯದಲ್ಲಿಯೇ ಬರ್ನ್‌ಸ್ಟೈನ್ ನ ಸಿದ್ಧಾಂತದ, ಪರಿಷ್ಕರಣಾವಾದಿ ಸಿದ್ಧಾಂತದ ವಿವಿಧ ಅಂಶಗಳು ಮತ್ತು ಅದರ ವರ್ಗದ ಬೇರುಗಳ ವಿಶ್ಲೇಷಣೆ ಕುರಿತು ಬರೆದ ರೋಸಾಳ ಕಿರುಪುಸ್ತಕವು ಅವುಗಳ ಬಗ್ಗೆ ಹೊಸ

ಪುಟ 10 ನೋಡಿ

ಮಾಡಿದ "ತಪ್ಪುಗಳನ್ನು" ಮೀರಿಸುವಷ್ಟು ರೋಸಾ ಅವರ ಕೊಡುಗೆಗಳಿರುವುದರಿಂದಾಗಿಯೇ, ಅವರ ಸಂಪೂರ್ಣ ಕೃತಿಗಳನ್ನು ಪ್ರಕಟಿಸಬೇಕೆಂದು ಲೆನಿನ್ ಅವರು ಬಯಸಿದ್ದರು. ಜರ್ಮನ್ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿಯಲ್ಲಿ ಪರಿಷ್ಕರಣಾವಾದದ ವಿರುದ್ಧದ ಹೋರಾಟದಲ್ಲಿ, ಬರ್ನ್‌ಸ್ಟೈನ್ ಮತ್ತು ಕೌತ್ಸ್‌ಕಿ ಯಂತಹ ಹಿರಿಯ ನಾಯಕರನ್ನು ಎದುರು ಹಾಕಿಕೊಂಡು, ರೋಸಾ ಅವರು ಅಗ್ರಗಣ್ಯರಾಗಿದ್ದರು. ಅವರು ಯುದ್ಧದ ಬಗ್ಗೆ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳ ಉಗ್ರ ರಾಷ್ಟ್ರೀಯತಾವಾದಿ ನಿಲುವುಗಳನ್ನು ಸ್ವೀಕರಿಸಲು ನಿರಾಕರಿಸುವ ನಿಜವಾದ ಅಂತರರಾಷ್ಟ್ರೀಯವಾದಿ ಆಗಿದ್ದರು. ಅವರಿಗೆ ವರ್ಗ ಹೋರಾಟದಲ್ಲಿ ನಂಬಿಕೆಯಿತ್ತು. ಅತಿಯಾದ ಕೇಂದ್ರೀಕರಣದ ಅಪಾಯಗಳ ಬಗ್ಗೆ ಆಕೆಯ ವಿಚಾರಗಳು ಲೆನಿನ್ ನೇತೃತ್ವದ ಪಕ್ಷಕ್ಕೆ ಸಂಬಂಧಿಸಿದಂತೆ ತಪ್ಪಾಗಿ ಪ್ರತಿಪಾದಿತವಾಗಿರಬಹುದು. ಆದರೆ ನಂತರದ ವರ್ಷಗಳಲ್ಲಿ ಅನೇಕ ಸಮಾಜವಾದಿ ದೇಶಗಳಲ್ಲಿನ ಪಕ್ಷಗಳಲ್ಲಿ ಆಕೆ ನಿರೂಪಿಸಿದ ಅನೇಕ ಅಪಾಯಗಳು ನಿಜವಾದವು ಎಂಬುದನ್ನು ಅಲ್ಲಗಳೆಯುವಂತಿಲ್ಲ.



ರೋಸಾ ಲಕ್ಸಂಬರ್ಗ್ 150 ನೇ ವಾರ್ಷಿಕ....... ಪುಟ 9 ರಿಂದ

ಹಾದಿಗಳನ್ನು ತೆರೆದಿಡುತ್ತವೆ. ಆದ್ದರಿಂದ ವರ್ಗ ಸಹಕಾರದ ವಿರುದ್ಧದ ಅಂತರರಾಷ್ಟ್ರೀಯ ಹೋರಾಟಕ್ಕೆ ರೋಸಾ ನೀಡಿದ ಕೊಡುಗೆ ಇತರರಿಗಿಂತ ಕಡಿಮೆ ಪ್ರಾಮುಖ್ಯತೆಯನ್ನು ಹೊಂದಿಲ್ಲ ಎಂದು ಹೇಳಬಹುದು.

ಈ ಅದ್ಭುತ ಕ್ರಾಂತಿಕಾರಿಗೆ ಸಿದ್ಧಾಂತ ಮಾತ್ರ ಸಾಕಾಗಲಿಲ್ಲ. ಆಕೆ ಸದಾ ಯಾವುದಾದರೂ ಕಾರ್ಯಾಚರಣೆಯಲ್ಲಿ ಧುಮುಕುತ್ತಿದ್ದರು. 1905ರಲ್ಲಿ, ರಷ್ಯಾದಲ್ಲಿ ಮೊದಲ ಕ್ರಾಂತಿಕಾರಿ ದಂಗೆ ನಡೆದಾಗ, ರೋಸಾ ರಷ್ಯಾದ ಹಿಡಿತದಲ್ಲಿರುವ ಪೋಲೆಂಡಿನ ಭಾಗಕ್ಕೆ ಯಾರಿಗೂ ತಿಳಿಯದ ರೀತಿಯಲ್ಲಿ ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಎಲ್ಲಾ ರೀತಿಯ ಸಭೆಗಳನ್ನು ನಿಷೇಧಿಸಲಾಗಿತ್ತು. ಆದರೂ ಕಾರ್ಮಿಕರು ತಮ್ಮ ಭದ್ರಕೋಟೆಯಾದ ಕಾರ್ಖಾನೆಗಳಲ್ಲಿ ಸಭೆಗಳನ್ನು ನಡೆಸುತ್ತಿದ್ದರು. ರೋಸಾ ಕಾನೂನುಬಾಹಿರವಾಗಿ ಪತ್ರಿಕೆಯೊಂದನ್ನು ಹೊರತಂದು ಎಲ್ಲಾ ಕಾರ್ಮಿಕರಿಗೆ ಹಂಚುತ್ತಿದ್ದರು. ಮಾರ್ಚ್ 1906 ರಲ್ಲಿ ಆಕೆಯನ್ನು ಬಂಧಿಸಿ ಜೈಲಿಗೆ ಹಾಕಲಾಗಿತ್ತು. ನಾಲ್ಕು ತಿಂಗಳ ನಂತರ, ಅವರ ಅನಾರೋಗ್ಯ ಮತ್ತು ಜರ್ಮನ್ ಪಾಸ್‌ಪೋರ್ಟ್ ನ ಆಧಾರದ ಮೇಲೆ ಅಧಿಕಾರಿಗಳು ಆಕೆಯನ್ನು ಬಿಡುಗಡೆ ಮಾಡಿದರು. ಅವರನ್ನು ರಷ್ಯಾದಿಂದ ಗಡಿಪಾರು ಮಾಡಲಾಯಿತು.

ಪರಿಷ್ಕರಣವಾದಿಗಳ ಜೊತೆಗೆ ಮತ್ತು ಕಾರ್ಲ್ ಕೌತ್ಸ್ಕಿ ನೇತೃತ್ವದ ಗುಂಪಿನೊಂದಿಗೆ ನ ರೋಸಾ ಅವರ ಭಿನ್ನಾಭಿಪ್ರಾಯಗಳು ತೀಕ್ಷ್ಣವಾಗಿ ಮತ್ತು ಕಹಿಯಾಗಿ ಬೆಳೆಯುತ್ತಾ ಹೋದವು. ಸಾಮ್ರಾಜ್ಯಶಾಹಿ ಆಕಾಂಕ್ಷೆಗಳಿಂದ ಹುಟ್ಟಿಬೆಳೆಯುವ ಜರ್ಮನ್ ಆಳುವ ವರ್ಗಗಳ ಯುದ್ಧ ಮತ್ತು ಮಿಲಿಟರಿವಾದದ ಅಪಾಯಗಳ ಬಗ್ಗೆ ಅವರು ಮೊದಲೇ ಎಚ್ಚರಿಸಿದ್ದರು ಮತ್ತು ಯುದ್ಧ ಅನಿವಾರ್ಯ ಎಂದು ಅವರಿಗೆ ಮನವರಿಕೆಯಾಗಿತ್ತು. ತನ್ನ ಪಕ್ಷದಲ್ಲಿನ ಮತ್ತು ಇತರ ಅನೇಕ ಯುರೋಪಿಯನ್ ಸಮಾಜವಾದಿ ಪಕ್ಷಗಳಲ್ಲಿನ ಪರಿಷ್ಕರಣಾವಾದಿ ಪ್ರವೃತ್ತಿಗಳು ಯುದ್ಧವನ್ನು, ಸಾಮ್ರಾಜ್ಯಶಾಹಿ ಲಾಭಕ್ಕಾಗಿ ರಾಷ್ಟ್ರೀಯವಾದಿ ಉನ್ಮಾದದಲ್ಲಿ ಕಾರ್ಮಿಕರು ಕಾರ್ಮಿಕರೊಡನೆ ಸೆಣಾಸಾಡುವ ರಕ್ತದೋಕುಳಿಯನ್ನಾಗಿ ಪರಿವರ್ತಿಸುತ್ತದೆ. ಇದು ಈ ಸಂದರ್ಭದ ಕ್ರಾಂತಿಕಾರಿ ಸಾಧ್ಯತೆಗಳನ್ನು ನಾಶಪಡಿಸುತ್ತದೆ ಎಂದು ರೋಸಾ ಆತಂಕಿತರಾಗಿದ್ದರು. ಅವರು ಮಿಲಿಟರಿವಾದ ಮತ್ತು ಕೈಸರ್ ವಿರುದ್ಧ ಪ್ರಬಂಧಗಳ ಸರಣಿಯನ್ನು ಬರೆದರು. ಜರ್ಮನಿಯಲ್ಲಿದ್ದುಕೊಂಡು, ಅಂದರೆ ಭೀಕರ ಪಶುವಿನ ನೆರಳಲ್ಲೇ ಇದ್ದುಕೊಂಡೇ, ಸಂಕುಚಿತ ರಾಷ್ಟ್ರೀಯವಾದದ ವಿರುದ್ಧ ರೋಸಾ ಅವರ ಧೀರಹೋರಾಟ, ನಂತರ ಎರಡನೇ ಅಂತರಾಷ್ಟ್ರೀಯದಲ್ಲಿ ಲೆನಿನ್ ನೇತೃತ್ವದ ಸಂಕುಚಿತ ರಾಷ್ಟ್ರೀಯವಾದದ ವಿರುದ್ಧ ಹೋರಾಟಕ್ಕೆ ಮುಂಚಿತವಾಗಿಯೇ ನಡೆದಿತ್ತು ಎನ್ನುವುದರಲ್ಲಿ ಆಶ್ಚರ್ಯವೇನು ಇಲ್ಲ. ಅವರು ಹಲವಾರು ಬಾರಿ ಜೈಲಿಗೆ ಹೋಗಿದ್ದರು, ಆದರೆ ಜೈಲಿನಲ್ಲಿದ್ದ ತನ್ನ ಹೆಚ್ಚಿನ ಅವಧಿಯನ್ನು ಲೇಖನಗಳನ್ನು ಬರೆಯಲು ಬಳಸಿದರು.

1907ರಲ್ಲಿ, ರಷ್ಯಾದ ಸಾಮಾಜಿಕ ಪ್ರಜಾಪ್ರಭುತ್ವ ದಿನಾಚರಣೆಯ ಸಂದರ್ಭದಲ್ಲಿ ರೋಸಾ ಲೆನಿನ್ ಅವರನ್ನು ಭೇಟಿಯಾದರು. ಭೇಟಿಯಾದ ಸಂದರ್ಭದಲ್ಲಿ ಅವರ ಮಧ್ಯೆ ಯಾವೆಲ್ಲಾ ವಿಷಯಗಳ ಬಗ್ಗೆ ಚರ್ಚೆ ಆಯಿತು ಎಂಬುದರ ಬಗ್ಗೆ ದಾಖಲೆಗಳಿಲ್ಲ. ಆದರೆ ಯುರೋಪಿನ ಅನೇಕ ಪಕ್ಷಗಳನ್ನು ಆವರಿಸಿರುವ ಪರಿಷ್ಕರಣವಾದಿ ಪ್ರವೃತ್ತಿಯ ವಿರುದ್ಧ ಹೋರಾಡುವ ಬಗ್ಗೆ ಇಬ್ಬರು ಸಮಾನಮನಸ್ಕರಾಗಿದ್ದರು ಎಂದು ಮಾತ್ರ ಹೇಳಬಹುದು. ಅದರ ಸ್ವಲ್ಪ ಸಮಯದ ನಂತರ ಅವರು ಜರ್ಮನಿಯ ಸ್ಟುಟ್‌ಗಾರ್ಟ್ ನಲ್ಲಿ ನಡೆದ ಸಮಾಜವಾದಿಗಳ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡರು. ಎಲ್ಲಾ ಕಾರ್ಮಿಕ ಪಕ್ಷಗಳು ಯುದ್ಧದ ವಿರೋಧದಲ್ಲಿ ಒಂದಾಗಬೇಕು



ಎಂದು ಅವರು ಮಂಡಿಸಿದ ನಿರ್ಣಯವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಸ್ಟುಟ್‌ಗಾರ್ಟ್ ಸಮ್ಮೇಳನದ ಅಜೆಂಡಾಗೆ ತರಲು ಅವರ ಆಪ್ತ ಒಡನಾಡಿಯಾದ ಕ್ಲಾರಾ ಜೆಟ್ಕಿನ್ ಉಪಕ್ರಮಗಳನ್ನು ರೋಸಾ ಬೆಂಬಲಿಸಿದರು.

ರೋಸಾ 1907 ಮತ್ತು 1919 ರಲ್ಲಿ ನಡೆದ ಅವರ ಹತ್ಯೆಯ ನಡುವಿನ ಅವಧಿಯಲ್ಲಿ ಅನೇಕ ಪ್ರಮುಖ ಕೃತಿಗಳನ್ನು ಬರೆದಿದ್ದಾರೆ. 1913 ರಲ್ಲಿ, ಅವರು ಬರೆದ "ಬಂಡವಾಳದ ಶೇಖರಣೆ: ಸಾಮ್ರಾಜ್ಯಶಾಹಿಯ ವಿವರಣೆಗೆ ಒಂದು ಕೊಡುಗೆ" ಪುಸ್ತಕದ ಮೂಲಕ ಬಂಡವಾಳದ ಶೇಖರಣೆಯ ವಿಷಯದ ಚರ್ಚೆಯಲ್ಲಿ ತೊಡಗಿಸಿಕೊಂಡರು. ಬಂಡವಾಳಶಾಹಿಯು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಗೆ ವಿಸ್ತರಿಸಿದ್ದು ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಸೃಷ್ಟಿಸಿದ ಆಂತರಿಕ ವಿರೋಧಾಭಾಸಗಳನ್ನು ರೋಸಾ ಗಮನಿಸಿದ್ದರು. ಸಾಮ್ರಾಜ್ಯಶಾಹಿಯು ಬಂಡವಾಳಶಾಹಿ ಶೇಖರಣೆಯ ಆಂತರಿಕ ನಿಯಮಗಳ ನೇರ ಬೆಳವಣಿಗೆಯಾಗಿದೆ ಎಂದು ಅವರು ವಾದಿಸಿದರು. ಬೇರೊಂದು ರೀತಿಯಲ್ಲಿ ಹೇಳುವುದಾದರೆ ಬಂಡವಾಳಶಾಹಿಯು ಸಾಮ್ರಾಜ್ಯಶಾಹಿಯಾಗುವ ಪ್ರವೃತ್ತಿ ತೋರುತ್ತಿದೆ. ಹಾಗಾಗಿ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟವಲ್ಲದ ಬಂಡವಾಳಶಾಹಿಯ ವಿರುದ್ಧ ಯಾವುದೇ ಹೋರಾಟ ಸಾಧ್ಯವಿಲ್ಲ. "ಅಂತರಾಷ್ಟ್ರೀಯ ಶ್ರಮಜೀವಿಗಳು ಸಾಮ್ರಾಜ್ಯಶಾಹಿಯ ವಿರುದ್ಧ ತಮ್ಮ ಸಂಪೂರ್ಣ ಶಕ್ತಿ ಮತ್ತು ತೀವ್ರ ತ್ಯಾಗಮಾಡುವ ಧೈರ್ಯದಿಂದ ಎದ್ದು ನಿಂತಾಗ ಮತ್ತು 'ಯುದ್ಧದ ಮೇಲಿನ ಯುದ್ಧ' ಎಂಬ ಘೋಷಣೆಯನ್ನು ತಮ್ಮ ಪ್ರಾಯೋಗಿಕ ರಾಜಕಾರಣದ ಮಾರ್ಗಸೂಚಿಯನ್ನಾಗಿ ಮಾಡಿದಾಗ ಮಾತ್ರ ಸಮಾಜವಾದದ ಅಂತಿಮ ಗುರಿ ಈಡೇರುವುದು ಸಾಧ್ಯ." ಎಂದು ರೋಸಾ ಅವರು ಜೈಲಿನಲ್ಲಿದ್ದಾಗ ಬರೆಯುತ್ತಾರೆ.

ತಮ್ಮ ಕೆಲಸದ ಮೂಲಕ, ಬರಹಗಳ ಮೂಲಕ, ಹಲವಾರು ಸಭೆಗಳಲ್ಲಿ ಭಾಗವಹಿಸುವ ಮೂಲಕ ಜನರನ್ನು ಯುದ್ಧದ ವಿರುದ್ಧ ಸಂಘಟಿಸಲು ಮತ್ತು ಸಜ್ಜುಗೊಳಿಸಲು ರೋಸಾ ತಮ್ಮ ಎಲ್ಲಾ ಶಕ್ತಿಗಳನ್ನು ಮೀಸಲಾಗಿಟ್ಟರು. ಹಾಗೇನಾದರೂ ಯುದ್ಧ ಪ್ರಾರಂಭವಾದರೆ ಸಾರ್ವತ್ರಿಕ ಮುಷ್ಕರವನ್ನು ಆಯೋಜಿಸುವುದು ಅವರ ಪ್ರಯತ್ನವಾಗಿತ್ತು. "ಮಿಲಿಟರಿವಾದದ ಎರಡು ರೂಪಗಳಾದ – ಯುದ್ಧ ಮತ್ತು ಸಶಸ್ತ್ರ ಶಾಂತಿ – ಬಂಡವಾಳಶಾಹಿಯ ಕೂಸುಗಳು ಮತ್ತು ತಾರ್ಕಿಕ ಫಲಿತಗಳು. ಆದ್ದರಿಂದ ಬಂಡವಾಳಶಾಹಿಯ ವಿನಾಶದಿಂದ ಮಾತ್ರ ಅವನ್ನು ಹೋಗಲಾಡಿಸುವುದು ಸಾಧ್ಯ. ಹಾಗಾಗಿ ಶಸ್ತ್ರಾಸ್ತ್ರಗಳ ಅಗಾಧ ಹೊರೆಯಿಂದ ವಿಮೋಚನೆಯನ್ನು ಮತ್ತು ವಿಶ್ವಶಾಂತಿಯನ್ನು ಬಯಸುವವರು ಸಮಾಜವಾದವನ್ನು ಸಹ ಬಯಸಬೇಕು" ಎಂದು ಹೇಳಿದರು.

1910 ರಲ್ಲಿ, ರೋಸಾ ಮತ್ತು ಅವರ ಒಡನಾಡಿಗಳಾದ ಕ್ಲಾರಾ ಜೆಟ್ಕಿನ್, ಪ್ರಾನ್ಸ್ ಮೆಹರಿಂಗ್ ಮತ್ತು ಕಾರ್ಲ್ ಲೈಬ್ನಿಖ್ತ್, ಎಸ್.ಪಿ.ಡಿ ತನ್ನ ಪರಿಷ್ಕರಣಾವಾದಿ ನಿಲುವನ್ನು ಬದಲಾಯಿಸುವುದಿಲ್ಲ ಎಂಬ ತೀರ್ಮಾನಕ್ಕೆ ಬಂದರು. ಅವರು ಎಸ್.ಪಿ.ಡಿ ಯಿಂದ ದೂರ ಸರಿದರು ಮತ್ತು 'ಅಂತರ್‍ರಾಷ್ಟ್ರೀಯವಾದಿಗಳು' ಎಂಬ ಪ್ರತ್ಯೇಕ ಗುಂಪನ್ನು ರಚಿಸಿದರು. ಈ ಗುಂಪು ನಂತರ 'ಸ್ಪಾರ್ಟಕಸ್ ಲೀಗ್' ಮತ್ತು ಆಫ್ ಜರ್ಮನಿಯ ಕಮ್ಯುನಿಸ್ಟ್ ಪಾರ್ಟಿ ಆಗಿ ಬೆಳೆಯಿತು. ಯುದ್ಧದ ವಿರುದ್ಧದ ಅವರ ಹಲವು ಚಟುವಟಿಕೆಗಳು ಅವರ ವಿರುದ್ಧ ಹಲವಾರು ಪ್ರಕರಣಗಳಿಗೆ ಕಾರಣವಾದವು. "ಕಾನೂನು ಮತ್ತು ಸುವ್ಯವಸ್ಥೆಯ ಕುರಿತು ಅವಿಧೇಯತೆಯ ಪ್ರಚೋದನೆ" ಮಾಡಿದ್ದಾರೆ ಎಂದು ಆರೋಪಿಸಲಾಯಿತು.

ಆಗಸ್ಟ್ 1914 ರಲ್ಲಿ ಜರ್ಮನ್ ಸಾಮ್ರಾಜ್ಯ ರಷ್ಯಾದ ವಿರುದ್ಧ ಯುದ್ಧ ಘೋಷಿಸಿತು. ಈ ಘೋಷಣೆಯ ಮರುದಿನವೇ ಸಂಸತ್ತಿನಲ್ಲಿನ ಎಸ್.ಪಿ.ಡಿ ಪ್ರತಿನಿಧಿಗಳು ಸೇರಿದಂತೆ ಎಲ್ಲ ಯುದ್ಧದ ಹಣಕಾಸು ಮತ್ತು ಕಡ್ಡಾಯ ಮಿಲಿಟರಿ ಸೇವೆಗೆ ಒಪ್ಪಿದರು. ಈ ಯುದ್ಧದ ಸಮಯದಲ್ಲಿ ಎಸ್.ಪಿ.ಡಿ ಎಲ್ಲಾ ಮುಷ್ಕರಗಳಿಂದ ದೂರವಿರುವುದಾಗಿ ಸರ್ಕಾರಕ್ಕೆ ಭರವಸೆ ನೀಡಿ ಆ ಕುರಿತ ಒಪ್ಪಂದಕ್ಕೆ ಸಹಿಹಾಕಿತು. ಲೈಬ್ನಿಖ್ತ್ ಮತ್ತು ರೋಸಾ ನೇತೃತ್ವದ ಸ್ಪಾರ್ಟಕಸ್ ಲೀಗ್ ಈ ದ್ರೋಹವನ್ನು ಖಂಡಿಸಿತು ಮತ್ತು ಅದರ ವಿರುದ್ಧ ತೀವ್ರವಾಗಿ ಹೋರಾಡಿತು. ಜೂನಿಯಸ್ ಎಂಬ ಗುಪ್ತನಾಮದಲ್ಲಿ 'ಸಾಮಾಜಿಕ ಪ್ರಜಾಪ್ರಭುತ್ವದ ಬಿಕ್ಕಟ್ಟು' ಎಂಬ ಯುದ್ಧ–ವಿರೋಧಿ ಕಿರುಪುಸ್ತಕವನ್ನು ರೋಸಾ ಅವರು ಬರೆದಿದ್ದರು. ಮುಂದಿನ ಒಂದು ವರ್ಷದೊಳಗೆ ಅವರನ್ನು ಬಂಧಿಸಲಾಯಿತು.

ಯುದ್ಧದ ಸಮಯದಲ್ಲಿ ಅನುಭವಿಸಿದ ಕಷ್ಟ–ನಷ್ಟಗಳು ಹೆಚ್ಚಾದಂತೆ ಜರ್ಮನಿಯಲ್ಲಿ ಯುದ್ಧದ ವಿರುದ್ಧ ಅತೃಪ್ತಿಯೂ ಬೆಳೆಯಿತು. ರಷ್ಯಾದಲ್ಲಿ ಲೆನಿನ್ ನೇತೃತ್ವದಲ್ಲಿ ಬೊಲ್ಶೆವಿಕರಿಗೆ ಯುದ್ಧ ತಂದ ಅಗಾಧ ವಿನಾಶವನ್ನು, ಝಾರ್ ನನ್ನು ಉರುಳಿಸುವ ಯುದ್ಧಘೋಷವಾಗಿ ಪರಿವರ್ತಿಸುವುದು ಸಾಧ್ಯವಾಯಿತು. ಲೆನಿನ್ ಮತ್ತು ಬೊಲ್ಶೆವಿಕ್ ನಾಯಕತ್ವದಲ್ಲಿ ರಷ್ಯಾದಲ್ಲಿ ಮೊದಲ ಕಾರ್ಮಿಕರ ಪ್ರಭುತ್ವ ಸ್ಥಾಪಿತವಾದಾಗ ರೋಸಾ ಜೈಲಿನಲ್ಲಿದ್ದರು. ಜರ್ಮನ್ ಸಾಮ್ರಾಜ್ಯವು ಯುದ್ಧದಿಂದ ಸೋತಿದ್ದೇನೆ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಆದರೆ ರಷ್ಯಾದ ಕ್ರಾಂತಿಯ ಪ್ರಭಾವವು ಜರ್ಮನಿಯಲ್ಲಿ ಬಿರುಗಾಳಿಯಂತೆ ಬೀಸಿತು. ಮುಂದಿನ ನವೆಂಬರ್ ನಲ್ಲಿ ಕೀಲ್ ಎಂಬಲ್ಲಿನ ಇಂಪಿರಿಯಲ್ ಜರ್ಮನ್ ನೌಕಾಪಡೆಯ 40 ಸಾವಿರ ನಾವಿಕರು ದಂಗೆ ಎದ್ದರು. ಕಾರ್ಮಿಕರ ಮತ್ತು ಸೈನಿಕರ ಮಂಡಳಿಗಳು, ಸೋವಿಯತ್ ನ ಮಾದರಿಯಲ್ಲಿ ಜರ್ಮನಿಯ ಕೆಲವು ಭಾಗಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡವು. ಅದೇ ತಿಂಗಳಲ್ಲಿ ರೋಸಾ ಮತ್ತು ಲೈಬ್ನಿಖ್ತ್ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಯಿತು. ಆದರೆ ಕಿಲ್ ಮಂಡಳಿಗಳು ಹೆಚ್ಚುಕಾಲ ಉಳಿಯಲು ಸಾಧ್ಯವಾಗಲಿಲ್ಲ. ಎಸ್.ಪಿ.ಡಿ ಮತ್ತೊಮ್ಮೆ ಸಮಾಜವಾದಿ ತತ್ವಕ್ಕೆ ದ್ರೋಹ ಬಗೆದಿತು. ಆ ಪಕ್ಷದ ಆಗಿನ ನಾಯಕ ಫ್ರೆಡ್ರಿಕ್ ಎಬರ್ಟ್ ಅಧಿಕಾರ ವಹಿಸಿಕೊಂಡರು. ಆ ಮೇಲಿನ ಎಲ್ಲ ಘಟನೆಗಳನ್ನು ನೋಡಿದರೆ ಎಬರ್ಟ್ ಮತ್ತು ಎಸ್.ಪಿ.ಡಿ ಆಳುವ ವರ್ಗಗಳ ಏಜೆಂಟರಾಗಿ ಕಾರ್ಯನಿರ್ವಹಿಸಿದರು ಎಂಬುದು ಗೊತ್ತಾಗುತ್ತದೆ.

ಜನವರಿ 1919 ರಲ್ಲಿ ಮತ್ತೊಮ್ಮೆ ದಂಗೆ ಉಂಟಾಯಿತು ಮತ್ತು ಬರ್ಲಿನ್ ನಲ್ಲಿ ಎರಡನೇ ಕ್ರಾಂತಿಕಾರಿ ಅಲೆ ಶುರುವಾಯಿತು. ಈ ಕ್ರಾಂತಿ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ತಿಳಿದ ರೋಸಾ ಕಡಿಮೆ ಉತ್ಸಾಹದಿಂದ ಇದ್ದರು, ಆದರೆ ಅವರು ಕಾರ್ಮಿಕರನ್ನು ಬೆಂಬಲಿಸಿದರು. ಎಸ್.ಪಿ.ಡಿ ನೇತೃತ್ವದ ಸರಕಾರದ ಸೂಚನೆಯ ಮೇರೆಗೆ ಕ್ರಾಂತಿಕಾರಿಗಳ ವಿರುದ್ಧ ದಬ್ಬಾಳಿಕೆ ಪ್ರಾರಂಭವಾಯಿತು. ಜನವರಿ 15 ರಂದು ಅರೆಸೈನಿಕ ಪಡೆಗಳು ನೂರಾರು ಕಾರ್ಮಿಕರ ಮೇಲೆ ಗೋಳಿಬಾರು ಮಾಡಿದರು. ಸಾವಿರಾರು ಕಾರ್ಮಿಕರನ್ನು ಬಂಧಿಸಿದರು. ರೋಸಾ ಮತ್ತು ಲೈಬ್ನಿಖ್ತ್ ಅವರನ್ನು ಸಹ ಸೆರೆಹಿಡಿಯಲಾಯಿತು. ಇಬ್ಬರನ್ನು ಅತ್ಯಂತ ಕ್ರೂರವಾಗಿ ಕೊಲೆಮಾಡಲಾಯಿತು. ನದಿಗೆ ಎಸೆಯಲಾದ ರೋಸಾ ಅವರ ಶವ ಸುಮಾರು ಐದು ತಿಂಗಳ ನಂತರ ಪತ್ತೆಯಾಯಿತು. ಬರ್ಲಿನ್ ನಲ್ಲಿ ಮತ್ತೆ 'ವ್ಯವಸ್ಥೆ' ಸ್ಥಾಪಿತವಾಯಿತು.

ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ವಲಯಗಳಲ್ಲಿ ರೋಸಾ ಅವರಿಗೆ ಸಿಗಬೇಕಾದ ಅರ್ಹವಾದ ಸ್ಥಾನ ಸಿಕ್ಕಿಲ್ಲ ಎಂಬುದು ಚಾರಿತ್ರಿಕ ಅನ್ಯಾಯ. ಕೆಲವು ಪ್ರಮುಖ ವಿಷಯಗಳಲ್ಲಿ ರೋಸಾ ಅವರ ನಿಲುವುಗಳು ತಪ್ಪಾಗಿವೆ ನಿಜ. ಲೆನಿನ್ ಅವರ ಕೇಂದ್ರೀಕೃತ ಪಕ್ಷದ ಪರಿಕಲ್ಪನೆಯನ್ನು, ಅದು ಇಲ್ಲದೆ ಕ್ರಾಂತಿಯು ಗಂಭೀರ ಅಪಾಯಕ್ಕೆ ಸಿಲುಕುವ ಸಂದರ್ಭದಲ್ಲಿ ಅವರು ಟೀಕಿಸಿದರು. ಆಕೆಯ ಕ್ರೂರ ಹತ್ಯೆ ಮತ್ತು ಆ ಮೇಲಿನ ಸೋವಿಯತ್ ಒಕ್ಕೂಟದದಲ್ಲಿನ ಹಲವು ಬೆಳವಣಿಗೆಗಳ ನಂತರ, ಸೋವಿಯೆಟ್ ಪಕ್ಷವನ್ನು ವಿರೋಧಿಸಲು ಅವರ ಕೆಲವು ಪ್ರತಿಪಾದನೆಗಳನ್ನು ಬಳಸಿಕೊಳ್ಳಲಾಯಿತು. ರೋಸಾ ಅವರನ್ನು ಶ್ರೇಷ್ಠ ಕಮ್ಯುನಿಸ್ಟ್ ನಾಯಕರರಲ್ಲಿ ಒಬ್ಬರನ್ನಾಗಿ ಸೇರಿಸಲು ಹಿಂಜರಿಕೆಗೆ ಇದು ಕಾರಣವಾಗಿರಬಹುದು. ಆದರೆ ಈ ಮಹಾನ್ ಕ್ರಾಂತಿಕಾರಿಯ ಕೊಡುಗೆಯ ಕುರಿತು ಒಟ್ಟಂದಾಜು ಮಾಡುವಲ್ಲಿ ಲೆನಿನ್ ತೆಗೆದುಕೊಂಡ ಧೋರಣೆ ತೀರಾ ವಿಭಿನ್ನವಾಗಿತ್ತು.

ಎರಡನೇ ಸೋಶಲಿಸ್ಟ್ ಅಂತರರಾಷ್ಟ್ರೀಯದಲ್ಲಿ, ವಿಶೇಷವಾಗಿ ಕೇಂದ್ರೀಕೃತ ಪಕ್ಷದ ವಿಷಯದ ಕುರಿತು, ಪರಿಷ್ಕರಣವಾದಿಗಳು ಮಾಡಿದ ರೋಸಾ ಅವರ ಪ್ರಬಂಧಗಳ ದುರ್ಬಳಕೆ ಅಥವಾ ಆಯ್ದ ಬಳಕೆಯ ಬಗ್ಗೆ ಬರೆಯುತ್ತಾ ಲೆನಿನ್ ತಮ್ಮ "ಒಬ್ಬ ಪ್ರಚಾರಕನ ಟಿಪ್ಪಣಿಗಳು' ನಲ್ಲಿ ರೋಸಾ ಅವರ ಬಗ್ಗೆ ಹೀಗೆ ಬರೆದಿದ್ದಾರೆ :

"ಇದಕ್ಕೆ ಉತ್ತರವಾಗಿ ಒಂದು ಹಳೆಯ ರಶ್ಯನ್ ನೀತಿ ಕಥೆಯ ಒಂದೆರಡು ಸಾಲುಗಳನ್ನು ನಾನು ಇಲ್ಲಿ ಉಲ್ಲೇಖಿಸುತ್ತೇನೆ. 'ಹದ್ದುಗಳು ಕೆಲವೊಮ್ಮೆ ಕೋಳಿಗಿಂತ ಕೆಳಕ್ಕೆ ಹಾರಬಲ್ಲವು, ಆದರೆ ಕೋಳಿಗಳು ಎಂದಿಗೂ ಹದ್ದಿನ ಎತ್ತರಕ್ಕೆ ಏರಲು ಸಾಧ್ಯವಿಲ್ಲ....' .. ..ಆಕೆ ಮಾಡಿದ ತಪ್ಪುಗಳ ಹೊರತಾಗಿಯೂ ಅವರು ನಮಗೆ ಎತ್ತರದಲ್ಲಿ ಹಾರುವ ಹದ್ದಿನಂತೆ ಇರುತ್ತಾರೆ. ಪ್ರಪಂಚದಾದ್ಯಂತ ಕಮ್ಯುನಿಸ್ಟರು ಅವರ ನೆನಪುಗಳನ್ನು ಮತ್ತು ಜೀವನಚರಿತ್ರೆಯನ್ನು ಸದಾಕಾಲ ನೆನೆಯುತ್ತಾರೆ. ಅವರ ಸಂಪೂರ್ಣ ಕೃತಿಗಳು (ಅವನ್ನು ಪ್ರಕಟಿಸುವಲ್ಲಿ ಜರ್ಮನ್ ಕಮ್ಯುನಿಸ್ಟರು ಬಹಳ ವಿಳಂಬ ಮಾಡುತ್ತಿದ್ದಾರೆ.. ..ಅವರು ಹೋರಾಟಗಳಲ್ಲಿ ಎದುರಿಸುತ್ತಿರುವ ಅಗಾಧ ಕಷ್ಟನಷ್ಟಗಳನ್ನು ಗಮನದಲ್ಲಿಟ್ಟುಕೊಂಡೂ ಈ ವಿಳಂಬವನ್ನು ಭಾಗಶಃ ಮಾತ್ರವೇ ಕ್ಷಮಿಸಬಹುದು) ಪ್ರಪಂಚದಾದ್ಯಂತ ಅನೇಕ ತಲೆಮಾರುಗಳ ಕಮ್ಯುನಿಸ್ಟರಿಗೆ ತರಬೇತಿ ನೀಡಲು ಉಪಯುಕ್ತ ಕೈಪಿಡಿಗಳಾಗಿ ಕಾರ್ಯನಿರ್ವಹಿಸುತ್ತವೆ."

ಮಾಡಿದ "ತಪ್ಪುಗಳನ್ನು" ಮೀರಿಸುವಷ್ಟು ರೋಸಾ ಅವರ ಕೊಡುಗೆಗಳಿರುವುದರಿಂದಾಗಿಯೇ, ಅವರ ಸಂಪೂರ್ಣ ಕೃತಿಗಳನ್ನು ಪ್ರಕಟಿಸಬೇಕೆಂದು ಲೆನಿನ್ ಅವರು ಬಯಸಿದ್ದರು.

ಪುಟ 15 ಕ್ಕೆ



ರಾಷ್ಟ್ರೀಯ ಹೋರಾಟದ ಅಂತಿಮ ಹಂತ ಮತ್ತು ಭಾರತದ ಕಾರ್ಮಿಕ ವರ್ಗ 1945-47

ಭಾರತದ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಹಿನ್ನೆಲೆಯಲ್ಲಿ ಪ್ರಾರಂಭವಾದ ಕಾರ್ಮಿಕ ವರ್ಗದ ಹೋರಾಟವು ಮೂಲತಃ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಹೊಸ ಉದ್ದೇಶದೊಂದಿಗಿನ ಹೋರಾಟವಾಗಿ ಪರಿವರ್ತನೆಗೊಂಡಿತು. ಭಾರತದಲ್ಲಿ ಸಾಮ್ರಾಜ್ಯಶಾಹಿ ಸರ್ಕಾರವು, ರಾಜಕೀಯವಾಗಿ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಾಕಾರಗೊಂಡ. ಭಾರತದ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗಗಳ ಸರ್ಕಾರವಾಗಿ ಬದಲಾಯಿತು. ಬ್ರಿಟಿಷರಿಂದ ಅಧಿಕಾರ ವಹಿಸಿಕೊಳ್ಳುವ ಮೊದಲು, ಕಾರ್ಮಿಕ ವರ್ಗವನ್ನು ವಿಭಜಿಸುವಲ್ಲಿ ಮತ್ತು ತಮ್ಮದೇ ಆದ ಕಾರ್ಮಿಕ ವಿಭಾಗವನ್ನು ರೂಪಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಯಿತು. ಆದರೂ. ಸ್ವಾತಂತ್ರ್ಯವು ಮೂಡಿಬರುತ್ತಿದ್ದಂತೆ, ಭಾರತದ ಕಾರ್ಮಿಕ-ವರ್ಗ ಒಟ್ಟಾರೆಯಾಗಿ ದಶಕಗಳ ಕಠಿಣ ಆರ್ಥಿಕ ಮತ್ತು ರಾಜಕೀಯ ಹೋರಾಟಗಳ ಮೂಲಕ, ಸಂಘಟಿತ ಮತ್ತು ವರ್ಗ-ಪ್ರಜ್ಞೆಯ ಸಾಮಾಜಿಕ ಶಕ್ತಿಯಾಗಿ ಗಟ್ಟಿಯಾದ ಕ್ರಾಂತಿಕಾರಿ ಹೋರಾಟಗಳಿಗೆ ಸಜ್ಜಾಗಿ ಎದ್ದು ನಿಂತಿತು.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ

ದೇಶವ್ಯಾಪಿ ಉತ್ಕ್ರಾಂತಿ

ಭಾರತದ ಕಾರ್ಮಿಕ ವರ್ಗದ ಚಳವಳಿಯ ಯುದ್ಧ-ಸಮಯದ ಮುನ್ನಡೆ ಮತ್ತು ಸಾಧನೆಗಳು ನಿಸ್ಸಂದೇಹವಾಗಿ ಭಾರತದ ಕಾರ್ಮಿಕ ಇತಿಹಾಸದಲ್ಲಿ ಒಂದು ಸ್ಮರಣೀಯ ಹಂತವೆಂದು ಪರಿಗಣಿಸಲ್ಪಡುತ್ತವೆ. ಫ್ಯಾಸಿಸಂನ ಸೋಲು ಮತ್ತು ಯುದ್ಧದ ಅಂತ್ಯವು, ಭಾರತದ ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿಯ ವಿರುದ್ಧ ಹೆಚ್ಚು ಸಂಘಟಿತ, ವರ್ಗ-ಪ್ರಜ್ಞೆ ಮತ್ತು ರಾಜಿಯಾಗದ ಹೋರಾಟದ ಶಕ್ತಿಯಾಗಿ ಹೊರಹೊಮ್ಮಿದನ್ನು ಕಂಡಿತು.

ಆಕ್ಸಿಸ್ ಶಕ್ತಿಗಳ ಸೋಲಿನ ನಂತರ ಬ್ರಿಟಿಷ್ ಸರ್ಕಾರವು ಸುಭಾಶಚಂದ್ರ ಬೋಸ್ ರವರ 'ಆಝಾದ್ ಹಿಂದ್ ಫೌಜ್'(ಇಂಡಿಯನ್ ನ್ಯಾಶನಲ್ ಆರ್ಮಿ)ಯ ಸೈನಿಕರನ್ನು ಬಂಧಿಸಿ, ಮಿಲಿಟರಿ ನ್ಯಾಯಮಂಡಳಿಯ ಮುಂದೆ ವಿಚಾರಣೆ ನಡೆಸಿದ್ದು, ಭಾರತದ ದೇಶಪ್ರೇಮಿ ಜನಸಮೂಹದ ಮನ ಕಲಕಿಸಿತು.

ಆದರೆ ಬ್ರಿಟಿಷ್ ಸರ್ಕಾರವು ಏಕಕಾಲದಲ್ಲಿ ವಿಭಜಕ ತಂತ್ರಗಳನ್ನು ಆಡುವಲ್ಲಿ ನಿರತರಾಗಿದ್ದಾಗ ಮತ್ತು ಮೇಲ್ಮಟ್ಟದ ನಾಯಕತ್ವದ ಅನೈಕ್ಯತೆ ಮತ್ತು ಅಸ್ಥಿರತೆಗಳ ಲಾಭವನ್ನು ಪಡೆದುಕೊಳ್ಳುತ್ತಿರುವಾಗ, ಕೆಳಭಾಗದಲ್ಲಿದ್ದ ಜನಸಮೂಹ ಅಭೂತಪೂರ್ವ ಉತ್ಕ್ರಾಂತಿಯಲ್ಲಿ ರಭಸದಿಂದ ನುಗ್ಗಿದರು. ಲಕ್ಷಾಂತರ ಶ್ರಮಜೀವಿ ಜನಸಮೂಹ -ಹಿಂದೂಗಳು, ಮುಸ್ಲಿಮರು ಮತ್ತು ಅಸ್ಪೃಶ್ಯರು ಎಂದು ಕರೆಯಲ್ಪಡುವವರು ಒಟ್ಟಾಗಿ ಅಣಿನೆರೆದರು ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಭವ್ಯವಾದ ಮತ್ತು ಐಕ್ಯ ಹೋರಾಟವನ್ನು ಕೈಗೊಂಡರು ಎನ್ನುವುದು ವಿಶೇಷ ಮಹತ್ವದ್ದಾಗಿತ್ತು. ಸಾವು ಮತ್ತು ಪೋಲಿಸ್ ಮತ್ತು ಸೈನ್ಯದಿಂದ ವಿವೇಚನೆಯಿಲ್ಲದ ಗುಂಡಿನ ದಾಳಿಯನ್ನು ಧಿಕ್ಕರಿಸಿ, ಭಾರತದ ಸ್ವಾತಂತ್ರ್ಯಕ್ಕೆ ಒತ್ತಾಯಿಸುತ್ತಾ , ಕಲ್ಕತ್ತಾ, ಮುಂಬೈ ಮತ್ತಿತರ ನಗರಗಳು ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ಉಗ್ರ ಪ್ರದರ್ಶನಗಳಲ್ಲಿ ಸಾವಿರಾರು ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಮಧ್ಯಮ ವರ್ಗದ ಜನರು ಸೇರಿಕೊಂಡರು.

ಐಎನ್ಎ ಅಧಿಕಾರಿಗಳ ಕೋರ್ಟ್-ಮಾರ್ಷಲ್ ಮತ್ತು ಶಿಕ್ಷೆ ಹಿಂದೂಗಳು ಮತ್ತು ಮುಸ್ಲಿಮರೆನ್ನದೆ ಭಾರತದ ಜನರನ್ನು ತೀವ್ರವಾಗಿ ಕೆರಳಿಸಿತು ಮತ್ತು ನಂತರ ನಡೆದ ಐಕ್ಯ ಪ್ರತಿಭಟನಾ ಕಾರ್ಯಕ್ರಮಗಳು ಅಂತಿಮವಾಗಿ ಅವರನ್ನು ಬಿಡುಗಡೆಗೊಳಿಸಲು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸುವಲ್ಲಿ ಯಶಸ್ವಿಯಾದವು.

ದೇಶವನ್ನು ವ್ಯಾಪಿಸುತ್ತಿದ್ದ ಪ್ರಚಂಡ ಸಾಮೂಹಿಕ ಹೋರಾಟಗಳು ಮತ್ತು ಐ.ಎನ್.ಎ.ಯ ಚಿತ್ರಣವು, ಭಾರತದ ಸಶಸ್ತ್ರ ಪಡೆಗಳಲ್ಲೂ ದೇಶಭಕ್ತಿಯ ಭಾವನೆಗಳನ್ನು ಹುಟ್ಟುಹಾಕಿತು. ಭಾರತದ ಸ್ವಾತಂತ್ರ್ಯ ಚಳವಳಿಯ ಹಾದಿಯಲ್ಲಿ, ಇದು ಪ್ರಚಂಡ ಕ್ರಾಂತಿಕಾರಿ ಮಹತ್ವವನ್ನು ಹೊಂದಿದ್ದ ಸಂಪೂರ್ಣ ಹೊಸ ಬೆಳವಣಿಗೆಯಾಗಿತ್ತು.

ಸುದೀರ್ಘ ಸರಣಿಯ ಪರಿಹಾರವಾಗದ ಕುಂದುಕೊರತೆಗಳ ಪರಿಣಾಮವಾಗಿ ಹೆಚ್ಚು ಬಾಧಿತರಾಗಿದ್ದ ರಾಯಲ್ ಇಂಡಿಯನ್ ನೌಕಾ ಪಡೆಯ ಸೈನಿಕರು, ಬ್ರಿಟಿಷ್ ಆಡಳಿತದ ವಿರುದ್ಧ ಬಹಿರಂಗವಾಗಿ ದಂಗೆಯೆದ್ದರು. ಈ ಬೆಂಕಿಯ ಕಿಡಿ ಮೊದಲು ಫೆಬ್ರವರಿ 18, 1946 ರಂದು ಮುಂಬೈ ನೌಕಾ ನೆಲೆಯಲ್ಲಿ ಹುಟ್ಟಿಕೊಂಡಿತು. ಆರಂಭದಿಂದಲೂ, ದಂಗೆಯ ನಾಯಕರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರನ್ನು ಸಂಪರ್ಕಿಸಿದ್ದರೂ, ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಆದರೆ ಅಡ್ಮಿರಲ್ ಗಾಡ್‌ಫ್ರೇ ಅವರು ಸರ್ಕಾರದ ಹತೋಟಿಯಲ್ಲಿದ್ದ ಅಗಾಧ ಶಕ್ತಿಗಳನ್ನು ಬಳಸಿ ದಂಗೆಯನ್ನು ಹತ್ತಿಕ್ಕುವ ಬೆದರಿಕೆ ಹಾಕಿದಾಗ, ಬಂಡಾಯ ನಿರತ ಸೈನಿಕರಿಂದ ರಚಿಸಲ್ಪಟ್ಟ ಕೇಂದ್ರ ನೌಕಾ- ಮುಷ್ಕರ ಸಮಿತಿಯು ತಲೆಬಾಗುವ ಬದಲು, ಈ ಉದ್ಧಟ ಬೆದರಿಕೆಗೆ ಉತ್ತರವಾಗಿ ಶಾಂತಿಯುತ ಮುಷ್ಕರ ಮತ್ತು ಹರತಾಳ ಆಯೋಜಿಸುವಂತೆ ನಾಗರಿಕ ಜನಸಮೂಹಕ್ಕೆ ಮನವಿ ಮಾಡಿತು.. ಕಾಂಗ್ರೆಸ್ ಪರವಾಗಿ ವಲ್ಲಭಭಾಯಿ ಪಟೇಲ್ ಮುಷ್ಕರ ಮತ್ತು ಹರತಾಳವನ್ನು ಬೆಂಬಲಿಸಲು ನಿರಾಕರಿಸಿದರು ಮತ್ತು ಅದನ್ನು ವಿರೋಧಿಸಿದರು. ಆದರೆ ಕೇಂದ್ರ ನೌಕಾ ಪಡೆ ಮುಷ್ಕರ ಸಮಿತಿಯ ಕರೆಗೆ ಕಮ್ಯುನಿಸ್ಟ್ ಪಕ್ಷ ಮತ್ತು ಮುಂಬೈಯ ಕಾರ್ಮಿಕ ಸಂಘಗಳಿಂದ ಪ್ರಾಮಾಣಿಕ ಬೆಂಬಲ ದೊರಕಿತು. ಫೆಬ್ರವರಿ 22 ರಂದು, ಕಾರ್ಮಿಕ ವರ್ಗ ಮತ್ತು ಮುಂಬೈಯ ದುಡಿಯುವ ಜನಸಮೂಹದ ಇತರ ವಿಭಾಗಗಳು ಈ ಮುಷ್ಕರದಲ್ಲಿ ವ್ಯಾಪಕವಾಗಿ ಭಾಗವಹಿಸಿದವು ಮತ್ತು ವಿವೇಚನೆಯಿಲ್ಲದ ಪೊಲೀಸ್ ಮತ್ತು ಮಿಲಿಟರಿ ಗುಂಡಿನ ದಾಳಿಯನ್ನು ಎದುರಿಸಿದವು.. ಮಿತ ಅಂದಾಜಿನ ಅಧಿಕೃತ ಅಂಕಿಅಂಶಗಳ ಪ್ರಕಾರ, ಫೆಬ್ರವರಿ 21 ರಿಂದ ಫೆಬ್ರವರಿ 23 ರವರೆಗೆ ಮೂರು ದಿನಗಳ ಕಾಲ ನಡೆದ ಪ್ರತಿರೋಧ ಹೋರಾಟದಲ್ಲಿ, 250 ದೇಶಭಕ್ತರು ಬಲಿಯಾದರು. ಕಲ್ಕತ್ತಾ, ಮದ್ರಾಸ್, ಕರಾಚಿ ಮತ್ತು ಇತರ ಸ್ಥಳಗಳಲ್ಲಿ ನೌಕಾಪಡೆಯ ಸೈನಿಕರ ಹೋರಾಟವನ್ನು ಬೆಂಬಲಿಸಿ ಜನರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು. ಈ ಪ್ರಸಂಗವು ಕಾರ್ಮಿಕ ವರ್ಗ ಮತ್ತು ಇತರ ಶ್ರಮಜೀವಿ ಜನಸಮೂಹದ ತೀಕ್ಷ್ಣವಾದ ರಾಜಕೀಯ ಪ್ರಜ್ಞೆಯ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸಾಧಿಸಲು ತಮ್ಮ ಜೀವಗಳನ್ನು ಸಹ ತ್ಯಾಗಮಾಡಲೂ ನೂರಾರು ಸಂಖ್ಯೆಯಲ್ಲಿ ಸಿದ್ದರಾಗಿದ್ದ ಅವರ ತೀವ್ರವಾದ ಭಾವನೆಗಳ ಅದ್ಭುತ ಉದಾಹರಣೆಯಾಗಿ ಗುರುತಿಸಲ್ಪಟ್ಟಿದೆ.

ಕಾರ್ಮಿಕ ವರ್ಗದ ಆರ್ಥಿಕ ಹೋರಾಟಗಳು

ಯುದ್ಧದ ನಂತರದ ದೇಶವ್ಯಾಪಿ ಸಾಮೂಹಿಕ ರಾಜಕೀಯ ಉತ್ಕ್ರಾಂತಿಯ ಜೊತೆಯಲ್ಲಿ, ಭಾರತದ ಕಾರ್ಮಿಕ ವರ್ಗ ತೀಕ್ಷ್ಣವಾದ ಆರ್ಥಿಕ ಹೋರಾಟಗಳಲ್ಲಿ ತೊಡಗಿಸಿಕೊಳ್ಳಬೇಕಾಯಿತು. ಯುದ್ಧದ ಸಮಯದಲ್ಲಿ ಕೈಗಾರಿಕಾ ಕಾರ್ಮಿಕರ ಸಂಖ್ಯೆ ಯುದ್ಧ ಪೂರ್ವದ ಅವಧಿಗೆ ಹೋಲಿಸಿದರೆ ಶೇಕಡಾ ಐವತ್ತಕ್ಕಿಂತ ಹೆಚ್ಚಾಗಿತ್ತು. 1939 ರಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು ಕಾರ್ಮಿಕರ ಸಂಖ್ಯೆ 1,751,137 ರಷ್ಟಿದ್ದರೆ, 1945 ರ ವರ್ಷದಲ್ಲಿ ಅದು 2,642,977 ಕ್ಕೆ ಏರಿತು. ಇದು ಶೇಕಡಾ 50.9 ರಷ್ಟು ಹೆಚ್ಚಳವಾಗಿತ್ತು. ಯುದ್ಧದ ನಂತರ ಕಾರ್ಮಿಕ ವರ್ಗ ಎದುರಿಸಿದ ಪ್ರಮುಖ ಎರಡು ಸಮಸ್ಯೆಗಳೆಂದರೆ ಯುದ್ಧ-ಸಮಯದ ನೇಮಕಾತಿಗಳನ್ನು ದೊಡ್ಡ ಪ್ರಮಾಣದಲ್ಲಿ ರಿಟ್ರೆಂಚ್ ಮಾಡಿದ್ದು ಮತ್ತು ವೇತನ ಕಡಿತ.

ಯುದ್ಧದ ಸಮಯದಲ್ಲಿ ಕಾರ್ಮಿಕರು ಪಡೆದುಕೊಂಡ ಜೀವನ ವೆಚ್ಚದ ಬೋನಸ್ ಬೆಲೆಗಳ ಏರಿಕೆಯನ್ನು ಸರಿದೂಗಿಸಲು ಸಾಕಾಗುತ್ತಿದ್ದಿಲ್ಲ. ಐ.ಎಲ್.ಒ. ವರದಿಯೂ ಈ ಸಂಗತಿಯನ್ನು ದೃಢಪಡಿಸಿತ್ತು. 1944 ರ ಅಕ್ಟೋಬರ್-ನವೆಂಬರ್ ನಲ್ಲಿ ಸ್ವಲ್ಪ ಕುಸಿತದ ನಂತರ ವಿವಿಧ ಕೈಗಾರಿಕಾ ಕೇಂದ್ರಗಳಲ್ಲಿನ ಕಾರ್ಮಿಕ-ವರ್ಗದ ಜೀವನ ವೆಚ್ಚ ಸೂಚ್ಯಂಕಗಳು ಮತ್ತೆ ಏರಿಕೆಯಾಗುತ್ತಿದ್ದರೂ ಯುದ್ಧದ ನಂತರ ಬೋನಸ್ ಕಡಿಮೆ ಮಾಡಲಾಯಿತು. 1946 ರಲ್ಲಿ ಮುಷ್ಕರ-ಕ್ರಮಗಳ ಸಂಖ್ಯೆಯಲ್ಲಿನ ಅದ್ಭುತ ಏರಿಕೆ ಕಾರ್ಮಿಕ ವರ್ಗದ ತೀವ್ರ ಪ್ರತಿರೋಧದ ಸೂಚಕವಾಗಿತ್ತು. 1946 ರಲ್ಲಿ 1,961,948 ಕಾರ್ಮಿಕರನ್ನು ಒಳಗೊಂಡ 1,629 ಮುಷ್ಕರಗಳು 12,717,762 ಕೆಲಸದ ದಿನಗಳ ನಷ್ಟವನ್ನುಂಟು ಮಾಡಿದವು. ಮತ್ತು 1945 ರ ಅಂಕಿಅಂಶಗಳು 820 ಮುಷ್ಕರಗಳು, 747,530 ಭಾಗವಹಿಸಿದವರು ಮತ್ತು 4,054,499 ಕೆಲಸದ ದಿನಗಳು ನಷ್ಟವಾದವು.

ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಎಐಟಿಯುಸಿ ರಿಟ್ರೆಂಚ್‌ಮೆಂಟನ್ನು ನಿಲ್ಲಿಸುವುದು, ಮೂಲ ವೇತನದಲ್ಲಿ ತುಟ್ಟಿ-ಭತ್ಯೆ, ಕನಿಷ್ಠ ವೇತನ, ಎಂಟು ಗಂಟೆಗಳ ಕೆಲಸದ- ದಿನ, ಆರೋಗ್ಯ ವಿಮಾ ಯೋಜನೆ, ವೃದ್ಧಾಪ್ಯ ಪಿಂಚಣಿ, ನಿರುದ್ಯೋಗ ಭತ್ಯೆ ಮತ್ತು ಹಲವಾರು ಇತರ ಸಾಮಾಜಿಕ ಭದ್ರತೆ ಯೋಜನೆಗಳ ಬೇಡಿಕೆಗಳನ್ನು ಎತ್ತಿತು.

ಬಂಗಾಳ, ಬಿಹಾರ, ಒರಿಸ್ಸಾ, ಪಂಜಾಬ್, ಸಂಯುಕ್ತ ಪ್ರಾಂತ್ಯಗಳು, ಮುಂಬೈ, ಮದ್ರಾಸ್ ಮುಂತಾದ ವಿವಿಧ ಕೈಗಾರಿಕಾ ಕೇಂದ್ರಗಳ ಕಾರ್ಮಿಕರು ಸರಣಿ ಮುಷ್ಕರ ಹೋರಾಟಗಳನ್ನು ಪ್ರಾರಂಭಿಸಿದರು. ಕಾರ್ಮಿಕ-ವರ್ಗದ ಈ ಸಮರಶೀಲ ಕ್ರಮಗಳನ್ನು ನಿಗ್ರಹಿಸಲು ಸರ್ಕಾರವು ಪೊಲೀಸ್ ಗುಂಡಿನ ದಾಳಿ ಮತ್ತು ತೀವ್ರವಾದ ಇತರ ದಮನಕಾರಿ ಕ್ರಮಗಳಿಗೆ ಮೊರೆಹೋಯಿತು ಮತ್ತು ಅನೇಕ ಕಾರ್ಮಿಕರು ತಮ್ಮ ಪ್ರಾಣವನ್ನು ಬಲಿಕೊಡಬೇಕಾಯಿತು. ವಾಸ್ತವದಲ್ಲಿ ಕಾರ್ಮಿಕ ವರ್ಗದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳಾಗಿ ರೂಪಾಂತರಗೊಂಡ ಈ ಭರ್ಜರಿ ಮುಷ್ಕರ ಕ್ರಮಗಳು ಜನಸಾಮಾನ್ಯರನ್ನು ದೊಡ್ಡ ಪ್ರಮಾಣದಲ್ಲಿ ಪ್ರೇರೇಪಿಸಿದವು.

ಈ ಹಂತದ ಅತ್ಯಂತ ಮಹೋನ್ನತ ಹೋರಾಟವೆಂದರೆ ಭಾರತ ಸರ್ಕಾರದ ಅಂಚೆ ಮತ್ತು ಟೆಲಿಗ್ರಾಫ್ ವಿಭಾಗದ ಕಾರ್ಮಿಕರು ಮತ್ತು ನೌಕರರ ಜುಲೈ 1946 ರಲ್ಲಿ ಪ್ರಾರಂಭಿಸಿದ ಅನಿರ್ದಿಷ್ಟ ಕಾಲದ ಮುಷ್ಕರ.

ಅಂಚೆ ಮತ್ತು ಟೆಲಿಗ್ರಾಫ್ ಇಲಾಖೆಯ ಈ ಮುಷ್ಕರವು ಸಾಮ್ರಾಜ್ಯಶಾಹಿಯ ವಿರುದ್ಧ ಭಾರತದ ಜನರ ಪ್ರಕ್ಷುಬ್ಧ ಸಾಮೂಹಿಕ-ರಾಜಕೀಯ ಕ್ರಿಯೆಯ ಕ್ಷಣದಲ್ಲಿ ಪ್ರಾರಂಭವಾಯಿತು. ನೌಕರರ ಮುಷ್ಕರವು ಬ್ರಿಟಿಷ್ ಆಡಳಿತದ ಕಠಿಣ ಕಾರ್ಮಿಕ ವಿರೋಧಿ ಮನೋಭಾವದ ವಿರುದ್ಧದ ಪ್ರಬಲ ಪ್ರತಿಭಟನೆಯಾಗಿತ್ತು. ಆದ್ದರಿಂದ ಭಾರತದ ಜನರ ತೀವ್ರವಾಗಿ ಹೆಚ್ಚಿದ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಯು ಈ ಮುಷ್ಕರವನ್ನು ಸ್ವಾಗತಿಸಿತು. ಕಾರ್ಮಿಕ ವರ್ಗ ಮತ್ತು ಹೋರಾಟಗಾರರು ಈ ಹೋರಾಟವನ್ನು ಜನರ ಸಾಮ್ರಾಜ್ಯಶಾಹಿ-ವಿರೋಧಿ ಕ್ರಾಂತಿಯ ಬೇರ್ಪಡಿಸಲಾಗದ ಭಾಗವೆಂದು ಪರಿಗಣಿಸಿದರು ಮತ್ತು ಅವರ ಸಕ್ರಿಯ ಬೆಂಬಲವು ಈ ಆರ್ಥಿಕ ಮುಷ್ಕರವನ್ನು ನಿಜವಾಗಿಯೂ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ಹೋರಾಟದ ಮಟ್ಟಕ್ಕೆ ಏರಿಸಿತು.

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಈ ಮುಷ್ಕರಕ್ಕೆ ಬೆಂಬಲ ಘೋಷಿಸಿತು. ಮುಷ್ಕರವನ್ನು ವಿಜಯದತ್ತ ಕೊಂಡೊಯ್ಯಲು ದೇಶದ ಕಾರ್ಮಿಕ ವರ್ಗವು ಸಕ್ರಿಯವಾಗಿ ಹೊರಬಂದಿತು ಮತ್ತು ಅಸ್ಸಾಂನ ಬಂಗಾಳದಲ್ಲಿ ಸೌಹಾರ್ದ ಸಾರ್ವತ್ರಿಕ ಮುಷ್ಕರಗಳನ್ನು ನಡೆಸಲಾಯಿತು.

ವಿವಿಧ ವಿದ್ಯಾರ್ಥಿ ಮತ್ತು ಸಾಮೂಹಿಕ ಸಂಘಟನೆಗಳು ಸಹ ಮುಷ್ಕರಕ್ಕೆ ಸಕ್ರಿಯ ಬೆಂಬಲನೀಡಲು ಮುಂದೆ ಬಂದವು. ಬಂಗಾಳ ವಿಧಾನಸಭೆಯಲ್ಲಿ ಮುಷ್ಕರವನ್ನು ಇತ್ಯರ್ಥಪಡಿಸುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಿ ನಿರ್ಣಯವನ್ನು ಅಂಗೀಕರಿಸಲಾಯಿತು. ದೇಶದ ಶ್ರಮಜೀವಿಗಳ ಎಲ್ಲಾ ವಿಭಾಗಗಳು ಮುಷ್ಕರವನ್ನು ಬೆಂಬಲಿಸಿದವು. ಆದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಈ ಹೋರಾಟಕ್ಕೆ ಯಾವುದೇ ಬಹಿರಂಗ ಬೆಂಬಲವನ್ನು ಅಧಿಕೃತವಾಗಿ ವ್ಯಕ್ತಪಡಿಸಲಿಲ್ಲ. ಜುಲೈ 29 ರಂದು ಯಶಸ್ವಿ ಮುಷ್ಕರ ಮತ್ತು ಹರತಾಳ ಆಚರಿಸಿದ ನಂತರ, ಆ ದಿನ ಕಲ್ಕತ್ತಾದಲ್ಲಿ ನಡೆದ ಬೃಹತ್ ಮೇಳದಲ್ಲಿ, ಮುಷ್ಕರವನ್ನು ಬೆಂಬಲಿಸಿ ಐತಿಹಾಸಿಕ ನಿರ್ಣಯವನ್ನು ಅಂಗೀಕರಿಸಲಾಯಿತು. ನಿರ್ಣಯದ ಮುಕ್ತಾಯದ ವಾಕ್ಯವು ಹೀಗೆ ಹೇಳಿದೆ: "ಈ ಐತಿಹಾಸಿಕ ಸಾರ್ವತ್ರಿಕ ಮುಷ್ಕರವು ದೇಶದ ಕಾರ್ಮಿಕ ಚಳವಳಿಯಲ್ಲಿ ಏಕತೆ ಮತ್ತು ಹೋರಾಟದ ಪ್ರಜ್ಞೆಯ ಹೊಸ ಅಧ್ಯಾಯದ ಆರಂಭವನ್ನು ಗುರುತಿಸಿದೆ ಎಂದು ಈ ಸಭೆಯು ದೃಢವಾಗಿ ನಂಬುತ್ತದೆ."

ಈ ದೃಡವಾದ ನಂಬಿಕೆ ಅಸಾಧಾರಣವಾಗಿ ನಿಜವಾಯಿತು. ಈ ಹೋರಾಟದ ಅನುಭವದಿಂದ ಪಾಠವನ್ನು ಕಲಿತು, ಪೋಸ್ಟ್ ಮತ್ತು ಟೆಲಿಗ್ರಾಫ್ ಕಾರ್ಮಿಕರು ತಮ್ಮ ಎಲ್ಲಾ ಪ್ರತ್ಯೇಕ ಸಂಘಗಳನ್ನು ವಿಲೀನಗೊಳಿಸಿದ ನಂತರ ಒಂದೇ ಸಂಘಟನೆಯನ್ನು ರಚಿಸಲು ನಿರ್ಧರಿಸಿದರು. ಈ ಅನುಭವವು ಪೋಸ್ಟ್ ಮತ್ತು ಟೆಲಿಗ್ರಾಫ್ ಕಾರ್ಮಿಕರಿಗೆ ಯಶಸ್ವಿ ಹೋರಾಟಕ್ಕಾಗಿ ದೇಶದ ಇಡೀ ಕಾರ್ಮಿಕ ವರ್ಗದೊಂದಿಗೆ ಒಂದಾಗುವುದು ಅವಶ್ಯಕವೆಂದು ಕಲಿಸಿತು. ಈ ಭಾವನೆಯಿಂದ ಅಖಿಲ ಭಾರತ ಅಂಚೆ ಮತ್ತು ಆರ್.ಎಂ.ಎಸ್. ಯೂನಿಯನ್ ಮತ್ತು ಅಖಿಲ ಭಾರತ ಲೋವರ್ ಗ್ರೇಡ್ ಸ್ಟಾಫ್ ಯೂನಿಯನ್ ಗಳು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜೊತೆ ಸಂಯೋಜನೆ ಹೊಂದಲು ನಿರ್ಧರಿಸಿದವು.

ಕಾರ್ಮಿಕ ವರ್ಗ ಮತ್ತು ವ್ಯಾಪಕ ಜನಸಮೂಹದ ಈ ಹೋರಾಟದ ಮಧ್ಯೆ, ಎಐಟಿಯುಸಿಯ ಇಪ್ಪತ್ತೆರಡನೇಯ ಅಧಿವೇಶನವು ಸಮರಶೀಲ ಹೋರಾಟದ ಚಂಡಮಾರುತದ ಕೇಂದ್ರವಾಗಿದ್ದ ಕಲ್ಕತ್ತಾದಲ್ಲಿ ಫೆಬ್ರವರಿ 13-19, 19,47 ರಂದು ನಡೆಯಿತು. ಆಗ ಎಐಟಿಯುಸಿಯ ಬಲವು 796,194 ಸದಸ್ಯತ್ವದೊಂದಿಗೆ 601 ಸಂಯೋಜಿತ ಸಂಘಗಳಿಗೆ ಏರಿತು.

ಅಧಿವೇಶನವು ಅಂಗೀಕರಿಸಿದ ಪ್ರಮುಖ ನಿರ್ಣಯವೆಂದರೆ ಎಲ್ಲಾ ಅಧಿಕಾರಗಳು ಉತ್ಪಾದಕ ವರ್ಗದ ಕೈಯಲ್ಲಿರುವ, ಕೈಗಾರಿಕೆಗಳು ರಾಷ್ಟ್ರೀಕರಣಗೊಂಡ, ಇನ್ನು ಮುಂದೆ ಮನುಷ್ಯನಿಂದ ಮನುಷ್ಯನ ಶೋಷಣೆಯಿಲ್ಲದ, ಮತ್ತು ಜನರ ಅಗತ್ಯಗಳಿಗಾಗಿ ಉತ್ಪಾದನೆಯನ್ನು ಆಯೋಜಿಸಲಾಗುವ. ಸಮಾಜವಾದಿ-ಪ್ರಭುತ್ವದ ರಚನೆಯ ಎಐಟಿಯುಸಿಯ ಉದ್ದೇಶವನ್ನು ಪುನರುಚ್ಚರಿಸಿದ್ದು.

ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜನನ

ಭಾರತದ ರಾಜಕೀಯ ಹೋರಾಟದಲ್ಲಿ ಸಾಮೂಹಿಕ ಉತ್ಕರ್ಷ ಮತ್ತು ಕಾರ್ಮಿಕ ವರ್ಗದ ಪ್ರಜ್ಞಾಪೂರ್ವಕ ಪಾತ್ರವು ಕಾಂಗ್ರೆಸ್ ನಾಯಕತ್ವದ ಮೇಲೆ ಹೆಚ್ಚು ಪರಿಣಾಮ ಬೀರಿತು ಮತ್ತು ಅವರ ಕಮ್ಯುನಿಸ್ಟ್ ವಿರೋಧಿ ಪಕ್ಷಪಾತವನ್ನು ತೀಕ್ಷ್ಣಗೊಳಿಸಿತು. 1946 ರ ಆರಂಭದಲ್ಲಿ, ಕಾಂಗ್ರೆಸ್ ಚುನಾವಣೆಗಳಲ್ಲಿವಿಜಯಗಳನ್ನು ಗಳಿಸಿತು ಮತ್ತು

ಪುಟ 14 ನೋಡಿ



ಭಾರತದ ಎರಡನೇ ಅಲೆ ಮೊದಲನೆಯದಕ್ಕಿಂತ ಕೆಟ್ಟದಾಗಿರುತ್ತದೆ : ವಿಜ್ಞಾನಿಗಳ ಎಚ್ಚರಿಕೆ

ಭಾರತ ನಿಜವಾಗಿಯೂ ಕೊವಿಡ್–19 ಮಹಾಸೋಂಕಿನ ಒಂದು ಕ್ರೂರವಾದ ಎರಡನೇ ಅಲೆಯನ್ನು ಪ್ರವೇಶಿಸಿದೆ .ಮೊದಲ ಅಲೆಯಿಂದ ಪಾಟ ಕಲಿತು ಕ್ರಮಗಳನ್ನು ಕೈಗೊಳ್ಳಬೇಕಾದ್ದು ಈಗ ಮಹತ್ವದ ಸಂಗತಿ. ಕೇಂದ್ರ ಮತ್ತು ರಾಜ್ಯಗಳ ನಡುವೆ ಭಾಗೀದಾರಿಕೆಯೊಂದಿಗೆ ಇದನ್ನು ಮಾಡಬೇಕಾಗಿದೆ. ಕೇಂದ್ರ ಸರಕಾರ ಸಾಕ್ಷ್ಯ–ಆಧಾರಿತ ಕಟ್ಟುಪಾಡುಗಳನ್ನು ಮತ್ತು ಹಣಕಾಸು ಹಾಗೂ ಇತರ ನೆರವುಗಳನ್ನು ಒದಗಿಸಬೇಕು, ವಿವಿಧ ರಂಗಗಳಲ್ಲಿ ಅಗತ್ಯ ಪೂರೈಕೆಗಳನ್ನು ಮತ್ತು ಸಹಕಾರವನ್ನು ಕೊಡದೆ ರಾಜ್ಯಗಳ ಮೇಲೆ ದೂಷಣೆಗಳನ್ನು ವರ್ಗಾಯಿಸುವ ಪ್ರಯತ್ನಗಳನ್ನು ಮಾಡಬಾರದು

–ಎ.ಐ.ಪಿ.ಎಸ್.ಎನ್.

ಭಾರತದ ಎರಡನೇ ಕೊವಿಡ್–19 ಅಲೆ ಮೊದಲನೇ ಅಲೆಗಿಂತ ಹೆಚ್ಚು ವೇಗವಾಗಿ, ಹೆಚ್ಚು ತೀವ್ರವಾಗಿ ಏರುತ್ತಿದೆ. 24 ಗಂಟೆಗಳಲ್ಲಿ ಸೋಂಕಿತರ ಸಂಖ್ಯೆ ಈಗ 2 ಲಕ್ಷವನ್ನೂ ದಾಟುತ್ತಿದೆ. ಇದು ಮೊದಲ ಅಲೆಯ ಅತಿ ಹೆಚ್ಚು ದೈನಂದಿನ ಸೋಂಕಿತರ ಸಂಖ್ಯೆಯ ದುಪ್ಪಟ್ಟು ಎನ್ನಲಾಗಿದೆ. ಅದೀಗ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಬ್ರೆಝಿಲ್ ಎರಡನ್ನೂ ದಾಟಿ ಜಗತ್ತಿನಲ್ಲಿ ಪ್ರತಿದಿನ ಅತಿಹೆಚ್ಚು ಸೋಂಕಿತರು ದಾಖಲಾಗುತ್ತಿರುವ ದೇಶವಾಗುತ್ತಿದೆ(ನ್ಯೂಸ್‌ಕ್ಲಿಕ್, ಎಪ್ರಿಲ್ 16).

ಎಪ್ರಿಲ್ 15 ರಂದು ದೈನಂದಿನ ಹೊಸ ಸೋಂಕಿತರ ಸಂಖ್ಯೆ 2.17ಲಕ್ಷವಾಗಿದ್ದರೆ, ಸಾವುಗಳ ಸಂಖ್ಯೆ 1184. ಇದು ಕೂಡ ಸಪ್ಟಂಬರ್ 19, 2020ರಂದು ದಾಖಲಾದ ಅತಿಹೆಚ್ಚು ಸಂಖ್ಯೆಗಿಂತಲೂ ಹೆಚ್ಚು.

ಮಹಾರಾಷ್ಟ್ರದಲ್ಲಿ 46ಶೇ. ಪ್ರಕರಣಗಳು ದಾಖಲಾಗುತ್ತಿದ್ದರೂ, ಇತರ ಹೆಚ್ಚಿನ ರಾಜ್ಯಗಳಲ್ಲೂ ಅದು ಏರುತ್ತಿದೆ, ಮೊದಲನೇ ಅಲೆಗೆ ಹೋಲಿಸಿದರೆ ಹೆಚ್ಚು ವ್ಯಾಪಕವಾಗಿ ಹರಡುತ್ತಿದೆ. ಗುಜರಾತ್, ಉತ್ತರಪ್ರದೇಶ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಆಸ್ಪತ್ರೆ ಹಾಸಿಗೆಗಳು, ಆಕ್ಸಿಜನ್ ಮತ್ತು ಔಷಧಿಗಳ ಅಭಾವ ಕಾಡಲಾರಂಭಿಸಿದೆ. ಇದನ್ನು ಎದುರಿಸಲು ಕ್ರಮಗಳನ್ನು ಕೈಗೊಳ್ಳದಿದ್ದರೆ ಇದನ್ನು ದೇಶದಲ್ಲೆಲ್ಲ ಕಾಣಬೇಕಾದೀತು ಎಂದು ಪರಿಣಿತರು ಎಚ್ಚರಿಸುತ್ತಿದ್ದಾರೆ.

ಜನಗಳನ್ನು, ರಾಜ್ಯಗಳನ್ನು ದೂಷಿಸುವುದೇಕೆ?

ಮೊದಲ ಅಲೆ ಇಳಿಯಲಾರಂಭಿಸಿದಾಗ ಕೇಂದ್ರ ಸರಕಾರ ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತ ಫೆಬ್ರುವರಿ ವೇಳೆಗೆ ದೇಶದಲ್ಲಿ ಇದು ಮುಗಿದೇ ಹೋಗುತ್ತದೆ ಎಂದು ಸಾರಲಾಯಿತು. ಕುಂಭಮೇಳದಂತಹ ಲಕ್ಷಾಂತರ ಜನರು ಸೇರುವ ಧಾರ್ಮಿಕ ಜಮಾವಣೆಗಳಿಗೂ, ಸಾರ್ವಜನಿಕ ರ‍್ಯಾಲಿಗಳಿಗೂ ಅವಕಾಶ ನೀಡಲಾರಂಭಿಸಿತು. ಇದರಿಂದ ಪ್ರೇರಿತರಾದ ಜನಗಳು ಮಾಸ್ಕ್‌ಗಳು, ದೈಹಿಕ ಅಂತರಗಳು ಮುಂತಾದ ಎಲ್ಲ ಜಾಗರೂಕತೆಗಳನ್ನು ಬದಿಗೆ ತಳ್ಳಿದಂತೆ ಕಾಣುತ್ತದೆ.

ಆದರೆ ಈಗ ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರಕಾರ ಜನಗಳು ಜಾಗರೂಕರಾಗಿರಲಿಲ್ಲ ಎಂದು ದೂಷಿಸಿದ್ದಾರೆ.

"ಇದು ಪ್ರಸಕ್ತ ಸನ್ನಿವೇಶಕ್ಕೆ ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳಲಿಕ್ಕೆ ಮತ್ತು ಭವಿಷ್ಯದ ನಿಷ್ಕ್ರಿಯತೆ ಮತ್ತು ವಿಫಲತೆಗೆ ನೆಪಗಳನ್ನು ಒಡ್ಡಲಿಕ್ಕೆ ಅವಕಾಶ ಮಾಡಿಕೊಡುತ್ತದಷ್ಟೇ" ಎಂದು ಅಖಿಲ ಭಾರತ ಜನವಿಜ್ಞಾನ ಜಾಲ(ಎ.ಐ.ಪಿ.ಎಸ್.ಎನ್.) ಎಪ್ರಿಲ್ 14ರಂದು ನೀಡಿದ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದೆ. ಭಾರತ ಅದಾಗಲೇ ನಿಜವಾಗಿಯೂ ಕೊವಿಡ್–19 ಮಹಾಸೋಂಕಿನ ಒಂದು ಕ್ರೂರವಾದ ಎರಡನೇ ಅಲೆಯನ್ನು ಪ್ರವೇಶಿಸಿದೆ ಎಂದು ಅದು ಎಚ್ಚರಿಸಿದೆ.

ಮೊದಲ ಅಲೆಯಿಂದ ಪಾಟ ಕಲಿತು ಕ್ರಮಗಳನ್ನು ಕೈಗೊಳ್ಳಬೇಕಾದ್ದು ಈಗ ಮಹತ್ವದ ಸಂಗತಿ. ಕೇಂದ್ರ ಮತ್ತು ರಾಜ್ಯಗಳ ನಡುವೆ ಭಾಗೀದಾರಿಕೆಯೊಂದಿಗೆ ಇದನ್ನು ಮಾಡಬೇಕಾಗಿದೆ. ಕೇಂದ್ರ ಸರಕಾರ ಸಾಕ್ಷ್ಯ–ಆಧಾರಿತ ಕಟ್ಟುಪಾಡುಗಳನ್ನು ಮತ್ತು ಹಣಕಾಸು ಹಾಗೂ ಇತರ ನೆರವುಗಳನ್ನು ಒದಗಿಸಬೇಕು, ವಿವಿಧ ರಂಗಗಳಲ್ಲಿ ಅಗತ್ಯ ಪೂರೈಕೆಗಳನ್ನು ಮತ್ತು ಸಹಕಾರವನ್ನು ಕೊಡದೆ ರಾಜ್ಯಗಳ ಮೇಲೆ ದೂಷಣೆಗಳನ್ನು ವರ್ಗಾಯಿಸುವ ಪ್ರಯತ್ನಗಳನ್ನು ಮಾಡಬಾರದು ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ.

ಏಕೆಂದರೆ ವಿಪತ್ತು ನಿರ್ವಹಣಾ ಕಾಯ್ದೆಯ ಅಡಿಯಲ್ಲಿ ಕೇಂದ್ರ ಸರಕಾರ ಎಲ್ಲ ಅಧಿಕಾರಗಳನ್ನು ತನ್ನದಾಗಿಸಿಕೊಂಡಿದೆ, ಮತ್ತು ಇಂತಹ ಅಧಿಕಾರಗಳೊಂದಿಗೆ ಹೊಣೆಗಾರಿಕೆಯೂ ಬರುತ್ತದೆ ಎಂಬುದು ಎಲ್ಲರಿಗೂ ಗೊತ್ತಿರಬೇಕಾದ ಸಂಗತಿ.

ಕೇಂದ್ರ ಸರಕಾರ ರೂಪಾಂತರಿ ವೈರಸ್‌ಗಳ ಪಾತ್ರದ ಅರಿವು ಪಡೆಯಬೇಕು, ಸೋಂಕು ತಪಾಸಣೆ ಮತ್ತು ಸಂಪರ್ಕ ಪತ್ತೆ ಹಾಗೂ ನಿಗಾ ಕಾರ್ಯವನ್ನು ಹೆಚ್ಚಿಸಬೇಕು, ಲಸಿಕೆ ಕೊರತೆಯ ಪ್ರಶ್ನೆ ಮತ್ತು ಲಸಿಕೆ ಅಭಿಯಾನದಲ್ಲಿ ಅಸಮಾನತೆಯಿರದಂತೆ ನೋಡಿಕೊಳ್ಳಬೇಕು, ಲಸಿಕೆ ಉತ್ಪಾದನೆಯನ್ನು ಮತ್ತು ಲಭ್ಯತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಮತ್ತು ಲಸಿಕೆ ರಾಷ್ಟ್ರವಾದಕ್ಕೆ ಬಲಿಬೀಳಬಾರದು ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ.

ಇದುವರೆಗೆ ನಡೆದಿರುವ ಪರೀಕ್ಷಣೆಗಳ ಪ್ರಕಾರ ಹೊಸ ರೂಪದಲ್ಲಿ ಬಂದಿರಬಹುದಾದ ಕೊವಿಡ್ ವೈರಸ್ ಹಿಂದಿನದಕ್ಕಿಂತ ಹೆಚ್ಚು ವೇಗವಾಗಿ ಹರಡುತ್ತಿರುವಂತೆ ಕಾಣುತ್ತದೆ. ಹಿಂದೆ ಸೋಂಕು ತಗಲಿದವರಿಗೆ ಮತ್ತೆ ತಗಲಿರುವ ಪ್ರಕರಣಗಳೂ ಇವೆ. ಬಹುಶಃ ಈಗ ಬಂದಿರುವ ಲಸಿಕೆಗಳಿಂದಲೂ ಈ ವೈರಸ್ ತಪ್ಪಿಸಿಕೊಳ್ಳಬಹುದು. ಇದಕ್ಕೆ ಸಾಕಷ್ಟು ಪುರಾವೆಗಳು ಇನ್ನೂ ಲಭ್ಯವಾಗಿರದಿದ್ದರೂ ಸರಕಾರ ತಡೆ ಕ್ರಮಗಳನ್ನು ಇವನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾಡಬೇಕು. ಲಸಿಕೆ ಸಾಮೂಹಿಕ ಸೋಂಕು–ನಿರೋಧವನ್ನು ಒದಗಿಸಬಹುದಾದರೂ, ಈಗ ಈ ಸೋಂಕು ಹರಡುತ್ತಿರುವ ವೇಗವನ್ನು ನೋಡಿದರೆ, ಹೆಚ್ಚಿನ ಪರೀಕ್ಷಣೆ, ಸಂಪರ್ಕಗಳ ಪತ್ತೆ–ಇದೇ ಸೋಂಕು ಹರಡದಂತೆ ತಡೆಯುವ ಮುಖ್ಯ ಕ್ರಮಗಳಾಗಬೇಕು ಎಂದು ವಿಜ್ಞಾನಿಗಳು ಸಲಹೆ ಮಾಡುತ್ತಾರೆ.

"ಸಂಪರ್ಕ ಪತ್ತೆ ಕೆಲಸವನ್ನು ಗಮನಾರ್ಹವಾಗಿ ಬಲಪಡಿಸಬೇಕಾಗಿದೆ. ಇದನ್ನು ಕೇಂದ್ರೀಕೃತ ಆರೋಗ್ಯ ಸೇತು ಆಪ್ ಮೂಲಕ ಮಾಡುವುದಕ್ಕಿಂತ ವಿಕೇಂದ್ರೀಕೃತ ಸಾಕ್ಷ್ಯ–ಆಧಾರಿತ ಮತ್ತು ಸಮುದಾಯದ ಭಾಗವಹಿಸುವಿಕೆಯಿಂದ ಮಾಡಬೇಕಾಗಿದೆ" ಎಂದು ಎಂದು ಎ.ಐ.ಪಿ.ಎಸ್.ಎನ್. ಹೇಳಿಕೆ ಹೇಳುತ್ತದೆ.



ವ್ಯಂಗ್ಯಚಿತ್ರ : ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಲಸಿಕೆಗಳ ಕೊರತೆಯ ಸಮಸ್ಯೆ

ಎರಡನೇ ಅಲೆಯಲ್ಲಿ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವಾಗ ಲಸಿಕೆ ಕೂಡ ತಕ್ಷಣವೇ ಪರಿಣಾಮಕಾರಿಯಾಗದು ಎಂಬುದು ನಿಜ. ಆದರೆ ಇಲ್ಲಿ ಕೂಡ ಕೇಂದ್ರ ಸರಕಾರ, ದುರದೃಷ್ಟವಶಾತ್, ಲಸಿಕೆ ಉತ್ಪಾದನೆಯನ್ನು ತ್ವರಿತವಾಗಿ ಹೆಚ್ಚಿಸಲು ಕ್ರಮ ಕೈಗೊಳ್ಳಲಿಲ್ಲ, ಕೊವ್ಯಾಕ್ಸಿನ್‌ನ ತುರ್ತು ಬಳಕೆಯನ್ನಷ್ಟೇ ತ್ವರಿತಗೊಳಿಸಿತು. ಇದು ಕೂಡ ಮಹಾಸೊಂಕು ಇನ್ನೇನು ಮುಗಿಯಿತು ಎಂಬ ನಂಬಿಕೆಯಿಂದ ಮಾಡಿರುವ ಪ್ರಮಾದ ಎಂದು ವಿಜ್ಞಾನಿಗಳು ಹೇಳುತ್ತಾರೆ.

ಭಾರತ ಜಗತ್ತಿನಲ್ಲೆ ಅತಿ ದೊಡ್ಡ ಲಸಿಕೆ ತಯಾರಿಕಾ ಸಾಮರ್ಥ್ಯ ಹೊಂದಿರುವ ದೇಶ. ಸುಮಾರು 20 ಲಸಿಕೆ ತಯಾರಕ ಕಂಪನಿಗಳಿವೆ. ಈ ತಯಾರಕರೊಂದಿಗೆ ಕೇಂದ್ರ ಸರಕಾರ ತಾನಾಗಿಯೇ ಮುತುವರ್ಜಿ ವಹಿಸಬೇಕಾಗಿತ್ತು. ಆದರೆ ಅದರ ಬದಲು ಅದು ದೊಡ್ಡ ಬಂಡವಾಳಿಗರೇ ಎಲ್ಲವನ್ನೂ ಮಾಡುತ್ತಾರೆ, ತಾನೇನೂ ಮಾಡಬೇಕಾಗಿಲ್ಲ ಎಂದು ಕುಳಿತುಕೊಂಡಿತು. ಅಷ್ಟೇ ಅಲ್ಲ, ಅಮೆರಿಕ, ಆಸ್ಟ್ರೇಲಿಯ, ಜಪಾನಿನೊಂದಿಗೆ ರಚಿಸಿಕೊಂಡ 'ಕ್ವಾಡ್' ಕೂಟದ ಪರವಾಗಿ ಲಸಿಕೆ ಪೂರೈಸುವ ಕೆಲಸವನ್ನು ತಾನು ಮಾಡುವುದಾಗಿ ಹೇಳಿಕೊಂಡು, ಶ್ರೀಮಂತ ದೇಶಗಳಿಂದ ಲಸಿಕೆ ಪಡೆಯದ ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಲಸಿಕೆ ಪೂರೈಸಲು ಚೀನಾದೊಂದಿಗೆ ಸ್ಪರ್ಧೆಗಿಳಿಯಿತು. ಈಗ ಎರಡನೇ ಅಲೆ ವಕ್ಕರಿಸಿರುವುದರಿಂದ ಸರಕಾರ ಈ ರಫ್ತುಗಳನ್ನು ತೀವ್ರವಾಗಿ ಕಡಿತಮಾಡಿ ದೇಶದೊಳಗೆ ಲಸಿಕೆ ಪೂರೈಕೆಯನ್ನು ಹೆಚ್ಚಿಸಲು ಒದ್ದಾಡಬೇಕಾಗಿ ಬಂದಿದೆ ಎಂದು ಈ ರಂಗದಲ್ಲಿನ ಪರಿಣಿತರು ಹೇಳುತ್ತಿದ್ದಾರೆ.

ಲಸಿಕೆ ಉತ್ಪಾದನೆಯನ್ನು ಒಂದೇ ದಿನದಲ್ಲಿ ಹೆಚ್ಚಿಸಲು ಆಗುವುದಿಲ್ಲ. ಉತ್ಪಾದನಾ ಸೌಕರ್ಯಗಳನ್ನು ಹೆಚ್ಚಿಸುವುದು ಮತ್ತು ಒಂದು ಲಸಿಕೆ ಪೂರೈಕೆಯ ಸರಪಳಿಯನ್ನು ನಿರ್ಮಿಸಲು 3–6ತಿಂಗಳು ಬೇಕಾಗುತ್ತದೆ. ಅಲಲ್ದೆ ಭಾರತದ ಹೆಚ್ಚಿನ ಕಂಪನಿಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆಯನ್ನುಹೆಚ್ಚಿಸಲು ಬೇಕಾದ ಹಣಕಾಸು ಸಾಮರ್ಥ್ಯವಿಲ್ಲ. ಅವರಿಗೆ ಬ್ಯಾಂಕ್ ಸಾಲಗಳು, ಪೂರೈಕೆ ಸರಪಳಿಗಳನ್ನು ನಿರ್ಮಿಸಲು ಬೆಂಬಲ ಮತ್ತು ಲಸಿಕೆಗಳ ಖರೀದಿಯ ಖಾತ್ರಿ ಬೇಕಾಗುತ್ತದೆ. .ಆಗಲೇ, ಲಸಿಕೆ ತಯಾರಿಕೆಯಲ್ಲಿ ತೊಡಗಿರುವ ಎರಡೇ ಭಾರತದ ಕಂಪನಿಗಳು, ಸೀರಂ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯ(ಎಸ್‌ಐಐ) ಮತ್ತು ಭಾರತ್ ಬಯೊಟೆಕ್ ಹಣಕಾಸು ಬೆಂಬಲವನ್ನು ಕೋರಿವೆ. ಎಸ್‌ಐಐ ಈಗ 6 ಕೊಟಿ ಲಸಿಕೆಗಳನ್ನು ತಯಾರಿಸುತ್ತಿದ್ದು ಇಂತಹ ಬೆಂಬಲ ಸಿಕ್ಕರೆ 20 ಕೋಟಿ ಡೋಸ್‌ಗಳನ್ನು ತಯಾರಿಸುವುದಾಗಿ ಹೇಳಿದೆ. ದೊಡ್ಡ ಬಂಡವಳಿಗರಿಗೆ ವಿನಾಯ್ತಿ/ರಿಯಾಯ್ತಿಗಳನ್ನು ಕೊಡಮಾಡಲ್ಲು, ಅಹಮದಾಬಾದಿನಲ್ಲಿ ಮೊಟೆರಾ ಸ್ಟೇಡಿಯಂನಂತಹದ್ದಕ್ಕೆ ಮತ್ತಿತರ 'ಪ್ರತಿಷ್ಠೆ' ಹೆಚ್ಚಿಸುವ ಕೆಲಸಗಳಿಗೆ ಹಣ ಸುರಿಯುವ, ಆದರೆ ಜನರ ಅಗತ್ಯಗಳನ್ನು ಪೂರೈಸಲು ಹಣ ಕೊಡುವ ಬದಲು ಕಡಿತ ಮಾಡುವ ಆಳ್ವಿಕೆಯಲ್ಲಿ ಇದನ್ನು ನಿರೀಕ್ಷಿಸಬಹುದೇ ಎಂಬುದೇ ಪ್ರಶ್ನೆ.

ಅಲ್ಲದೆ 35 ದೇಶಗಳಲ್ಲಿ ಈಗಾಗಲೇ ಬಳಕೆಯಲ್ಲಿರುವ ಸ್ಪುಟ್ನಿಕ್ ಲಸಿಕೆಯನ್ನು ತಯಾರಿಸಲು ದೇಶದ 5 ತಯಾರಕರು ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ಇವರು ಒಟ್ಟು 85 ಕೋಟಿ ಡೋಸ್‌ಗಳನ್ನು ತಯಾರಿಸ ಬಲ್ಲರು. ಆದರೂ ಈ ಲಸಿಕೆಗೆ ತುರ್ತು ಬಳಕೆಯ ಅನುಮತಿ ನೀಡಲು ಇಷ್ಟೊಂದು ವಿಳಂಬವೇಕೆ ಎಂದೂ ಪರಿಣಿತರು ಪ್ರಶ್ನಿಸಿದ್ದಾರೆ.

ಲಸಿಕೆ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಲು ಇನ್ನೂ ಒಂದು ದಾರಿಯಿತ್ತು. ಈಗ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮತ್ತು ರಾಷ್ಟ್ರೀಯ ವೈರಾಣು ವಿಜ್ಞಾನ ಸಂಸ್ಥೆ(ಎನ್‌ಐವಿ)ಯ ಜಂಟಿ ಉತ್ಪನ್ನದ ತಯಾರಿಕೆಗೆ ಭಾರತ್ ಬಯೊಟೆಕ್‌ಗೆ ಮಾತ್ರ ಪರವಾನಿಗೆ ನೀಡಲಾಗಿದೆ. ಭಾರತದ ಇತರ ಲಸಿಕೆ ತಯಾರಕ ಕಂಪನಿಗಳಿಗೂ ಇಂತಹ ಪರವನಿಗೆ ನೀಡಬಹುದಾಗಿತ್ತು. ಹಾಫ್ಕಿನ್ ಬಯೋ–ಫಾರ್ಮಸುಟಿಕಲ್ ಕಾರ್ಪೊರೇಷನ್(ಜೈವಿಕ ಔಷಧಿ ನಿಗಮ)ನಂತಹ ಸಾರ್ವಜನಿಕ ವಲಯದ ಘಟಕಗಳನ್ನು ಕೂಡ ಈ ಪರಿಯೋಜನೆಯೊಳಕ್ಕೆ ತರಬಹುದಿತ್ತು ಎಂದು ಪರಿಣಿತರು ಹೇಳುತ್ತಾರೆ.

'ಲಸಿಕೆ ರಾಷ್ಟ್ರವಾದ'ದ ಅಪಾಯ

ಈ ಸಂದರ್ಭದಲ್ಲಿ 'ಲಸಿಕೆ ರಾಷ್ಟ್ರವಾದ'ದ ಅಪಾಯದತ್ತವೂ ಎ.ಐ.ಪಿ.ಎಸ್.ಎನ್. ಗಮನ ಸೆಳೆದಿದೆ. ಅಮೆರಿಕಾದಲ್ಲಿ ಕಂಡು ಬರುತ್ತಿರುವ ಇಂತಹ 'ಲಸಿಕೆ ರಾಷ್ಟ್ರವಾದ' ಮತ್ತು ಪಕ್ಕಾ ವ್ಯಾಪಾರೀ ಪ್ರವೃತ್ತಿಯ ಕಸಮಿಶ್ರಣದ ಪ್ರಭಾವ ನಮ್ಮ ಆಳರಸರನ್ನೂ ಬಾಧಿಸುವಂತೆ ಕಾಣುತ್ತಿದೆ. ಇದೇ ಸೀರಂ ಇನ್ಸ್‌ಟಿಟ್ಯೂಟ್ ಮತ್ತು ಜಾನ್ಸನ್ ಅಂಡ್ ಜಾನ್ಸನ್‌ನ ಲಸಿಕೆಯನ್ನೂ ಭಾರತದಲ್ಲಿ ತಯಾರಿಸಲು ಅನುಮತಿ ಪಡೆದಿರುವ ಬಯೊಲಾಜಿಕಲ್ ಇ ಮುಂತಾದ ಕಂಪನಿಗಳಿಗೆ ಭಾರತದಲ್ಲಿ ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ಅಡ್ಡಿಯಾಗಿರುವ ಸಂಗತಿಗಳು ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ. ಈ ತಯಾರಕರು ವಿಶೇಷ ಸ್ವರೂಪಗಳ ಕಚ್ಚಾಸಾಮಗ್ರಿಗಳು ಮತ್ತು ವಿಶಿಷ್ಟ ರಾಸಾಯನಿಕಗಳನ್ನು ಅಮೆರಿಕಾದಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಅದು ಇಂತಹ ರಫ್ತುಗಳಿಗೆ ತನ್ನ ರಕ್ಷಣಾ ಉತ್ಪಾದನಾ ಕಾಯ್ದೆಯ ಅಡಿಯಲ್ಲಿ ನಿಷೇಧ ಹಾಕಿದೆ. ಅದನ್ನು ತೆಗೆಸಬೇಕಾಗಿದೆ. ಆದರೆ ತನ್ನ ದೇಶದಲ್ಲಿ ಲಸಿಕೆಗಳ ರಫ್ತಿಗೆ ಮಿತಿ ಹೇರಿರುವ ಭಾರತ ಅಮೆರಿಕಾ ಮತ್ತಿತರ ದೇಶಗಳಂತಹ ನಿಷೇಧವನ್ನು ತೆಗೆಸಲು ' ನೈತಿಕ ಆಧಾರ ಇಲ್ಲದಂತಾಗಿದೆ ಎಂದು ಎ.ಐ.ಪಿ.ಎಸ್. ಎನ್. ಹೇಳಿದೆ.

ಭಾರತ ಜಾಗತಿಕ ಲಸಿಕೆ ಪ್ರಯತ್ನಗಳಲ್ಲಿ ನೆರವಾಗುವ ಉತ್ತಮ ದಾಖಲೆ ಹೊಂದಿದ್ದರೂ, ಅಮೆರಿಕ, ಯುರೋಪಿಯನ್ ಒಕ್ಕೂಟಗಳಂತಹ ಶ್ರೀಮಂತ ದೇಶಗಳು ಲಸಿಕೆಗಳ ಅನಗತ್ಯ ದಾಸ್ತಾನುಗಳನ್ನು ಪೇರಿಸಿಕೊಂಡು ಬಡದೇಶಗಳಿಗೆ ಇಲ್ಲದಂತೆ ಮಾಡುವುದನ್ನು ನಿಲ್ಲಿಸಲು ಪ್ರಯತ್ನಿಸಿಲ್ಲ ಎಂದೂ ಎ.ಐ.ಪಿ.ಎಸ್.ಎನ್. ಖೇದ ವ್ಯಕ್ತಪಡಿಸಿದೆ.



ಎಲ್ಲವೂ ಚೆನ್ನಾಗಿದೆ! – ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಬಡವರ ಬಗ್ಗೆ ಕಾಳಜಿಯೇ ಇಲ್ಲದ ಮೋದಿ ಸರ್ಕಾರ



ಯುರೋಪಿಯನ್ ಕೇಂದ್ರ ಬ್ಯಾಂಕ್‌ನ ಒಂದು ವರದಿಯು 2020ರ(ಕೊವಿಡ್ ಕಾಲದ) ಯುರೋಪಿಯನ್ ಒಕ್ಕೂಟ ಮತ್ತು ಅಮೇರಿಕಾ ತಮ್ಮ ನಾಗರಿಕರಿಗೆ ಕೊಟ್ಟ ಹಣಕಾಸು ಬೆಂಬಲದ ಪ್ರಮಾಣವನ್ನು ಅನುಕ್ರಮವಾಗಿ ಜಿಡಿಪಿಯ ಶೇಕಡಾ 4.2 ಮತ್ತು ಶೇಕಡಾ 7.8 ಎಂದು ಹೇಳುತ್ತದೆ. ಭಾರತದಲ್ಲಿ ಇದು ಜಿಡಿಪಿಯ ಶೇಕಡಾ ಒಂದಕ್ಕಿಂತ ಕಡಿಮೆ. ಸಾಂಕ್ರಾಮಿಕದ ಸಮಯದಲ್ಲಿ ಭಾರತದ ಸರ್ಕಾರವು ಜನರಿಗೆ ನೀಡಿದ ಬೆಂಬಲಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಪಶ್ಚಿಮ ದೇಶಗಳು ಮತ್ತು ಭಾರತದ ನಡುವೆ ಅಗಾಧ ವ್ಯತ್ಯಾಸವಿದೆ. ಸರ್ಕಾರದ ವಿಪರೀತ ಜಿಪುಣತನಕ್ಕೆ ದುಡಿಯುವ ಜನರ ಬಗ್ಗೆ ಅದಕ್ಕಿರುವ ಕಾಳಜಿಯ ಕೊರತೆ ಮಾತ್ರ ಸಂಪೂರ್ಣ ಕಾರಣವೆಂದು ಹೇಳಬಹುದು. ಈ ಅಂಶವು ಬಡವರ ಬಗ್ಗೆ ಭಾರತದ ಮತ್ತು ಪಶ್ಚಿಮದ ದೇಶಗಳ ಆಳುವ ವರ್ಗದ ನಡವಳಿಕೆಗಳ ನಡುವಿನ ವ್ಯತ್ಯಾಸದತ್ತ ನಮ್ಮನ್ನು ಮರಳಿ ಕೊಂಡೊಯ್ಯುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಅಮೆರಿಕದ ಅಧ್ಯಕ್ಷ ಹುದ್ದೆಗೆ 2020ರಲ್ಲಿ ನಡೆದ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ನಾಮ ನಿರ್ದೇಶನದ ಆಕಾಂಕ್ಷಿಯಾಗಿದ್ದ ಸೆನೆಟರ್ ಎಲಿಜಬೆತ್ ವಾರೆನ್ ಅವರು ತಮ್ಮ ಪ್ರಚಾರ ಸಭೆಗಳಲ್ಲಿ ತಾವು ಆಯ್ಕೆಯಾದರೆ ಶ್ರೀಮಂತರ ಮೇಲೆ ಸಂಪತ್ತು ತೆರಿಗೆಯನ್ನು ವಿಧಿಸುವುದಾಗಿ ಹೇಳಿದ್ದರು. ಸಂಪತ್ತು ತೆರಿಗೆಯನ್ನು ಹೇರುವ ಅವರ ಪ್ರಗತಿಪರ ಪ್ರಸ್ತಾಪವನ್ನು ಅಮೆರಿಕದ 18 ಮಂದಿ ಬಿಲಿಯನೇರ್‌ಗಳು ಬೆಂಬಲಿಸಿದ್ದರು. ಇಂತಹ ಒಂದು ನಡವಳಿಕೆಯನ್ನು ಭಾರತದ ಸನ್ನಿವೇಶದಲ್ಲಿ ಜ್ಞಾಪಿಸಿಕೊಳ್ಳುವ ಮಾತಿರಲಿ, ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಅಮೇರಿಕದ ಅಥವಾ ಇನ್ನೂ ಸಾಮಾನ್ಯವಾಗಿ ಹೇಳುವುದಾದರೆ, ಪಶ್ಚಿಮ ದೇಶಗಳ ಬಂಡವಾಳಶಾಹಿಗಳು ದಯಾಮಯಿಗಳು ಅಥವಾ ಅವರ ಮನೋಭಾವವು ಉದಾರವಾದದ್ದು ಎಂಬ ಅಭಿಪ್ರಾಯವನ್ನು ಬಿಲಿಯನೇರ್‌ಗಳ ಈ ಪ್ರಸ್ತಾಪಕ್ಕೆ ಸಂಬಂಧಿಸಿ ಹೇಳುವಂತಿಲ್ಲ. ಯಾವ ಪ್ರತಿರೋಧವೂ ಇಲ್ಲದೆ ತಾವು ಐಶಾರಾಮದ ಜೀವನ ನಡೆಸಬೇಕು ಎಂಬುದಷ್ಟೇ ಅವರ ಕಾಳಜಿ. ತಮ್ಮ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ಅಬಾಧಿತವಾಗಿರಬೇಕು ಎಂದಾದರೆ, ಬಡವರ ಬಗ್ಗೆ ಅಲ್ಪ ಸ್ವಲ್ಪ ಕಾಳಜಿ ತೋರಿಸುವುದು ಅಗತ್ಯ ಎಂಬದು ಅವರ ವ್ಯಾವಹಾರಿಕ ನಂಬಿಕೆ. ಅದಕ್ಕಿಂತ ಹೆಚ್ಚಿಗೆ ಏನೂ ಇಲ್ಲ.

ಕೋವಿಡ್–19ರ ಸಂದರ್ಭದಲ್ಲಿ ಆಳುವ ವರ್ಗಗಳ ಎರಡು ಗುಂಪುಗಳು ಘೋಷಣೆ ಮಾಡಿರುವ ರಕ್ಷಣಾ ಪ್ಯಾಕೇಜ್‌ಗಳ ನಡುವೆ ಇದೇ ರೀತಿಯ ವ್ಯತ್ಯಾಸವನ್ನು ಗುರುತಿಸಬಹುದು. ಸಾಂಕ್ರಾಮಿಕ ಸಂಬಂಧಿತ ಲಾಕ್‌ಡೌನ್‌ನಿಂದಾಗಿ, ಜಿಡಿಪಿಯು ಪಶ್ಚಿಮದ ದೇಶಗಳಲ್ಲಿ ಹಾಗೂ ಭಾರತದಲ್ಲಿ ತೀವ್ರವಾಗಿ ಕುಸಿದಿದೆ. ಆದ್ದರಿಂದ ಈ ಎರಡೂ ಕಡೆಯಲ್ಲಿ ತೆರಿಗೆ ಆದಾಯವೂ ತೀವ್ರವಾಗಿ ಕುಸಿದಿದೆ. ಆದ್ದರಿಂದ, ಸಾಂಕ್ರಾಮಿಕ ಇರಲಿ ಅಥವಾ ಇಲ್ಲದಿರಲಿ, ಸರ್ಕಾರದ ಖರ್ಚು ವೆಚ್ಚಗಳನ್ನು ಸಂಪೂರ್ಣವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸಬೇಕು ಎಂದಾದರೆ, ಸಾಮಾನ್ಯವಾಗಿ ವಿತ್ತೀಯ ಕೊರತೆ ಹೆಚ್ಚುತ್ತದೆ ಹಾಗೂ ಜಿಡಿಪಿ ಮತ್ತು ವಿತ್ತೀಯ ಕೊರತೆಗಳ ಅನುಪಾತವೂ ಏರುತ್ತದೆ. ಆದ್ದರಿಂದ, ಲಾಕ್‌ಡೌನ್ ಎಷ್ಟು ತೀವ್ರವಾಗಿರುತ್ತದೆಯೋ ಅಷ್ಟೇ ತೀವ್ರ ಪ್ರಮಾಣದಲ್ಲಿ ತೆರಿಗೆ ಆದಾಯಗಳೂ ಕುಸಿಯುತ್ತವೆ ಮತ್ತು ಜಿಡಿಪಿ ಮತ್ತು ವಿತ್ತೀಯ ಕೊರತೆಗಳ ಅನುಪಾತವೂ ಏರುತ್ತದೆ. ಆದರೂ ಸಹ, ವಿತ್ತೀಯ ಕೊರತೆಗಳ ಸಾಪೇಕ್ಷ ಗಾತ್ರಗಳ ಹೋಲಿಕೆಯ ಮೂಲಕ ರಕ್ಷಣಾ ಪ್ಯಾಕೇಜ್‌ಗಳ ಪ್ರಮಾಣವನ್ನು ನಿರ್ಧರಿಸುವುದು ತಪ್ಪಾಗುತ್ತದೆ. ಜೊತೆಗೆ, ಈ ಪ್ಯಾಕೇಜ್‌ಗಳಲ್ಲಿ ಬಡವರಿಗೆ ಎಷ್ಟು ಮೊತ್ತದ ವಿವೇಚನಾ ಹಣಕಾಸಿನ ಬೆಂಬಲವನ್ನು ನಿಗದಿಪಡಿಸಲಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ಪರಿಶೀಲಿಸುವುದು ಅಗತ್ಯವಾಗುತ್ತದೆ.

2019ರ ಮತ್ತು 2020ರ ಜಿಡಿಪಿ ಮತ್ತು ಪ್ರಾಥಮಿಕ ವಿತ್ತೀಯ ಕೊರತೆಯ ಅನುಪಾತದ ಹೆಚ್ಚಳವನ್ನು ಹೋಲಿಸಿದ ಯುರೋಪಿಯನ್ ಕೇಂದ್ರ ಬ್ಯಾಂಕ್, ಯುರೋಪಿಯನ್ ಒಕ್ಕೂಟ ಮತ್ತು ಅಮೇರಿಕಾ ಕ್ರಮವಾಗಿ ಶೇಕಡಾ 6.7 ಮತ್ತು 9.8 ವಿತ್ತೀಯ ಕೊರತೆ ಹೊಂದಿದ್ದವು ಎಂದು ಹೇಳಿದೆ. ಈ ಅಂಕಿ ಅಂಶಗಳಿಂದ ವಿವೇಚನಾ ವಿತ್ತೀಯ ಬೆಂಬಲ ಎಷ್ಟು ಎಂಬುದು ಗೊತ್ತಾಗುವುದಿಲ್ಲ. ಆದರೆ, ಯುರೋಪಿಯನ್ ಕೇಂದ್ರ ಬ್ಯಾಂಕ್‌ನ ಒಂದು ವರದಿಯು 2020ರ ಯುರೋಪಿಯನ್ ಒಕ್ಕೂಟ ಮತ್ತು ಅಮೇರಿಕಾ ವಿವೇಚನಾ ವಿತ್ತೀಯ ಬೆಂಬಲದ ಪ್ರಮಾಣವನ್ನು ಅನುಕ್ರಮವಾಗಿ ಜಿಡಿಪಿಯ ಶೇಕಡಾ 4.2 ಮತ್ತು ಶೇಕಡಾ 7.8 ಎಂದು ಹೇಳುತ್ತದೆ. (ಐಎಂಎಫ್, ಅಮೇರಿಕಾದ ವಿವೇಚನಾ ವಿತ್ತೀಯ ಬೆಂಬಲವನ್ನು ಜಿಡಿಪಿಯ ಶೇಕಡಾ 16.7 ರಷ್ಟು ಎತ್ತರದ ಮಟ್ಟದಲ್ಲಿ ಇರಿಸುತ್ತದೆ).

ವಿವೇಚನಾ ವಿತ್ತೀಯ ಬೆಂಬಲದ ಪ್ರಮಾಣಕ್ಕೆ ಸಂಬಂಧಿಸಿದ ಈ ಅಂಕಿಅಂಶಗಳಲ್ಲಿ ಯಾವುದನ್ನೇ ಒಪ್ಪಿಕೊಂಡರೂ ಸಹ, ಅವೆಲ್ಲವೂ ಭಾರತದ ವಿವೇಚನಾ ವಿತ್ತೀಯ ಬೆಂಬಲದ ಪ್ರಮಾಣಕ್ಕಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿವೆ. ಭಾರತದ ವಿವೇಚನಾ ವಿತ್ತೀಯ ಬೆಂಬಲದ ಪ್ರಮಾಣವು 1.65 ರಿಂದ 1.9 ಲಕ್ಷ ಕೋಟಿ ರೂ.ಗಳ ಆಸುಪಾಸಿನಲ್ಲಿದೆ. ಇದು ನಮ್ಮ ಜಿಡಿಪಿಯ ಶೇಕಡಾ ಒಂದಕ್ಕಿಂತ ಕಡಿಮೆ. ಸಾಂಕ್ರಾಮಿಕದ ಸಮಯದಲ್ಲಿ ಭಾರತದ ಸರ್ಕಾರವು ಜನರಿಗೆ ನೀಡಿದ ಬೆಂಬಲಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಪಶ್ಚಿಮ ದೇಶಗಳು ಮತ್ತು ಭಾರತದ ನಡುವೆ ಅಗಾಧ ವ್ಯತ್ಯಾಸವಿದೆ.

ಒಂದು ವಾಸ್ತವ ಸಂಗತಿಯೇ ಈ ಅಗಾಧ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ. ಅಮೆರಿಕದಲ್ಲಿ ವಿವೇಚನಾ ವಿತ್ತೀಯ ಬೆಂಬಲವು ಸಾರ್ವತ್ರಿಕವಾಗಿದೆ. ಅಂದರೆ, ಪ್ರತಿ ಮನೆಗೂ ಹಣಕಾಸು ಬೆಂಬಲವನ್ನು ವಿಸ್ತರಿಸಲಾಗಿದೆ. ಉದಾಹರಣೆಗೆ, ಬಿಡೆನ್ ಪ್ಯಾಕೇಜ್‌ನಲ್ಲಿ ವರ್ಷಕ್ಕೆ $75,000ಕ್ಕಿಂತ ಕಡಿಮೆ ಸಂಪಾದಿಸುವ ಪ್ರತಿಯೊಬ್ಬ ವ್ಯಕ್ತಿಗೂ ತಿಂಗಳಿಗೆ $1400 ಮತ್ತು ಪ್ರತಿಯೊಬ್ಬ ನಿರುದ್ಯೋಗಿ ವ್ಯಕ್ತಿಗೂ ವಾರಕ್ಕೆ $300 ಪಾವತಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ, ಇದನ್ನು ಬಿಡೆನ್ ಅವರ ಸ್ಪಂದನೆ ಮಾತ್ರ ಎನ್ನುವಂತಿಲ್ಲ. ಟ್ರಂಪ್ ಕೂಡ ಬಡವರಿಗೆ ಇದೇ ರೀತಿಯ ಸಾರ್ವತ್ರಿಕ ವರ್ಗಾವಣೆಗಳಿಂದ ಕೂಡಿದ ಪ್ಯಾಕೇಜನ್ನು ಅನಾವರಣಗೊಳಿಸಿದ್ದರು. ಈ ಕ್ರಮಗಳಿಗೆ ಹೋಲಿಸಿದರೆ, ಭಾರತದಲ್ಲಿ ಬಡವರಿಗೆ ಅಂತಹ ಸಾರ್ವತ್ರಿಕ ವರ್ಗಾವಣೆಗಳು ಇರಲೇ ಇಲ್ಲ. ಹಲವಾರು ಅರ್ಥಶಾಸ್ತ್ರಜ್ಞರು, ನಾಗರಿಕ ಸಮಾಜ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಮಾಡಿದ ಮನವಿಗಳ ಹೊರತಾಗಿಯೂ ಭಾರತದಲ್ಲಿ ಅಂತಹ ಯಾವ ವರ್ಗಾವಣೆಯ ಕ್ರಮವನ್ನೂ ಕೈಗೊಳ್ಳಲಿಲ್ಲ. ಆದಾಯ ತೆರಿಗೆಯ ವ್ಯಾಪ್ತಿಯಿಂದ ಹೊರಗುಳಿದಿರುವ ಪ್ರತಿ ಕುಟುಂಬಕ್ಕೂ ತಿಂಗಳಿಗೆ 7000 ರೂಗಳ ನೆರವು ಒದಗಿಸಬೇಕೆಂದು ಎಡ ಪಕ್ಷಗಳು ನಿರ್ದಿಷ್ಟವಾಗಿ ಒತ್ತಾಯಿಸಿದ್ದವು.

ಒಟ್ಟಾರೆಯಾಗಿ ದುಡಿಯುವ ಜನರಿಗೆ ಸಿಕ್ಕಿದ ಚೂರು ಪಾರು ನೆರವು ಕೂಡ ಹಣ ವರ್ಗಾವಣೆಯ ರೂಪದಲ್ಲಿಲ್ಲ. ಅದು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮಾಡಿದ ಕೆಲಸಕ್ಕೆ ಕೊಟ್ಟ ಕೂಲಿಯಾಗಿತ್ತು. 2019–20 ಮತ್ತು 2020–21ರ ನಡುವೆ ಈ ಯೋಜನೆಯಡಿ ಉದ್ಯೋಗ ಪಡೆದವರ ಸಂಖ್ಯೆಯು 7.88 ಕೋಟಿಯಿಂದ 11.17 ಕೋಟಿಗೆ ಏರಿದೆ. ಹಠಾತ್ ಲಾಕ್‌ಡೌನ್‌ನಿಂದಾಗಿ ವಲಸೆ ಕಾರ್ಮಿಕರು ತಮ್ಮ ಆದಾಯದ ಮೂಲಗಳನ್ನು ಮತ್ತು ನಂತರ ತಮ್ಮ ವಾಸದ ಸ್ಥಳಗಳನ್ನೂ ಕಳೆದುಕೊಂಡ ಕಾರಣದಿಂದ ತಮ್ಮ ತಮ್ಮ ಹಳ್ಳಿಗಳಿಗೆ ಮರಳಿದ್ದುದೇ ಈ ಹೆಚ್ಚಳಕ್ಕೆ ಕಾರಣ. ಅವರು ಗ್ರಾಮೀಣ ನಿರುದ್ಯೋಗಿ ಪಡೆಯನ್ನು ಉಬ್ಬಿಸಿ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೆಲಸ ಗಿಟ್ಟಿಸಿಕೊಂಡರು.

ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅವರು ತಮ್ಮ ಆದಾಯವನ್ನು ದೈಹಿಕ ಶ್ರಮದ ಅಗತ್ಯವಿರುವ ಯೋಜನೆಗಳಲ್ಲಿ ಬೆವರು ಸುರಿಸಿ ಪಡೆದರು. ಹಣ ವರ್ಗಾವಣೆ ಮಾಡುವ ಸ್ಪಂದನೆಯನ್ನು ಸರ್ಕಾರ ತೋರಿಸಲಿಲ್ಲ. ಅಮೆರಿಕದಲ್ಲಿ ಟ್ರಂಪ್ ಆಡಳಿತವು ಬಾಡಿಗೆದಾರರನ್ನು ಹೊರಹಾಕದಂತೆ ಆಜ್ಞೆ ಹೊರಡಿಸಿತ್ತು. ಅದೇ ರೀತಿಯಲ್ಲಿ, ಲಾಕ್‌ಡೌನ್ ಸಮಯದಲ್ಲಿ ಬಾಡಿಗೆದಾರರನ್ನು ಹೊರಹಾಕದಂತೆ ಮೋದಿ ಸರ್ಕಾರವು ತಡೆಯಬಹುದಿತ್ತು. ಅಷ್ಟನ್ನೂ ಮಾಡಲಿಲ್ಲ. ಅಂತಹ ಭಾವಶೂನ್ಯತೆಯನ್ನು ಅಥವಾ ಕಲ್ಲು ಹೃದಯವನ್ನು ಅದು ಪ್ರದರ್ಶಿಸಿತು.

ಒಂದು ದೊಡ್ಡ ಮೊತ್ತದ ರಕ್ಷಣಾ ಪ್ಯಾಕೇಜ್ ಒದಗಿಸುವುದರಿಂದ ವಿತ್ತೀಯ ಕೊರತೆಯ ಅನುಪಾತವು ಮತ್ತಷ್ಟು ವೃದ್ಧಿಸುತ್ತಿತ್ತು ಮತ್ತು ಅದು ಜಾಗತಿಕ ಹಣಕಾಸು ಬಂಡವಾಳವನ್ನು ಮತ್ತು ಐಎಂಎಫ್ ನಂತಹ ಸಂಸ್ಥೆಗಳನ್ನು ಸಿಟ್ಟಿಗೇಳಿಸುತ್ತಿತ್ತು ಎಂದು ವಾದಿಸಬಹುದು. ಆದರೆ ಈ ವಾದವು ಮೂರನೇ ಜಗತ್ತಿನ ಬಹುತೇಕ ದೇಶಗಳಿಗೆ ಅನ್ವಯವಾಗುತ್ತದೆಯಾದರೂ ಸಹ, ಭಾರತದ ಪ್ರಕರಣವನ್ನು ಈ ರೀತಿಯಲ್ಲಿ ವಿವರಿಸಲು ಸಾಧ್ಯವಿಲ್ಲ. ಭಾರತದ ಪ್ರಭುತ್ವವು ಇಂತಹ ಕ್ರಮಗಳಿಗೆ ಮುಂದಾಗಲೇ ಇಲ್ಲ. ಐಎಂಎಫ್ ನಿಂದಾಗಲಿ ಅಥವಾ ಆರ್ಥಿಕ ಹೊರಹರಿವಿನ ಪ್ರವಾಹದ ಆರಂಭದ ಮೂಲಕವಾಗಲಿ, ಖರ್ಚು ವೆಚ್ಚಗಳನ್ನು ನಿಯಂತ್ರಿಸುವ ನವ ಉದಾರವಾದಿ ಚೌಕಟ್ಟಿನ ಒತ್ತಾಯಕ್ಕೆ ಭಾರತವು ಒಳಗಾಗಿರಲಿಲ್ಲ. ಆದ್ದರಿಂದ, ಸರ್ಕಾರದ ವಿಪರೀತ ಜಿಪುಣತನಕ್ಕೆ ದುಡಿಯುವ ಜನರ ಬಗ್ಗೆ ಅದಕ್ಕಿರುವ ಕಾಳಜಿಯ ಕೊರತೆ ಮಾತ್ರ ಸಂಪೂರ್ಣ ಕಾರಣವೆಂದು ಹೇಳಬಹುದು. ಹಾಗಾಗಿ, ಈ ಅಂಶವು ಬಡವರ ಬಗ್ಗೆ ಭಾರತದ ಮತ್ತು ಪಶ್ಚಿಮದ ದೇಶಗಳ ಆಳುವ ವರ್ಗದ ನಡವಳಿಕೆಗಳ ನಡುವಿನ ವ್ಯತ್ಯಾಸದತ್ತ ನಮ್ಮನ್ನು ಮರಳಿ ಕೊಂಡೊಯ್ಯುತ್ತದೆ.

ಭಾರತ ಮತ್ತು ಪಶ್ಚಿಮದ ದೇಶಗಳ ಆಳುವ ವರ್ಗದ ನಡವಳಿಕೆಗಳ ನಡುವಿನ ಹೋಲಿಕೆಯಲ್ಲಿ ಕಾಣುವ ಈ ವ್ಯತ್ಯಾಸಗಳಿಗೆ ಮೂರು ಸಂಗತಿಗಳನ್ನು ಗುರುತಿಸಬಹುದು. ಮೊದಲನೆಯದು, ಭಾರತದ ದುಡಿಯುವ ಜನರ ಚೌಕಾಶಿಯ ಬಲದ ಕೊರತೆ ಮತ್ತು ಬಹುಸಂಖ್ಯಾತರು ಅಸಂಘಟಿತರಾಗಿರುವುದು. ನಿರುದ್ಯೋಗವು ಬಹಳ ದೊಡ್ಡ ಪ್ರಮಾಣದಲ್ಲಿರುವುದರಿಂದ "ಉದ್ಯೋಗ ಪಡಿತರ"ವು ಕೆಲವರಿಗೆ ಪೂರ್ಣ ಉದ್ಯೋಗ ಮತ್ತು ಇತರರಿಗೆ ಪೂರ್ಣ ನಿರುದ್ಯೋಗ ಎಂಬ ರೂಪದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲ. ಬದಲಿಗೆ, ಪ್ರತಿಯೊಬ್ಬರೂ ಕೇವಲ ಭಾಗಶಃ ಉದ್ಯೋಗದಲ್ಲಿದ್ದಾರೆ. ಈ ಪರಿಸ್ಥಿತಿಯಲ್ಲಿ ಕಾರ್ಮಿಕರನ್ನು ಸಂಘಟಿಸುವುದು ದುಪ್ಪಟ್ಟು ಕಷ್ಟವಾಗುತ್ತದೆ. ಏಕೆಂದರೆ, ಮೊದಲಿಗೆ ನಿರುದ್ಯೋಗದ ಅಗಾಧತೆ, ನಂತರ, ಈ ಅಗಾಧ ನಿರುದ್ಯೋಗವು ಅಷ್ಟು ದೊಡ್ಡ ಸಂಖ್ಯೆಯ ಜನರನ್ನು ಬಾಧಿಸುವುದರಿಂದ ಅವರ ಮೇಲೆ ಅದು ಬೀರುವ ಪರಿಣಾಮವು ತೆಳುವಾಗುತ್ತದೆ. ಮೋದಿ ಸರ್ಕಾರವು ಸಾಂಕ್ರಾಮಿಕದ ಕಾಲದಲ್ಲಿ, ಸಂಸತ್ತಿನಲ್ಲಿ ಅವಸರ ಅವಸರವಾಗಿ ಅಂಗೀಕಾರ ಪಡೆದ ಕಾರ್ಮಿಕ ಕಾನೂನುಗಳು ಕಾರ್ಮಿಕರ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತವೆ.

ಈ ಸಂಬಂಧವಾಗಿ ಒಂದು ಪ್ರಶ್ನೆಯನ್ನು ಎತ್ತಬಹುದು: ಕಾರ್ಮಿಕರ, ರೈತರ ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳು ದುರ್ಬಲವಾಗಿರಬಹುದು, ನಿಜ. ಆದರೆ, ಚುನಾವಣೆಯಲ್ಲಿ ಅವರೆಲ್ಲರೂ ಆಳುವ ಪಕ್ಷದ ವಿರುದ್ಧವಾಗಿ ಮತ ಹಾಕಿದರೆ ನಿಜಕ್ಕೂ ಅದರ ಪರಿಣಾಮ ತಮ್ಮ ವಿರುದ್ಧವಾಗಿ ತಿರುಗಬಹುದು ಎನ್ನುವ ಭೀತಿಯು ಸರ್ಕಾರವನ್ನು ದುಡಿಯುವ ಜನರ ಅಗತ್ಯಗಳಿಗೆ ಸ್ಪಂದಿಸುವಂತೆ ಮತ್ತು ಜನರ ದುಃಸ್ಥಿತಿಯ ಬಗ್ಗೆ ಸಹಾನುಭೂತಿ ಹೊಂದಿರುವಂತೆ ಮಾಡಬೇಕು, ಅಲ್ಲವೆ?

ಈ ಪ್ರಶ್ನೆಗೆ ಉತ್ತರವಾಗಿ, ಎರಡನೇ ಸಂಗತಿಯನ್ನು ಪ್ರಸ್ತಾಪಿಸಬಹುದು ಮತ್ತು ಅದು ಮೋದಿ ಸರ್ಕಾರದ ವಿಷಯದಲ್ಲಿ ಹೆಚ್ಚು ನಿರ್ದಿಷ್ಟವೂ ಹೌದು. ಜನರನ್ನು ಕೋಮು ಆಧಾರದ ಮೇಲೆ ವಿಭಜಿಸುವಲ್ಲಿ, ಬಹುಸಂಖ್ಯಾತ ಸಮುದಾಯವನ್ನು ಒಗ್ಗೂಡಿಸಿ ಅದರ ಒಟ್ಟು ಬಲವನ್ನು ತನ್ನ ಹಿಂದೆ ಹಿಡಿದಿಟ್ಟುಕೊಳ್ಳುವಲ್ಲಿ ಅದೆಷ್ಟು ಆತ್ಮವಿಶ್ವಾಸ ಹೊಂದಿದೆ ಎಂದರೆ, ದುಡಿಯುವ ಜನರ ಪರಿಸ್ಥಿತಿಗಳ ಬಗ್ಗೆ ಕಾಳಜಿ ವಹಿಸದ ಲೋಪವನ್ನು ಜೀರ್ಣಿಸಿಕೊಳ್ಳಬಹುದು ಎನ್ನುವಷ್ಟು ಅಪರಿಮಿತವಾಗಿದೆ. ಲಾಕ್‌ಡೌನ್ ಕಠಿಣವಾಗಿಯೇ ಇದ್ದಿರಬಹುದು, ಅದನ್ನು ಕೇವಲ ನಾಲ್ಕು ಗಂಟೆಗಳ ನೋಟೀಸ್ ಕೊಟ್ಟು ಜಾರಿ ಮಾಡಿದ್ದಿರಬಹುದು, ತಮ್ಮ ತಮ್ಮ ಊರು – ಮನೆ

ಪುಟ 14 ನೋಡಿ



ಭಾರತ ಮತ್ತು ಪಶ್ಚಿಮದ ದೇಶಗಳ ಆಳುವ ವರ್ಗದ ನಡವಳಿಕೆಗಳ ನಡುವಿನ ಹೋಲಿಕೆಯಲ್ಲಿ ಕಾಣುವ ಈ ವ್ಯತ್ಯಾಸಗಳಿಗೆ ಮೂರು ಸಂಗತಿಗಳನ್ನು ಗುರುತಿಸಬಹುದು.

1. ಭಾರತದ ದುಡಿಯುವ ಜನರ ಚೌಕಾಶಿಯ ಬಲದ ಕೊರತೆ ಮತ್ತು ಬಹುಸಂಖ್ಯಾತರು ಅಸಂಘಟಿತರಾಗಿರುವುದು.
2. ಜನರನ್ನು ಕೋಮು ಆಧಾರದ ಮೇಲೆ ವಿಭಜಿಸುವಲ್ಲಿ, ಬಹುಸಂಖ್ಯಾತ ಸಮುದಾಯವನ್ನು ಒಗ್ಗೂಡಿಸಿ ಅದರ ಒಟ್ಟು ಬಲವನ್ನು ತನ್ನ ಹಿಂದೆ ಹಿಡಿದಿಟ್ಟುಕೊಳ್ಳುವಲ್ಲಿ ದುಡಿಯುವ ಜನರ ಪರಿಸ್ಥಿತಿಗಳ ಬಗ್ಗೆ ಕಾಳಜಿ ವಹಿಸದ ಲೋಪವನ್ನು ಜೀರ್ಣಿಸಿಕೊಳ್ಳಬಹುದು ಎನ್ನುವಷ್ಟು ಮೋದಿ ಸರಕಾರದ ಅಪರಿಮಿತ ಆತ್ಮವಿಶ್ವಾಸ.
3. ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಜಾತಿ–ಪದ್ಧತಿಯಿಂದಾಗಿ ಒಂದು ಸಂಪ್ರದಾರದಂತೆಯೇ ಆಗಿರುವ ಬಡವರು ಮತ್ತು ದುಡಿಯುವ ಜನರ ಬಗ್ಗೆ ಉಳಿದವರು ತೋರುವ ನಿಷ್ಕಾಳಜಿ.

ಸಿತಾಲ್‌ಕುಚಿ ಗೋಲೀಬಾರ್ ಪಿತೂರಿಯ ಫಲಿತಾಂಶವೇ?

ಪಶ್ಚಿಮ ಬಂಗಾಲ ವಿಧಾನಸಭಾ ಚುನಾವಣೆಗಳ ಮೂರು ಹಂತಗಳ ಶಾಂತಿಯುತ ಮತದಾನದ ನಂತರ ನಾಲ್ಕನೇ ಹಂತದ ಮತದಾನದ ಸಂದರ್ಭದಲ್ಲಿ ಐವರು ಯುವಜನರು ಪ್ರಾಣ ಕಳಕೊಂಡಿದ್ದಾರೆ. ಇವರಲ್ಲಿ ನಾಲ್ವರು ಕೂಚ್‌ಬೆಹಾರ್ ಜಿಲ್ಲೆಯ ಸಿತಾಲ್‌ಕುಚಿಯಲ್ಲಿ ಸಿಐಎಸ್‌ಎಫ್ ಗೋಲೀಬಾರ್‌ನಲ್ಲಿ ಸತ್ತಿದ್ದಾರೆ.

ಬಿಜೆಪಿಯ ರಾಜ್ಯ ಅಧ್ಯಕ್ಷ ದಿಲಿಪ್ ಘೋಷ್ "ಇನ್ನಷ್ಟು ಸಿತಾಲ್‌ಕುಚಿಗಳು ನಡೆಯಲಿವೆ" ಎಂಬ ಆಘಾತಕಾರೀ ಹೇಳಿಕೆ ನೀಡಿದರು. ಇದು ಆರಂಭವಷ್ಟೇ, ಕೇಂದ್ರೀಯ ಪಡೆಗಳ ಕೈಗಳಲ್ಲಿ ರೈಫಲ್‌ಗಳು ಪ್ರದರ್ಶನಕ್ಕಷ್ಟೇ ಅಲ್ಲ, ಅದರಲ್ಲಿ ಕಾಡತೂಸುಗಳೂ ಇವೆ ಎಂದು ಅವರಿಗೆ ಗೊತ್ತಾಗಿದೆ ಎಂದರು. ಇನ್ನೊಬ್ಬ ಬಿಜೆಪಿ ಮುಖಂಡ ರಾಹುಲ್ ಸಿನ್ಹ 'ಏಳು–ಎಂಟು ಮಂದಿ ಸಾಯಬೇಕಾಗಿತ್ತು' ಎಂಬ ಇನ್ನೊಂದು ವಿಲಕ್ಷಣ ಹೇಳಿಕೆ ನೀಡಿದ್ದಾರೆ ಎಂದು ವರದಿಯಾಗಿದೆ.

ಮತ್ತೊಬ್ಬ ಬಿಜೆಪಿ ಮುಖಂಡ ಸಯಂತನ್ ಬಸು "ನಾವು ಸಿತಾಲ್‌ಕುಚಿ ಆಟ ಆಡುತ್ತೇವೆ .....ನಾಲ್ವರನ್ನು ಆಗಲೇ ಸ್ವರ್ಗಕ್ಕೆ ಕಳಿಸಲಾಗಿದೆ" ಎಂದು ಹೇಳಿರುವುದಾಗಿ ಚುನಾವಣಾ ಆಯೋಗಕ್ಕೆ ದೂರು ಹೋಗಿದೆ. **ಚುನಾವಣಾ ಆಯೋಗ ಇವರಿಗೆ ನೋಟೀಸು ಕಳಿಸಿದೆಯಂತೆ. ದಿಲಿಪ್ ಘೋಷ್ ರವರಿಗೆ 24 ಗಂಟೆಗಳ ಚುನಾವಣಾ ಪ್ರಚಾರ ನಿಷೇಧದ ಶಿಕ್ಷೆ ವಿಧಿಸಲಾಗಿದೆ.**

ಸಿಪಿಐ(ಎಂ) ಮುಖಂಡರಾದ ಮಹಮ್ಮದ್ ಸಲೀಂ ಒಂದು ಪತ್ರಿಕಾಗೋಷ್ಠಿಯಲ್ಲಿ ಇದಕ್ಕೆ ಪ್ರತಿಕ್ರಿಯಿಸುತ್ತ **ಕೇಂದ್ರೀಯ ಪಡೆಗಳ ಬಂದೂಕಗಳ ಟ್ರಿಗರ್‌ಗಳು ವಾಸ್ತವವಾಗಿ ಬಿಜೆಪಿ ಮುಖಂಡರುಗಳ ಕೈಗಳಲ್ಲಿವೆಯೇ** ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಕೇಂದ್ರೀಯ ಪಡೆಗಳನ್ನು ನಡೆಸುವವರು ತಾವೇ ಎಂದು ಬಿಜೆಪಿ ಭಯದ ವಾತಾವರಣವನ್ನು ಸೃಷ್ಟಿಸ ಬಯಸುತ್ತದೆ ಎಂಬುದು ಸ್ಪಷ್ಟ. ಕೇಂದ್ರ ಗೃಹ ಮಂತ್ರಿಗಳು ಚುನಾವಣಾ ಆಯೋಗದಿಂದ ತನಿಖೆಯ ಮೊದಲೇ ಗೋಲೀಬಾರನ್ನು ಸಮರ್ಥಿಸಿಕೊಂಡಿರುವುದು ಕೂಡ ಇದನ್ನೇ ತೋರಿಸುತ್ತದೆ, ಚುನಾವಣಾ ಆಯೋಗದ ಮೌನವಂತೂ ಗಮನಾರ್ಹ ಎನ್ನುವ ಸಂಯುಕ್ತ ಮೋರ್ಚಾದ ಮುಖಂಡರು ಇದೊಂದು ಪಿತೂರಿ ಎಂಬುದು ಸ್ಪಷ್ಟವಾಗಿ ಕಾಣಲಾರಂಭಿಸಿದೆ ಎಂದಿದ್ದಾರೆ.

ಈ ಘಟನೆಯ ಮೊದಲೇ ಇಲ್ಲಿ ಬಿಜೆಪಿ ಮತ್ತು ಟಿಎಂಸಿ ಕೋಮುವಾದಿ ಪ್ರಚಾರವನ್ನು ಆರಂಭಿಸಿದ್ದರು.ಸುಳ್ಳು ಸುದ್ದಿಗಳನ್ನು ಹರಡಲಾಯಿತು, ಗ್ರಾಮಸ್ಥರನ್ನು ಉದ್ರೇಕಿಸಲಾಯಿತು, ಕೇಂದ್ರೀಯ ಪಡೆಗಳು ಅನಗತ್ಯ ಅವಸರದಿಂದ ಕಾರ್ಯಾಚರಣೆ ನಡೆಸಿದವು. ಮತ್ತು ಇವೆಲ್ಲದರ ಪುರಾವೆಗಳನ್ನು ವ್ಯವಸ್ಥಿತವಾಗಿ ನಾಶಪಡಿಸಲಾಗಿದೆ ಎಂದು ಅವರು ಹೇಳುತ್ತಾರೆ.

ಸಿಐಎಸ್‌ಎಫ್ ಗೋಲೀಬಾರಿಗೆ ಏಕೆ ಇಳಿಯಿತು ಎಂಬುದು ಇನ್ನೂ ಅಸ್ಪಷ್ಟವಾಗಿದೆ. ಒಂದು ಜನಜಂಗುಳಿ ತಮ್ಮ ಮೇಲೆ ದಾಳಿ ಮಾಡಿತು ಎಂದು ಅದು ಹೇಳಿಕೊಂಡರೂ ಇದಕ್ಕೆ ಪುರಾವೆಯನ್ನು ಇನ್ನೂ ಪ್ರಕಟಿಸಿಲ್ಲ, ಕೇಂದ್ರೀಯ ಪಡೆಗಳು ಇದ್ದರೂ ಮತಗಟ್ಟೆಯ ಮುಂದೆಯೇ ಜನಗಳನ್ನು ಜಮಾಯಿಸಲು ಬಿಡಲಾಯಿತೇ ಎಂಬಿತ್ಯಾದಿ ಹಲವು ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಬಡವರ ಬಗ್ಗೆ ಕಾಳಜಿಯೇ ಇಲ್ಲ...

ಪುಟ 13 ರಿಂದ

ಸೇರಿಕೊಳ್ಳಲು ಲಕ್ಷಾಂತರ ವಲಸೆ ಕಾರ್ಮಿಕರು ಬೀದಿಗೆ ಬಿದ್ದಿರಬಹುದು, ಅವರಿಗೆ ಯಾವುದೇ ನೆರವೂ ದೊರಕದೇ ಇದ್ದಿರಬಹುದು, ತಮ್ಮ ಹೊಟ್ಟೆ ಪಾಡಿಗಾಗಿ ಗ್ರಾಮೀಣ ಉದ್ಯೋಗ ಯೋಜನೆಯ ಅಡಿಯಲ್ಲಿ ಬೆವರು ಹರಿಸಿ ಮೈ ಮುರಿಯುವ ಕೆಲಸ ಮಾಡುವ ಒತ್ತಾಯಕ್ಕೆ ಒಳಗಾಗಿದ್ದಿರಬಹುದು. ಆದರೆ, ಚುನಾವಣೆ ಬಂತೆನ್ನಿ, ಆಡಳಿತ ಪಕ್ಷವು ಕೋಮು ಧ್ರುವೀಕರಣದ ಮೂಲಕ ಅವರ ಮತಗಳನ್ನು ಬಾಚಿಕೊಳ್ಳಬಹುದು ಎಂದು ಭಾವಿಸುತ್ತದೆ. ಈ ರೀತಿಯ ಚಿಂತನೆಯು ದುಡಿಯುವ ಜನರ ದಿನ ನಿತ್ಯದ ಅಗತ್ಯಗಳಿಗೆ ಸಂಪೂರ್ಣವಾಗಿ ಸ್ಪಂದಿಸದಂತೆ ಮಾಡಿದೆ.

ಮೂರನೆಯ ಸಂಗತಿ ಎಂದರೆ, ಬಹಳ ದೀರ್ಘಕಾಲದಿಂದಲೂ ಭಾರತೀಯ ಸಮಾಜ ವ್ಯವಸ್ಥೆಯ ಒಂದು ಗುಣ ಲಕ್ಷಣವೇ ಆಗಿರುವ ಜಾತಿ–ಪದ್ಧತಿಯಿಂದಾಗಿ ಬಡವರು ಮತ್ತು ದುಡಿಯುವ ಜನರ ಬಗ್ಗೆ ಉಳಿದವರು ತೋರುವ ನಿಷ್ಕಾಳಜಿಯು ಒಂದು ಸಂಪ್ರದಾಯದಂತೆ ಕೆಲಸಮಾಡುತ್ತಿದೆ. ದುಡಿಯುವ ಜನರು ಸಾಧಾರಣವಾಗಿ "ಕೆಳಜಾತಿ"ಗಳಿಗೆ ಸೇರಿದವರೇ ಆಗಿರುತ್ತಾರೆ. ಹಾಗಾಗಿ, "ಕೆಳಜಾತಿ"ಗಳಿಗೆ ತೋರಿಸುವ ಅಸಡ್ಡೆ–ಸಂವೇದನಾಶೂನ್ಯತೆಗಳು ದುಡಿಯುವ ಜನರ ಅಗತ್ಯಗಳನ್ನೂ ಆವರಿಸುತ್ತವೆ.

ಸಮಾಜವಾದದ ಚಿಂತನೆಯು ಬೆಳೆಯುತ್ತಿದ್ದ ಐತಿಹಾಸಿಕ ಸನ್ನಿವೇಶದಲ್ಲಿ ಸಂಭವಿಸಿದ ವಸಾಹತುಶಾಹಿ ವಿರೋಧಿ ಹೋರಾಟವು ಈ ಮನೋಭಾವವನ್ನು ಗಮನಾರ್ಹವಾಗಿ ಜಯಿಸಿತು ಮತ್ತು ಜಾತಿ, ವರ್ಗ, ಧರ್ಮ ಅಥವಾ ಲಿಂಗಭೇದವಿಲ್ಲದೆ ಜನರು ನಾಗರಿಕರಾಗಿ ಸಮಾನ ಹಕ್ಕುಗಳನ್ನು ಅನುಭವಿಸುವಂತಹ ಹೊಸ ಭಾರತದ ಒಂದು ಕಲ್ಪನೆಯನ್ನು ಸೃಷ್ಟಿಸಿತು. ಆದರೆ ಹಿಮ್ಮುಖವಾಗಿ ಸಾಗುವ ಬದಲಾವಣೆ ಸಂಭವಿಸುತ್ತಿರುವ ಸನ್ನಿವೇಶದಲ್ಲಿ, ಹಳೆಯ ಪೂರ್ವಾಗ್ರಹಗಳು ಹಗೆ ತೀರಿಸಿಕೊಳ್ಳುವ ರೀತಿಯಲ್ಲಿ ಮರಳಿವೆ.

ಪ್ರಸಿದ್ಧ ಕೈಗಾರಿಕೋದ್ಯಮಿ ಮತ್ತು ಗಾಂಧೀಜಿಯ ಬೆಂಬಲಿಗ ಜಿ.ಡಿ. ಬಿರ್ಲಾ ಅವರು ಒಮ್ಮೆ ತಮ್ಮ ಕೆಲವು ಸಹ ಕೈಗಾರಿಕೋದ್ಯಮಿಗಳಿಗೆ ಬರೆದ ಒಂದು ಪತ್ರದಲ್ಲಿ ಕೈಗಾರಿಕೋದ್ಯಮಿಗಳು ತಮ್ಮ ಸಂಪತ್ತನ್ನು ಅಷ್ಟೊಂದು ಬಹಿರಂಗವಾಗಿ ಪ್ರದರ್ಶಿಸಿಕೊಳ್ಳಬಾರದು, ಏಕೆಂದರೆ, ಅದು ಸಾರ್ವಜನಿಕ ಅಭಿಪ್ರಾಯವನ್ನು ಅವರ ವಿರುದ್ಧ ತಿರುಗಿಸುತ್ತದೆ ಎಂದು ತಿಳಿಸಿದ್ದರು. ಇದೊಂದು ಗಮನಾರ್ಹವಾದ ಅಂಶವೇ. ಆದರೆ, ಇಂದು ದೇಶದ ಅತ್ಯಂತ ಶ್ರೀಮಂತ ಕೈಗಾರಿಕೋದ್ಯಮಿಯು ಮುಂಬೈ ನಗರದ ಮಧ್ಯಭಾಗದಲ್ಲಿ ಲಕ್ಷಗಟ್ಟಲೆ ಕೋಟಿ ರೂ ಮೌಲ್ಯದ 27 ಅಂತಸ್ತಿನ ವೈಭವೋಪೇತ ಬೃಹತ್ ಭವನವನ್ನು ಹೊಂದುವ ಮೂಲಕ ತನ್ನ ಸಂಪತ್ತನ್ನು ಪ್ರದರ್ಶಿಸುತ್ತಾರೆ. ಅವರ ಈ ಆಡಂಬರದ ಜೀವನ ಶೈಲಿಯನ್ನು ಟೀಕಿಸುವ ಬದಲು, ಅವರನ್ನು ಗೌರವಾನ್ವಿತ "ಸಂಪತ್ತು–ಸೃಷ್ಟಿಕರ್ತ" ಎಂದು ಮೋದಿ ಶ್ಲಾಘಿಸುತ್ತಾರೆ! ಇದು ಸನ್ನಿವೇಶದಲ್ಲಿ ಆಗಿರುವ ಬದಲಾವಣೆಯ ಚಾರಿತ್ರಿಕ ಸಂಕೇತ.

ರಾಷ್ಟ್ರೀಯ ಹೋರಾಟದ ಅಂತಿಮ ಹಂತ ಮತ್ತು ಭಾರತದ ಕಾರ್ಮಿಕ ವರ್ಗ

ಪುಟ 11 ರಿಂದ

ಪಂಜಾಬ್, ಸಿಂಧ್ ಮತ್ತು ಬಂಗಾಳವನ್ನು ಹೊರತುಪಡಿಸಿ ಪ್ರಾಂತೀಯ ಮಂತ್ರಿಮಂಡಲಗಳನ್ನು ರಚಿಸಿತು. ಕಾಂಗ್ರೆಸ್ ಮಂತ್ರಿಮಂಡಲಗಳು 1937 ರಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ಮಾಡಿದಂತೆಯೇ ಕಾರ್ಮಿಕ ವಿರೋಧಿ ಮನೋಭಾವವನ್ನು ತೋರಿಸಿದವು.

ಮುಂಬೈಯ ಕಾಂಗ್ರೆಸ್ ಮಂತ್ರಿಮಂಡಲವು ಅಂಗೀಕರಿಸಿದ ಕೈಗಾರಿಕಾ ಸಂಬಂಧ ಕಾಯ್ದೆ 1946,. ಅದರ ಪ್ರಜಾಪ್ರಭುತ್ವ ವಿರೋಧಿ ಮತ್ತು ಕಾರ್ಮಿಕ ವಿರೋಧಿ ಮನೋಭಾವವನ್ನು ಬಹಿರಂಗಪಡಿಸಿತು. ಈ ಕಾಯಿದೆಯು ಕಾರ್ಮಿಕರ ಹೋರಾಟಗಳನ್ನು ಮಧ್ಯಸ್ಥಿಕೆ ವ್ಯವಸ್ಥೆಗಳಿಗೆ ಹೆಚ್ಚು ಬಿಗಿಯಾಗಿ ಜೋಡಿಸುವ ಮೂಲಕ ಮುರಿಯಲು ವಿನ್ಯಾಸಗೊಳಿಸಲಾಗಿತ್ತು. ಅದೇ ಸಮಯದಲ್ಲಿ, ಸಂಘಗಳ ಮಾನ್ಯತೆಗಾಗಿ ಈ ಕಾಯಿದೆಯು ರೂಪಿಸಿದ ಕಾರ್ಯವಿಧಾನವು ಕಟುವಾದ ಅಧಿಕಾರಶಾಹಿ ದೃಷ್ಟಿಕೋನದ ಅಭಿವ್ಯಕ್ತಿಯಾಗಿತ್ತು. ರಹಸ್ಯ ಮತದಾನದ ಮೂಲಕ ನಿರ್ಣಯಿಸುವ ಪ್ರಜಾಪ್ರಭುತ್ವದ ತತ್ವವನ್ನು ಜಾರಿಗೊಳಿಸುವ ಬದಲು, ಈ ಕಾಯ್ದೆಯು ಸದಸ್ಯತ್ವ ನೋಂದಣಿಯನ್ನು ಸಂಘಗಳ ಪ್ರತಿನಿಧಿ ಪಾತ್ರವನ್ನು ನಿರ್ಧರಿಸುವ ಮಾನದಂಡವಾಗಿ ಗುರುತಿಸಿತು. ಆದ್ದರಿಂದ ಭಾರತದ ಟ್ರೇಡ್ ಯೂನಿಯನ್ ಆಂದೋಲನವು ಈ ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಯ ವಿರುದ್ಧ ಜೋರಾಗಿ ಧ್ವನಿಯೆತ್ತ ಬೇಕಾಯಿತು.

ಆದರೆ ಏತನ್ಮಧ್ಯೆ, ಭಾರತದ ರಾಜಕೀಯ ರಂಗದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಂತರ ಕಮ್ಯುನಿಸ್ಟ್ ಪಕ್ಷವು ಮೂರನೇ ಅತಿದೊಡ್ಡ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿತು. 1946 ರಲ್ಲಿ ಪ್ರಾಂತೀಯ ವಿಧಾನಸಭೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಚಲಾವಣೆ ಮಾಡಿದ 321,607 ಮತಗಳ ವಿರುದ್ಧ ಕಮ್ಯುನಿಸ್ಟರು 112,736 ಕಾರ್ಮಿಕರ ಮತಗಳನ್ನು ಗಳಿಸಿದರು.

ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನಾಯಕತ್ವದ ಯಾವುದೇ ವಿಳಂಬವು ಅವರ ವರ್ಗ ಸ್ಥಾನಕ್ಕೆ ಲೆಕ್ಕಹಾಕಲಾಗದ ಹಾನಿಯನ್ನುಂಟು ಮಾಡುತ್ತದೆಯೆಂದು ಮತ್ತು ಆದ್ದರಿಂದ ಅವರು ತಮ್ಮದೇ ಆದ ರಾಜಕೀಯ ಮತ್ತು ಸೈದ್ಧಾಂತಿಕ ನಿಯಂತ್ರಣದಲ್ಲಿ ಕಟ್ಟುನಿಟ್ಟಾಗಿ ಪ್ರತ್ಯೇಕ ಕಾರ್ಮಿಕ ಸಂಘಟನೆಯನ್ನು ರಚಿಸಲು ನಿರ್ಧರಿಸಿದರು.

ಆ ನಿರ್ಧಾರವನ್ನು ಅನುಷ್ಠಾನಗೊಳಿಸುವ ಸಲುವಾಗಿ ಕಾಂಗ್ರೆಸ್ ಮಜ್ದೂರ್ ಸೇವಕ ಸಂಘವು 1947 ರ ಮೇ 3–4 ರಂದು ದೆಹಲಿಯಲ್ಲಿ ಸಮಾವೇಶವನ್ನು ಕರೆಯಿತು. ಟ್ರೇಡ್ ಯೂನಿಯನ್‌ಗಳಲ್ಲಿ ಕೆಲಸ ಮಾಡುವ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಹಿಂದೂಸ್ಥಾನ್ ಮಜ್ದೂರ್ ಸೇವಕ ಸಂಘದ ಅಧ್ಯಕ್ಷ ವಲ್ಲಭಭಾಯಿ ಪಟೇಲ್ ಅಧ್ಯಕ್ಷತೆ ವಹಿಸಿದ್ದರು ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಆಗಿನ ಅಧ್ಯಕ್ಷರಾಗಿದ್ದ ಜೆ. ಬಿ. ಕೃಪಲಾನಿ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಕಾಂಗ್ರೆಸ್ಸಿನ ಪ್ರಮುಖ ಟ್ರೇಡ್ ಯೂನಿಯನ್ ನಾಯಕರಾದ ಡಾ.ಸುರೇಶ್ ಚಂದ್ರ ಬ್ಯಾನರ್ಜಿ, ಗುಲ್ಜಾರಿ ಲಾಲ್ ನಂದಾ, ಖಂಡುಭಾಯ್ ದೇಸಾಯಿ, ಅಬಿದ್ ಅಲಿ ಜಾಫರಬಾಯಿ, ಹರಿಹರನಾಥ ಶಾಸ್ತ್ರಿ, ಶಿಬ್ನಾಥ್ ಬ್ಯಾನರ್ಜಿ, ಆರ್. ಎ. ಖಾಡಿಲ್ಕರ್ ಮುಂತಾದವರು ಸಮ್ಮೇಳನದ ನಡಾವಳಿಯಲ್ಲಿ ಭಾಗವಹಿಸಿದರು. ಜವಾಹರಲಾಲ್ ನೆಹರು. ಜಗಜೀವನ್ ರಾಮ್ ಮತ್ತು ಪ್ರಾಂತೀಯ ಮಂತ್ರಿಮಂಡಲಗಳ ಹಲವಾರು ಸದಸ್ಯರು ಹಾಜರಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಂಕರರಾವ್ ದೇವ ಮತ್ತು ಕಾಂಗ್ರೆಸ್–ಸಮಾಜವಾದಿ ನಾಯಕರಾದ ಡಾ. ರಾಮ್ ಮನೋಹರ್ ಲೋಹಿಯಾ, ಅಶೋಕ್ ಮೆಹ್ತಾ ಮತ್ತು ಅರುಣಾ ಅಸಫ್ ಅಲಿಯವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಪ್ರತ್ಯೇಕ ಸಂಘಟನೆಯೊಂದನ್ನು ರಚಿಸುವುದನ್ನು ಸಮರ್ಥಿಸಿಕೊಳ್ಳುತ್ತಾ ಮತ್ತು ಅದನ್ನು ಸಾಕಷ್ಟು ಮೊದಲೇ ರಚಿಸಬೇಕಾಗಿತ್ತು ಎಂದು ವಲ್ಲಭಭಾಯ್ ಪಟೇಲ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು. ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್(ಐ.ಎನ್.ಟಿ.ಯು.ಸಿ.) ಅನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ ನ ಕಾರ್ಮಿಕ ವಿಭಾಗವಾಗಿ ಸ್ಥಾಪಿಸಲಾಯಿತು. ಸಮ್ಮೇಳನವು ಅಧ್ಯಕ್ಷರಾಗಿ ಡಾ.ಸುರೇಶ್ ಚಂದ್ರ ಬ್ಯಾನರ್ಜಿ, ಕಾರ್ಯದರ್ಶಿಯಾಗಿ ಖಂಡುಭಾಯ್ ದೇಸಾಯಿ ಮತ್ತು ಹೆಚ್ಚುವರಿ ಸದಸ್ಯರನ್ನು ಕೊ–ಆಪ್ಟ್ ಮಾಡುವ ಅಧಿಕಾರ ಹೊಂದಿರುವ 19 ಸದಸ್ಯರ ತಾತ್ಕಾಲಿಕ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಗಾಂಧೀಜಿ ಸ್ಥಾಪಿಸಿದ ಅಹಮದಾಬಾದ್ ಜವಳಿ ಕಾರ್ಮಿಕ ಸಂಘವು ಕೇಂದ್ರ ಟ್ರೇಡ್ ಯೂನಿಯನ್ ಸಂಘಗಳಿಂದ ದೂರವಿತ್ತು, ಈಗ ಹೊಸದಾಗಿ ಸ್ಥಾಪನೆಯಾದ ಈ ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ನ ಮುಖ್ಯ ಘಟಕವಾಗಿ ಸೇರಿಕೊಂಡಿತು.

ಹೀಗೆ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳ ಶಕ್ತಿ ಮತ್ತು ಸಂಪನ್ಮೂಲಗಳ ಬೆಂಬಲದೊಂದಿಗೆ ಮತ್ತು ಮಾಲಿಕರ ಸಂಪೂರ್ಣ ಸಹಕಾರ ಮತ್ತು ಆಶೀರ್ವಾದದೊಂದಿಗೆ ಕಾಂಗ್ರೆಸ್ ಪ್ರತಿಷ್ಠೆಯನ್ನು ಬಳಸಿಕೊಳ್ಳುತ್ತಾ, ಐ.ಎನ್.ಟಿ.ಯು.ಸಿ. ಭಾರತದ ಕಾರ್ಮಿಕ ರಂಗದಲ್ಲಿ, ಎ.ಐ.ಟಿ.ಯು.ಸಿ.ಗೆ ಸೈದ್ಧಾಂತಿಕ ಪ್ರತಿಸ್ಪರ್ಧಿಯಾಗಿ ಕಾಣಿಸಿಕೊಂಡಿತು. ಐ.ಎನ್.ಟಿ.ಯು.ಸಿ.ಯ ಪ್ರಾರಂಭದೊಂದಿಗೆ, ವರ್ಗ–ಸಂಘರ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿ ವರ್ಗ–ಸಹಯೋಗಿ ಸಿದ್ಧಾಂತದ, ಭಾರತದ ಕಾರ್ಮಿಕ ಇತಿಹಾಸದಲ್ಲಿ ದೂರದೃಷ್ಟಿಯ ಪರಿಣಾಮಗಳನ್ನು ಹೊಂದಿರುವ ಹೊಸ ಅಧ್ಯಾಯ ಸಾಕಾರವಾಯಿತು.

ರಾಜಕೀಯ ಸನ್ನಿವೇಶದಲ್ಲಿ ವೇಗವಾಗಿ ಬದಲಾವಣೆಗಳು

ರಾಜಕೀಯ ರಂಗದಲ್ಲಿ ವೇಗವಾಗಿ ಬದಲಾವಣೆಗಳು ನಡೆಯುತ್ತಿದ್ದವು. ಕಾಂಗ್ರೆಸ್ ಒಪ್ಪಿಗೆಯಿಲ್ಲದಿದ್ದರೂ, ಮುಷ್ಕರಗಳು, ಹರತಾಳಗಳು ಮತ್ತು ದೇಶವ್ಯಾಪಿ ಸಾಮೂಹಿಕ ಉತ್ಕ್ರಾಂತಿಯು ತಡೆಯಲಾಗದೆ ಮುಂದುವರೆದವು ಮತ್ತು ಚಾಣಾಕ್ಷ ಬ್ರಿಟಿಷ್ ಸರ್ಕಾರವು ಅದರ ಆಧಾರವಾಗಿರುವ ಗಂಭೀರ ಅಪಾಯದ ಸಂಕೇತಗಳನ್ನು ಗ್ರಹಿಸುವಲ್ಲಿ ವಿಫಲವಾಗಲಿಲ್ಲ. ಬ್ರಿಟಿಷ್ ಸರ್ಕಾರ, ಮಾರ್ಚ್ 1946ರಲ್ಲಿ ಅಧಿಕಾರ ವರ್ಗಾವಣೆಯ ವಿವರಗಳನ್ನು ರೂಪಿಸಲು ಭಾರತಕ್ಕೆ ಕ್ಯಾಬಿನೆಟ್ ಮಿಷನ್ ಕಳುಹಿಸಿತು. ಕ್ಯಾಬಿನೆಟ್ ಮಿಷನ್, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ದೀರ್ಘಕಾಲದ ಚರ್ಚೆಗಳು ನಡೆದವು, ಇದರ ಪರಿಣಾಮವಾಗಿ ಆ ವರ್ಷದ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಮಧ್ಯಂತರ ಸರ್ಕಾರವನ್ನು ರಚಿಸಲಾಯಿತು. ಜವಾಹರಲಾಲ್ ನೆಹರು ಮಂತ್ರಿಮಂಡಲದ ಮುಖ್ಯಸ್ಥರಾಗಿದ್ದರು, ನಂತರ ಅಕ್ಟೋಬರ್ ತಿಂಗಳಲ್ಲಿ ಮುಸ್ಲಿಂ ಲೀಗ್ ಕೂಡ ಸೇರಿಕೊಂಡಿತು. ಅದರಂತೆ ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್ ಅವರನ್ನು ಅಧಿಕಾರ ವರ್ಗಾವಣೆಗೆ ವ್ಯವಸ್ಥೆ ಮಾಡಲು ವೈಸ್ರಾಯ್ ಆಗಿ ಭಾರತಕ್ಕೆ ಕಳುಹಿಸಲಾಯಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಗಂಭೀರ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು, ಆದರೆ ಮೌಂಟ್‌ಬ್ಯಾಟನ್ ಚಾಕಚಕ್ಯತೆಯಿಂದ ರಾಜಿ ಯೋಜನೆಯನ್ನು ರೂಪಿಸಿದರು, ಅದನ್ನು ಎರಡೂ ಪಕ್ಷಗಳು ಒಪ್ಪಿಕೊಂಡವು. ಭಾರತವನ್ನು ವಿಭಜಿಸಲಾಯಿತು ಮತ್ತು ಆಗಸ್ಟ್ 15, 1947 ರಂದು ಭಾರತ ವಿಮೋಚನೆಯಾಯಿತು. ಬ್ರಿಟಿಷ್ ಸರ್ಕಾರವು ಉಪಖಂಡದ ವಿಭಜಿತ ಭಾರತ ಮತ್ತು ಪಾಕಿಸ್ತಾನಗಳ ಬಂಡವಾಳಶಾಹಿ–ಭೂಮಾಲೀಕ ವರ್ಗಗಳಿಗೆ ಅಧಿಕಾರವನ್ನು ವರ್ಗಾಯಿಸಿತು.

ಭಾರತದ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಹಿನ್ನೆಲೆಯಲ್ಲಿ ಪ್ರಾರಂಭವಾದ ಕಾರ್ಮಿಕ ವರ್ಗದ ಹೋರಾಟವು ಮೂಲತಃ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಹೊಸ ಉದ್ದೇಶದೊಂದಿಗಿನ ಹೋರಾಟವಾಗಿ ಪರಿವರ್ತನೆಗೊಂಡಿತು. ಭಾರತದಲ್ಲಿ ಸಾಮ್ರಾಜ್ಯಶಾಹಿ ಸರ್ಕಾರವು, ರಾಜಕೀಯವಾಗಿ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಾಕಾರಗೊಂಡ. ಭಾರತದ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗಗಳ ಸರ್ಕಾರವಾಗಿ ಬದಲಾಯಿತು.

ಬ್ರಿಟಿಷರಿಂದ ಅಧಿಕಾರ ವಹಿಸಿಕೊಳ್ಳುವ ಮೊದಲು, ಕಾರ್ಮಿಕ ವರ್ಗವನ್ನು ವಿಭಜಿಸುವಲ್ಲಿ ಮತ್ತು ತಮ್ಮದೇ ಆದ ಕಾರ್ಮಿಕ ವಿಭಾಗವನ್ನು ರೂಪಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಯಿತು. ಆದರೂ. ಸ್ವಾತಂತ್ರ್ಯವು ಮೂಡಿಬರುತ್ತಿದ್ದಂತೆ, ಭಾರತದ ಕಾರ್ಮಿಕ–ವರ್ಗ ಒಟ್ಟಾರೆಯಾಗಿ ದಶಕಗಳ ಕಠಿಣ ಆರ್ಥಿಕ ಮತ್ತು ರಾಜಕೀಯ ಹೋರಾಟಗಳ ಮೂಲಕ, ಸಂಘಟಿತ ಮತ್ತು ವರ್ಗ–ಪ್ರಜ್ಞೆಯ ಸಾಮಾಜಿಕ ಶಕ್ತಿಯಾಗಿ ಗಟ್ಟಿಯಾದ ಕ್ರಾಂತಿಕಾರಿ ಹೋರಾಟಗಳಿಗೆ ಸಜ್ಜಾಗಿ ಎದ್ದು ನಿಂತಿತು.

ಭಾರತದ ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಭಾರತದ ಕಾರ್ಮಿಕ ವರ್ಗವು ನಿರ್ವಹಿಸಿದ ಅದ್ಭುತ ಪಾತ್ರ, ಯಾವಾಗಲೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಭಾರತದ ಜನಸಾಮಾನ್ಯರು ನಡೆಸಿದ ಹೋರಾಟದ ಇತಿಹಾಸದ ಅದ್ಭುತ ಮತ್ತು ಪ್ರಕಾಶಮಾನವಾದ ಅಧ್ಯಾಯವಾಗಿ ನೆನಪಿನಲ್ಲಿ ಉಳಿಯುತ್ತದೆ.

ಕಾರ್ಮಿಕ ಹಕ್ಕುಗಳಿಂದ ವಂಚಿತ ಅಂತರ-ರಾಜ್ಯ ವಲಸೆ ಕಾರ್ಮಿಕರು.....

ಪುಟ 8 ರಿಂದ

ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳ ರಕ್ಷಣೆ ಇರುವುದಿಲ್ಲ ಎಂದು ಅರ್ಥ.

2. OSH ಸಂಹಿತೆಯು ವಲಸೆ ಕಾರ್ಮಿಕರ ಕಾಯಿದೆಯ ಕೆಳಕಾಣಿಸಿದ ಪರಿಷ್ಕೃತ ಮತ್ತು ದುರ್ಬಲಗೊಳಿಸಿದ ಉಪಸಂಬಂಧಗಳನ್ನು ಹೊಂದಿದೆ.

* ವಲಸೆ ಕಾರ್ಮಿಕರಿಗೆ ಅಸ್ಪಷ್ಟ 'ಸೂಕ್ತ ಕೆಲಸದ ವಾತಾವರಣ';
* ಉಳಿದ ಕಾರ್ಮಿಕರಿಗೆ ಅನ್ವಯಿಸುವ ವೇತನ – ಸಂಬಂಧಿ ಮತ್ತು ಇತರ ಸೌಲಭ್ಯಗಳು;
* ಸ್ವಂತ ಊರಿಗೆ ಹೋಗಲು ಮತ್ತು ಮರಳಲು ಒಂದು ಮೊತ್ತ ಮಾತ್ರ ನೀಡುವುದು.

3. ಜೊತೆಗೆ OSH ಸಂಹಿತೆಯು ಯಾವ ರಾಜ್ಯದಲ್ಲಿಯಾದರೂ ವಲಸೆ ಕಾರ್ಮಿಕರಿಗೆ ಪಡಿತರ ವಿತರಣಾ ವ್ಯವಸ್ಥೆ ಒದಗಿಸುತ್ತದೆ; ಇವರಿಗೆ ಉಚಿತ ಸಹಾಯವಾಣಿ ಹಾಗೂ ಓದಲು ವ್ಯವಸ್ಥೆ ಮಾಡಿಕೊಡುತ್ತದೆ.

ಮೋದಿ ಸರ್ಕಾರವು ಲಾಕ್‌ಡೌನ್ ನಂತರ ವಲಸೆ ಕಾರ್ಮಿಕರು ಅನುಭವಿಸಿದ ಸಂಕಷ್ಟಗಳಿಗೆ ಈಗ ತಾನು ಸ್ಪಂದಿಸುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿದೆ ಮತ್ತು ಅದಕ್ಕೆ ತಕ್ಕಂತೆ ನೀತಿ ಆಯೋಗವು ವಲಸೆ ಕಾರ್ಮಿಕರ ರಾಷ್ಟ್ರೀಯ ನೀತಿಯ ಕರಡನ್ನು ತಯಾರಿಸಿದೆ. ಈ ಡಾಕ್ಯುಮೆಂಟ್ ನಾಲ್ಕು ವಿಭಾಗಗಳನ್ನು ಆದ್ಯತೆಯ ವಿಷಯಗಳಾಗಿ ಗುರುತಿಸಿದೆ; (ಎ) ರಾಜಕೀಯ ಒಳಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು; (ಬಿ) ಅಂತರರಾಜ್ಯ ಸಂವಹನ ವ್ಯವಸ್ಥೆಯ ಸ್ಥಾಪನೆ; (ಸಿ) ಪ್ರತಿಯೊಂದು ರಾಜ್ಯದ ಕಾರ್ಮಿಕ ಇಲಾಖೆಗಳಲ್ಲಿ ಒಂದು 'ವಲಸೆ ವಿಭಾಗ' ಸ್ಥಾಪನೆ; (ಡಿ) ಮೂಲ ರಾಜ್ಯ ಮತ್ತು ತಲುಪುದಾಣ ರಾಜ್ಯಗಳು ಪರಸ್ಪರ ಸಹಕರಿಸಿಕೊಳ್ಳುವುದು.

ಆದರೆ, ವಾಸ್ತವವಾಗಿ ಕೇವಲ ಎರಡು ವಿಭಾಗಗಳು ಮಾತ್ರ ಇವೆ. ಮೊದಲನೆಯದು ವಲಸೆ ಕಾರ್ಮಿಕರ 'ರಾಜಕೀಯ ಒಳಗೊಳ್ಳುವಿಕೆ' ಮತ್ತು ಇನ್ನೊಂದು ಅಂತರ-ಸರ್ಕಾರೀ ಸಮನ್ವಯತೆ. ಈ ಕರಡು ಡಾಕ್ಯುಮೆಂಟ್‌ನಲ್ಲಿ ಎಲ್ಲಿಯೂ ಕೂಡಾ ವಲಸೆ ಕಾರ್ಮಿಕರ ಕಾರ್ಮಿಕ ಹಕ್ಕುಗಳು ಮತ್ತು ಔದ್ಯಮಿಕ ಸಂಬಂಧಿ ವಿಷಯಗಳನ್ನು ಪ್ರಸ್ತಾಪಿಸಿಲ್ಲ.

ವೋಟ್ ಬ್ಯಾಂಕ್‌ಗಳಾಗಿ ವಲಸೆ ಕಾರ್ಮಿಕರನ್ನು ಕಾಣುತ್ತಿರುವ ಬಿಜೆಪಿ

ಸರ್ಕಾರದ ಒಟ್ಟಾರೆ ಪ್ರಯತ್ನವು 'ರಾಜಕೀಯ ಒಳಗೊಳ್ಳುವಿಕೆಯನ್ನೂ ಖಚಿತಪಡಿಸಿಕೊಳ್ಳುವುದೇ ಆಗಿರುವ ಹಾಗೆ ಕಾಣುತ್ತಿದೆ. ಮತ ಚಲಾವಣೆ ಬಿಟ್ಟರೆ ವಲಸೆ ಕಾರ್ಮಿಕರಿಗಾಗಲೀ ಅಥವಾ ಇನ್ಯಾವುದೇ ಕಾರ್ಮಿಕ ವಿಭಾಗಕ್ಕಾಗಲೀ ಇನ್ಯಾವುದೇ ರೀತಿಯ ರಾಜಕೀಯ ಒಳಗೊಳ್ಳುವಿಕೆ ಇಲ್ಲ. ಹೀಗಾಗಿ, ಈ ಕರಡು ಡಾಕ್ಯುಮೆಂಟ್ ಹೇಳುವುದು ಹೇಗೆ-"ಮತ ಚಲಾವಣೆ" ಮಾಡಲು ಒಂದು ಕಾರ್ಯವಿಧಾನ ಸ್ಥಾಪಿಸುವುದು ಮತ್ತು ಈ ರಾಜಕೀಯ ಒಳಗೊಳ್ಳುವಿಕೆಯು "ಆಯಾ ರಾಜ್ಯಗಳ ವಲಸೆ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜಕೀಯ ನಾಯಕತ್ವಕ್ಕೆ ಒಂದು ಹೊಣೆಗಾರಿಕೆ ಹೆಚ್ಚಿಸುತ್ತದೆ".

2011 ರ ಗಣತಿಯ ಪ್ರಕಾರ ಭಾರತದಲ್ಲಿರುವ ಒಟ್ಟು ಆಂತರಿಕ ವಲಸೆಗಾರರ (ಅಂತರ ರಾಜ್ಯ ಮತ್ತು ರಾಜ್ಯದ ಒಳಗಡೆಯವರು ಸೇರಿದಂತೆ) ಸಂಖ್ಯೆ 45.36 ಕೋಟಿ ಅಥವಾ ದೇಶದ ಜನ ಸಂಖ್ಯೆಯ ಶೇ. 37 ಭಾಗ; 2016 ರ ಆರ್ಥಿಕ ಸಮೀಕ್ಷೆಯ ಒಟ್ಟು ಕಾರ್ಮಿಕರ ಸಂಖ್ಯೆ 48.2 ಕೋಟಿ ಇದ್ದು, ಅದರಲ್ಲಿ ಶೇ. 20 ಬಾಗ ಅಥವಾ 10 ಕೋಟಿಯಷ್ಟು ವಲಸೆ ಕಾರ್ಮಿಕರು ಎಂದು ಹೇಳಿದೆ.

NSSO ಸಮೀಕ್ಷೆಗಳುಮತ್ತು ಆರ್ಥಿಕ ಸಮೀಕ್ಷೆಯು ಭಾರತದಲ್ಲಿ ಒಟ್ಟು 6.5 ಕೋಟಿ ಅಂತರ ರಾಜ್ಯ ವಲಸಿಗರಿದ್ದು, ಅದರಲ್ಲಿ ಶೇ. 33 ಪ್ರಮಾಣದವರು ಕಾರ್ಮಿಕರು ಎಂದು ತಿಳಿಸುತ್ತಿದೆ. ಕಾರ್ಮಿಕರ ಅಂಕಿ-ಅಂಶಗಳೊಳಗೆ ಸೇರ್ಪಡೆಯಾಗದ ಬೀದಿ ಬದಿ ವ್ಯಾಪಾರಿಗಳನ್ನು ಸೇರಿಸಿಕೊಂಡರೆ. ಒಟ್ಟು ವಲಸೆ ಕಾರ್ಮಿಕರ ಸಂಖ್ಯೆ ಸುಮಾರು 1.2 ರಿಂದ 1.8 ಕೋಟಿ ಆಗಬಹುದು.

ಪ್ರೊ. ಅಮಿತಾಬ್ ಕುಂಡು ರವರ ಅಂದಾಜಿನ ಪ್ರಕಾರ ನಾಲ್ಕು ರಾಜ್ಯಗಳಿಂದ ಬಂದವರು ದೇಶದ ಒಟ್ಟು ವಲಸೆ ಕಾರ್ಮಿಕರ ಶೇ. 50 ಪ್ರಮಾಣದಷ್ಟಿದ್ದಾರೆ. ಉತ್ತರ ಪ್ರದೇಶ (ಶೇ.25), ಬಿಹಾರ-(ಶೇ.14), ರಾಜಸ್ಥಾನ-(ಶೇ.6) ಮತ್ತು ಮಧ್ಯಪ್ರದೇಶ (ಶೇ.5).

ಈ ಅಗಾಧ ಪ್ರಮಾಣದ ವಲಸಿಗರನ್ನು ಭಾವಿ ವೋಟ್ ಬ್ಯಾಂಕ್‌ಗಳಾಗಿ RSS-ಬಿಜೆಪಿ ನೋಡುತ್ತಿದೆ. ಹೀಗಾಗಿಯೇ, ಇವರುಗಳಿಗೆ ಮತ ಚಲಾಯಿಸುವ ಅವಕಾಶ ನೀಡುವ ಸಲುವಾಗಿ ನೀತಿ ಆಯೋಗದ ಕರಡು ರಾಷ್ಟ್ರೀಯ ನೀತಿ ತಯಾರಿಸಿರುವುದು.

ಅನ್‌ಲೈನ್ ಮತ ಚಲಾವಣೆಗೆ ಒತ್ತು

2019 ರ ಲೋಕಸಬಾ ಚುನಾವಣೆಯಲ್ಲಿ ಅನಿವಾಸಿ ಭಾರತೀಯರಿಗೆ ಆನ್‌ಲೈನ್ ಮತ ಚಲಾವಣೆ ಸಿದ್ಧತೆಯ ಬಗ್ಗೆ – ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಎಲೆಕ್ಟ್ರಾನಿಕ್ ಮತ ಚಲಾವಣೆ ಅವಕಾಶ ಇಲ್ಲದಿದ್ದರೂ-ಬಹಳವಾಗಿ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ನಡೆಯುತ್ತಿರುವುದರ ಬಗ್ಗೆ "ದಿ ಹಿಂದು" ಪತ್ರಿಕೆ ಮಾರ್ಚ್ 13, 2019 ರಂದು ವರದಿ ಮಾಡಿತ್ತು. ಈ ವರದಿಯ ಆಧಾರದ ಮೇಲೆ ಭಾರತದ ಚುನಾವಣಾ ಆಯೋಗವು ಸಾರ್ವಜನಿಕ ಸ್ಪಷ್ಟೀಕರಣ ನೀಡಬೇಕಾಯಿತು ಮತ್ತು "ಸುಳ್ಳು ಸುದ್ದಿ" ಹರಡುತ್ತಿರುವವರನ್ನು ಹಿಡಿಯುವಂತೆ ದೆಹಲಿ ಪೊಲೀಸ್‌ಗೆ ದೂರು ನೀಡಿತ್ತು.

ಇದೇ ಚುನಾವಣಾ ಆಯೋಗವು ನವೆಂಬರ್ 27, 2020 ರಂದು ಕೇಂದ್ರ ಕಾನೂನು ಸಚಿವಾಲಯಕ್ಕೆ ಪತ್ರವನ್ನು ಬರೆದು ಅನಿವಾಸಿ ಭಾರತೀಯರಿಗೆ 'ವಿದ್ಯುನ್ಮಾನ ಚಾಲಿತ ಅಂಚೆ ಬ್ಯಾಲೆಟ್ ವಿಧಾನ (ETBPS)"ದ ಮೂಲಕ ಮತ ಚಲಾಯಿಸಲು ಅನುವಾಗುವಂತೆ Conduct of Elections Rules, 1961ಗೆ ಸೂಕ್ತ ತಿದ್ದುಪಡಿ ತರುವಂತೆ ಸೂಚಿಸಿದೆ ಮತ್ತು ಮುಂದುವರೆದು ಚುನಾವಣಾ ಆಯೋಗವು "ಅಸ್ಸಾಂ, ಪ. ಬಂಗಾಳ, ಕೇರಳ, ತಮಿಳುನಾಡು ಮತ್ತು ಪುದುಚೆರಿ ವಿಧಾನಸಭಾ ಚುನಾವಣೆಗಳಲ್ಲಿ ಈ ಸೌಲಭ್ಯವನ್ನು ನೀಡಲು ತಾಂತ್ರಿಕವಾಗಿ ಮತ್ತು ಆಡಳಿತಾತ್ಮಕವಾಗಿ ಸಿದ್ಧವಿದೆ" ಎಂದು ಹೇಳಿದೆ. (ವರದಿ: ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ, ಡಿಸೆಂಬರ್ 2, 2020).

ಸಿಪಿಐ(ಎಂ) ಪಕ್ಷವು ಡಿಸೆಂಬರ್ 4, 2020 ರಂದು ಭಾರತೀಯ ಚುನಾವಣಾ ಆಯೋಗಕ್ಕೆ ಪತ್ರ ಬರೆದು ಈ ಏಕ ಪಕ್ಷೀಯ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿತು ಮತ್ತು ಸ್ವಾತಂತ್ರ್ಯ ಪಡೆದ ದಿನದಿಂದ ಇರುವ ರೀತಿಯಲ್ಲಿ ಮತ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ತರುವ ಮೊದಲು ಸರ್ವ ಪಕ್ಷಗಳ ಸಭೆ ಕರೆಯುವಂತೆ ಆಗ್ರಹಿಸಿತು. ಚುನಾವಣಾ ಆಯೋಗದ ಈ ETBPS ಪ್ರಸ್ತಾಪದ ಸಂಕೇತ ಪಡೆದ ಆಳುವ ಸರ್ಕಾರವು ದೇಶದೊಳಗಿರುವ ಅಪಾರ ಸಂಖ್ಯೆಯ ವಲಸಿಗರನ್ನು ಕೇಂದ್ರೀಕರಿಸಿಕೊಂಡು ಅವರಿಗೂ ಇದೇ ತರಹದ ಮತ ವ್ಯವಸ್ಥೆ ನೀಡಲು ಮುಂದಾಗಿದೆ. ಹೀಗಾಗಿಯೇ, ವಲಸೆ ಕಾರ್ಮಿಕರ ರಾಷ್ಟ್ರೀಯ ನೀತಿಯ ಕರಡು ರಚನೆಯಾಗಿರುವುದು.

ನೀತಿ ಆಯೋಗದ ಕಾರ್ಯಕಾರಿ ಪಡೆಯು ವಲಸೆ ಕಾರ್ಮಿಕರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಾ ರಾಜ್ಯ ಸರ್ಕಾರಗಳು ವಲಸೆ ಕಾರ್ಮಿಕರ ಕಾಯಿದೆಯನ್ನು ಕಾಯಿದೆಯ ಆಶಯಗಳಿಗೆ ತಕ್ಕಂತೆ ಜಾರಿ ಮಾಡಲಿಲ್ಲ; ಇರುವ ಸ್ಥಳೀಯ ವೇತನಕ್ಕಿಂತಲೂ ಅತ್ಯಂತ ಕಡಿಮೆ ವೇತನ ಪಡೆಯುವ ಮೂಲಕ ವಲಸೆ ಕಾರ್ಮಿಕರು ಸಂಕಷ್ಟ ಸ್ಥಿತಿಯಲ್ಲಿದ್ದಾರೆ; ಕಾರ್ಮಿಕ ಇಲಾಖೆಯ ಸ್ಥಾಪಿತ ಹಿತಾಸಕ್ತಿಗಳು ಮುಖ್ಯ ಮಾಲೀಕರು/ಗುತ್ತಿಗೆದಾರರೊಡನೆ ಶಾಮೀಲಾಗುವ ಮೂಲಕ ಕಾಯಿದೆಯ ಜಾರಿಗೆ ಅಡ್ಡಿಯಾಗಿದ್ದಾರೆ ಎಂದು ಹೇಳಿದೆ.

"ವಲಸೆ ಕಾರ್ಮಿಕರನ್ನು ಸಂಘಟಿಸುವಲ್ಲಿ ಈಗಿರುವ ಅಂತರವೂ ಸಹ ಇವರ ಉದ್ಯೋಗದ ಸಂಕಷ್ಟ ಸ್ಥಿತಿಗೆ ಕಾರಣ" ಎಂದು ಈ ಕರಡು ಡಾಕ್ಯುಮೆಂಟ್ ಹೇಳುತ್ತದೆ. ಆದರೆ ವಲಸೆ ಕಾರ್ಮಿಕರ ಸಂಘಟಿಸುವುದರ ಬಗ್ಗೆ ಮತ್ತು ವಲಸೆ ಕಾರ್ಮಿಕರ ಸಂಘಟನೆಗಳನ್ನು ನೋಂದಾಯಿಸುವಲ್ಲಿ ಕೇಂದ್ರ ಸರ್ಕಾರ ತಳೆದಿರುವ ಧೋರಣೆ ನೋಡುವಾಗ ಸರ್ಕಾರವೇ ಈ ನಿಟ್ಟಿನಲ್ಲಿ ದೊಡ್ಡ ಅಡಚಣೆಯಾಗಿ ನಿಂತಿದೆ ಎನ್ನುವುದು ಸ್ಪಷ್ಟ.

ಬಿಜೆಪಿ ಸರ್ಕಾರವು ಒಂದೆಡೆ – ರಾಜ್ಯ ಸರ್ಕಾರಗಳು, ಕಾರ್ಮಿಕ ಇಲಾಖೆ, ಕಾರ್ಮಿಕ ಸಂಘಟನೆಗಳು-ಇವರೆಲ್ಲರನ್ನೂ ವಲಸೆ ಕಾರ್ಮಿಕರ ಸಂಕಷ್ಟಕ್ಕೆ ದೂಷಿಸುತ್ತಿದೆ. ಮತ್ತೊಂದೆಡೆ ಸರ್ಕಾರದ OSH ಸಂಹಿತೆಯು ಹಿಂದೆ ಇದ್ದ ವಲಸೆ ಕಾರ್ಮಿಕರ ಕಾಯಿದೆ ಒದಗಿಸಿದ್ದ ಸವಲತ್ತುಗಳಿಂದ ಅವರನ್ನು ವಂಚಿತರಾಗಿಸಿವೆ ಮತ್ತು ಕಾನೂನು ರಕ್ಷಣೆಯಿಂದ ಇವರಲ್ಲಿ ಬಹುತೇಕರನ್ನು ಹೊರದೂಡಿದೆ.

ಮನರೇಗಾ ಮತ್ತು ರಾಜ್ಯ ಗ್ರಾಮೀಣ ಜೀವನಾಂಶ ಮಿಷನ್‌ಗಳು ಸಹ ಬುಡಕಟ್ಟು ಜನರ ವಲಸೆಯನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ ಎಂದು ಈ ಕರಡು ಡಾಕ್ಯುಮೆಂಟ್ ಹೇಳುತ್ತಿದೆ.

ಈ ನೀತಿಯು ಉದ್ಯೋಗದಾತರು ತಮ್ಮ ಮೌಲ್ಯ ಸರಪಳಿಗಳ ಬಗ್ಗೆ ಪಾರದರ್ಶಕವಾಗಿರಬೇಕು, ವಲಸೆ ಕಾರ್ಮಿಕರೊಡನೆ ಕೆಲಸದ ಕಾಂಟ್ರಾಕ್ಟ್ ಮಾಡಿಕೊಳ್ಳಬೇಕು ಮತ್ತು ಕೈ ಭಿಕ್ಷೆ / ನಗದು ವರ್ಗಾವಣೆ ಬದಲು ಹಕ್ಕು ಆಧಾರಿತ ನಿಲುವು ತಾಳಬೇಕು ಎಂದು ಹೇಳಿದೆ. ಇದು ಆಲಿಸುವುದಕ್ಕೆ ಬಹಳ ಇಂಪಾಗಿದೆ.

ಆದರೆ ವಲಸೆ ಕಾರ್ಮಿಕರ ದುರಂತಕ್ಕೆ ಮೂಲ ಕಾರಣಗಳನ್ನು ಗುರುತಿಸಿರುವ ನೀತಿ ಆಯೋಗದ ಈ ರಾಷ್ಟ್ರೀಯ ನೀತಿ ಡಾಕ್ಯೂಮೆಂಟ್ ಕೇವಲ ವಲಸೆ ಕಾರ್ಮಿಕರ ಮತ ಚಲಾವಣೆ ಬಗ್ಗೆ ಮಾತ್ರ ಪ್ರಸ್ತಾಪಿಸಿದೆ! ಇಷ್ಟೆಲ್ಲಾ ಆದ ಮೇಲೆ, ವಲಸೆ ಕಾರ್ಮಿಕರು ವಿದ್ಯುನಾನದ ಮೂಲಕ ರಾಜಕೀಯವಾಗಿ ಸಬಲರಾಗುವುದನ್ನು ವಿರೋಧಿಸುವ ಧೈರ್ಯ ಯಾರಿಗಿರುತ್ತದೆ? ಮಿಕ್ಕ ಕಾರ್ಯಗಳನ್ನು 'ಜಿಯೋ'ಗೆ ನಿರ್ವಹಿಸಲು ಬಿಡಲಾಗಿದೆ.

ಹೊಮ್ಮಿರುವ ಕಾರ್ಯಭಾರಗಳು:

ಕಾರ್ಮಿಕ ಚಳುವಳಿಯು ವಲಸೆ ಕಾರ್ಮಿಕರ ಸಂಕಷ್ಟ ಪರಿಸ್ಥಿತಿಯೊಡನೆ ಮೋದಿ ಸರ್ಕಾರಕ್ಕೆ ಚೆಲ್ಲಾಟವಾಡಲು ಬಿಡಬಾರದು. ವಲಸೆ ಕಾರ್ಮಿಕರ ವಿಷಯವನ್ನು ಒಂದು ವಸ್ತುನಿಷ್ಠ ಮಾರ್ಗದಲ್ಲಿ ಕೊಂಡೊಯ್ಯಲು ಕಾರ್ಮಿಕ ವರ್ಗವು ತಕ್ಷಣದಲ್ಲಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶ ಮಾಡಬೇಕು.

ಅಂತರ-ರಾಜ್ಯ ವಲಸೆ ಕಾರ್ಮಿಕರ ಕೆಳ ಕಾಣಿಸಿದ ಬೇಡಿಕೆಗಳನ್ನು ಕಾರ್ಮಿಕ ಸಂಘಟನಾ ಚಳುವಳಿಯು ತಕ್ಷಣದಲ್ಲಿ ಕೈಗೆತ್ತಿಕೊಳ್ಳಬೇಕು:

1. ವಲಸೆ ಕಾರ್ಮಿಕರ ರಾಷ್ಟ್ರೀಯ ನೀತಿ ರೂಪಿಸುವ ಕುರಿತು ಕೇಂದ್ರ ಕಾರ್ಮಿಕ ಸಚಿವಾಲಯವು ಕಾರ್ಮಿಕ ಸಂಘಟನೆಗಳೊಡನೆ ಚರ್ಚಿಸುವುದು.
2. ಅಂತರ-ರಾಜ್ಯ ವಲಸೆ ಕಾರ್ಮಿಕ (ನಿಯಂತ್ರಣ ಮತ್ತು ಉದ್ಯೋಗ ಮತ್ತು ಸೇವಾ ನಿಯಮಾವಳಿಗಳು) ಕಾಯಿದೆ 1979 ಅನ್ನು ಪುನರ್ ಜಾರಿ ಮಾಡುವುದು.
3. ಮೂಲ ರಾಜ್ಯ ಮತ್ತು ತಲುಪುದಾಣ ರಾಜ್ಯ ಸರ್ಕಾರಗಳೆರಡೂ ಸಹ ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದು.
4. ಸಂಸತ್ ಚುನಾವಣೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ವಲಸೆ ಕಾರ್ಮಿಕರು ಮತ ಚಲಾಯಿಸಲು ಅನುವಾಗುವ ಕುರಿತು ಚುನಾವಣಾ ಆಯೋಗವು ಸರ್ವ ಪಕ್ಷಗಳ ಸಭೆ ಕರೆಯಬೇಕು.

ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಈ ಬೇಡಿಕೆಗಳನ್ನು ಮುಂದಕ್ಕೆ ಒಯ್ಯಲು ಸಹ ಕಾರ್ಮಿಕ ಸಂಘಟನೆಗಳು ಪರಿಣಾಮಕಾರಿ ಮಧ್ಯ ಪ್ರವೇಶ ಮಾಡಬೇಕು ಮತ್ತು ಮೂಲ ರಾಜ್ಯ ಹಾಗೂ ತಲುಪುದಾಣ ರಾಜ್ಯಗಳಲ್ಲಿ ವಲಸೆ ಕಾರ್ಮಿಕರನ್ನು ಸಂಘಟಿಸಲು ಮುಂದಾಗಬೇಕು. ■

ರೋಸಾ ಲಕ್ಸಂಬರ್ಗ್ 150 ನೇ ವಾರ್ಷಿಕ.......

ಪುಟ 10 ರಿಂದ

ಜರ್ಮನ್ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿಯಲ್ಲಿ ಪರಿಷ್ಕರಣಾವಾದದ ವಿರುದ್ಧದ ಹೋರಾಟದಲ್ಲಿ, ಬರ್ನ್‌ಸ್ಟೈನ್ ಮತ್ತು ಕೌತ್ಸ್ಕಿ ಯಂತಹ ಹಿರಿಯ ನಾಯಕರನ್ನು ಎದುರು ಹಾಕಿಕೊಂಡು, ರೋಸಾ ಅವರು ಅಗ್ರಗಣ್ಯರಾಗಿದ್ದರು. ಅವರು ಯುದ್ಧದ ಬಗ್ಗೆ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳ ಉಗ್ರ ರಾಷ್ಟ್ರೀಯತಾವಾದಿ ನಿಲುವುಗಳನ್ನು ಸ್ವೀಕರಿಸಲು ನಿರಾಕರಿಸುವ ನಿಜವಾದ ಅಂತರರಾಷ್ಟ್ರೀಯವಾದಿ ಆಗಿದ್ದರು. ಅವರಿಗೆ ವರ್ಗ ಹೋರಾಟದಲ್ಲಿ ನಂಬಿಕೆಯಿತ್ತು. ಅತಿಯಾದ ಕೇಂದ್ರೀಕರಣದ ಅಪಾಯಗಳ ಬಗ್ಗೆ ಆಕೆಯ ವಿಚಾರಗಳು ಲೆನಿನ್ ನೇತೃತ್ವದ ಪಕ್ಷಕ್ಕೆ ಸಂಬಂಧಿಸಿದಂತೆ ತಪ್ಪಾಗಿ ಪ್ರತಿಪಾದಿತವಾಗಿರಬಹುದು. ಆದರೆ ನಂತರದ ವರ್ಷಗಳಲ್ಲಿ ಅನೇಕ ಸಮಾಜವಾದಿ ದೇಶಗಳಲ್ಲಿನ ಪಕ್ಷಗಳಲ್ಲಿ ಆಕೆ ನಿರೂಪಿಸಿದ ಅನೇಕ ಅಪಾಯಗಳು ನಿಜವಾದವು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಸ್ಪಾರ್ಟಕಸ್ ಲೀಗ್ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತಿಸಿದ ಒಂದು ತಿಂಗಳಲ್ಲೇ ಅವರು ಹುತಾತ್ಮರಾದರು. ಪ್ರಮುಖ ನಾಯಕರು ಹುತಾತ್ಮರಾದ ನಂತರ ಶೀಘ್ರದಲ್ಲೇ ಶಿಥಿಲಗೊಂಡ ಪಕ್ಷವನ್ನು ಬಲಪಡಿಸಲು ಆಕೆಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಕಾರ್ಮಿಕರ ಚಳುವಳಿಯಿಂದ ಸಾಮೂಹಿಕ ಪಕ್ಷವನ್ನು ಸ್ವಯಂಪ್ರೇರಿತವಾಗಿ ಹೊಮ್ಮಬಹುದು ಎಂಬ ತನ್ನ ಹಿಂದಿನ ಆಲೋಚನೆಗಳನ್ನು ಮರುಪರಿಶೀಲಿಸಲು ಸಹ ಆಕೆಗೆ ಅವಕಾಶ ಸಿಗಲಿಲ್ಲ. ಐತಿಹಾಸಿಕ ಅನುಭವವು ಲೆನಿನ್ ಅವರ ಪರಿಕಲ್ಪನೆಯ ಪ್ರಜಾಸತ್ತಾತ್ಮಕ ಕೇಂದ್ರೀಕರಣವನ್ನು ಆಧರಿಸಿದ ಪಕ್ಷದ ಪರಿಕಲ್ಪನೆಯ ಸಿಂಧುತ್ವ ಮತ್ತು ಅವಶ್ಯಕತೆಯನ್ನು ತೋರಿಸಿದೆ. ಆದರೂ, ಮಾಜಿ ಸಮಾಜವಾದಿ ದೇಶಗಳ ಪಕ್ಷಗಳಲ್ಲಿ ಪ್ರಜಾಸತ್ತಾತ್ಮಕ ಕೇಂದ್ರೀಕರಣದ ಆಚರಣೆಯಲ್ಲಿ ಬಂದ ಭಾರೀ ವಿಕೃತಿಗಳು, ಪ್ರಜಾಸತ್ತಾತ್ಮಕ ಕೇಂದ್ರೀಕರಣವನ್ನೇ ಪ್ರಶ್ನಿಸದೆ ವಿಕೃತಿಗಳನ್ನು ತರಬಹುದಾದ ಅತಿ-ಕೇಂದ್ರೀಕರಣದ ವಿರುದ್ಧ ಕ್ರಮಗಳನ್ನು ಕೈಗೊಳ್ಳಲು, ರೋಸಾ ಅದರ ಕುರಿತು ಮಾಡಿದ ವಿಮರ್ಶೆಯ ಗಂಭೀರ ಮರುಪರಿಶೀಲನೆಯ ಅಗತ್ಯವನ್ನು ಮುನ್ನೆಲೆಗೆ ತಂದಿವೆ.

ಜರ್ಮನಿ ಮತ್ತು ಪೋಲೆಂಡಿನಲ್ಲಿ ಪಕ್ಷದ ಸ್ಥಾಪಿತ ನಾಯಕರು ರೋಸಾ ಅವರನ್ನು ಇಷ್ಟಪಡದಿರುವ ಸ್ವಯಂವಿದಿತ ಅಂಶವಲ್ಲದೆ, ರೋಸಾ, ಅವರ ಕೃತಿಗಳನ್ನು ಹಾಗೂ ಪರಂಪರೆಯನ್ನು ವಿರೂಪಗಳಿಸುವ ಮತ್ತು ಅಂಚಿಗೆ ತಳ್ಳಲು ಕಾರಣವಾದ ಮತ್ತೊಂದು ಅಂಶವೆಂದರೆ, ನಿಸ್ಸಂದೇಹವಾಗಿ ಈ ಸೈದ್ಧಾಂತಿಕ ಸವಾಲು ಒಬ್ಬ ಮಹಿಳೆಯಿಂದ ಬಂತು ಎಂಬುದು. ಇಲ್ಲಿ ಒತ್ತಿ ಹೇಳಬೇಕಾದ ಅಂಶವೆಂದರೆ ರೋಸಾ ಅವರು ಯಾವುದೇ ಮುಲಾಜಿಲ್ಲದೆ ತನ್ನ ರಾಜಕೀಯ ನಂಬಿಕೆಗಳನ್ನು ಅನುಸರಿಸಿದ್ದರು. ಮಹಿಳೆಯರು ಎಸ್.ಪಿ.ಡಿ ಯಲ್ಲಿ ಬಲವಾದ ಪಾತ್ರವಹಿಸಿದ್ದರು. ಆದರೆ ಮಹಿಳೆಯರ ಸಿದ್ಧಾಂತಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿರಲಿಲ್ಲ. ರೋಸಾ ತನ್ನ ಕೆಲಸದ ಮೂಲಕ ಪರೋಕ್ಷವಾಗಿ, ಪಕ್ಷದೊಳಗಿನ ಲಿಂಗ ಅಸಮಾನತೆಯನ್ನು ತನಗಾಗಿ ಅಲ್ಲದೇ ತನ್ನ ಕೃತಿಗಳ ಸ್ಥಾನಮಾನ ಪ್ರತಿಪಾದಿಸುವ ಸಲುವಾಗಿ ಸಹ ಪ್ರಶ್ನಿಸಿದ್ದರು. ಆ ಮೂಲಕ ಅವರು ಪಕ್ಷದೊಳಗಿನ ಪುರುಷಾಧಿಪತ್ಯದ ಧೋರಣೆಗಳನ್ನು ಮತ್ತು ಲಿಂಗಾಧಾರಿತ ಆಚರಣೆಗಳನ್ನು ಪ್ರಶ್ನಿಸಿದ್ದರು ಮತ್ತು ಅದರಿಂದಾಗಿ ಮುಂದೆ ಇತರ ಮಹಿಳಾ ಕ್ರಾಂತಿಕಾರಿಗಳು ಎದ್ದುನಿಲ್ಲಲು ಅಗತ್ಯವಾದ ಬುನಾದಿ ಹಾಕಿದ್ದರು.

ರೋಸಾ ಅವರ ಆಪ್ತ ಸ್ನೇಹಿತೆ ಮತ್ತು ಸಂಗಾತಿ ಕ್ಲಾರಾ ಜೆಟ್ಕಿನ್ ಅತ್ಯಂತ ಆತ್ಮೀಯ ಶ್ರದ್ಧಾಂಜಲಿ ಅರ್ಪಿಸುತ್ತಾ "ಅವರು ಖಡ್ಗ, ಅವರು ಕ್ರಾಂತಿಯ ಬೆಂಕಿ. ರೋಸಾ ಅಂತರ್ರಾಷ್ಟ್ರೀಯ ಸಮಾಜವಾದದ ಇತಿಹಾಸದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿ ಉಳಿಯಲಿದ್ದಾರೆ" ಎಂದು ಹೇಳಿದ್ದರು. ಅದು ಅಕ್ಷರಶಃ ನಿಜ ಕೂಡಾ. ■

JANASHAKTHI KANNADA VARA PATRIKE April 19-25, 2021 Price: Rs. 10/- Date of Publication: 16 April 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಸಂವಿಧಾನದ ಸಂರಕ್ಷಣೆಗೆ ಸಂಘಟಿತ ಹೋರಾಟ ಅಗತ್ಯ

ಅಪಾಯಕಾರ ಮನುವಾದ ವಿರುದ್ಧ ದಲಿತರು ಧ್ವನಿ ಎತ್ತಬೇಕು



ರಾಷ್ಟ್ರವನ್ನು ಬಾಧಿಸುತ್ತಿರುವ ಜಾತಿ ತಾರತಮ್ಯ ಮತ್ತು ಅಸ್ಪಶ್ಯತೆಯನ್ನು ನಿರ್ಮೂಲನೆಗೊಳಿಸಲು ಎಲ್ಲ ದಲಿತ ಸಂಘಟನೆಗಳು ಮತ್ತು ಜಾತ್ಯಾತೀತ ಪ್ರಗತಿಪರರು ಒಗ್ಗೂಡಿ ಸಂಘಟನಾತ್ಮಕ ಹೋರಾಟವನ್ನು ಬಲಿಷ್ಠಗೊಳಿಸುವ ಮೂಲಕ ಸಾಮಾಜಿಕ ಸಾಮರಸ್ಯ ಮತ್ತು ಸಂವಿಧಾನ ಸಂರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕಾಗಿದೆ ಎಂದು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ರವರು ಅಭಿಪ್ರಾಯಪಟ್ಟರು.

ಡಾ। ಬಿ.ಆರ್. ಅಂಬೇಡ್ಕರ್ ರವರ 130ನೇ ಜನ್ಮ ದಿನಾಚರಣೆ ಅಂಗವಾಗಿ ಇಎಂಎಸ್ ಭವನದಲ್ಲಿ ದಲಿತ ಹಕ್ಕುಗಳ ಸಮಿತಿ, (ಡಿಹೆಚ್‌ಎಸ್) ರಾಜ್ಯ ಸಮಿತಿ ಹಮ್ಮಿಕೊಂಡಿದ್ದ "ಮನುವಾದ ಅಳಿಯಲಿ, ಸಂವಿಧಾನ ಉಳಿಯಲಿ" ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು. ಸಾಮಾಜಿಕ ಸಮಾನತೆ, ಜಾತ್ಯಾತೀತ ಮತ್ತು ಭಾತೃತ್ವದ 'ಆಶಯವುಳ್ಳ ಸಂವಿಧಾನವನ್ನು ಬದಲಿಸಬೇಕೆಂಬ ಹುನ್ನಾರ, ಸರ್ಕಾರಿ ಮತ್ತು ಸಾರ್ವಜನಿಕ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಮೂಲಕ ಮೀಸಲಾತಿ ಸೌಲಭ್ಯವನ್ನು ನಿರ್ಮೂಲನಗೊಳಿಸುವ ಒಳಸಂಚು, ವರ್ಣಾಶ್ರಮ ಪದ್ಧತಿಯನ್ನು ಪುಷ್ಠಿಕರಿಸುವ ಮನುವಾದವನ್ನು ಪುನರ್ ಅನುಷ್ಠಾನಗೊಳಿಸಲುರಾಗಿರುವ ಕೋಮುವಾದಿ ಶಕ್ತಿಗಳ ಕುತಂತಗಳನ್ನು ಹಿಮ್ಮೆಟ್ಟಿಸಲು, ಮುಂದೆ ಇಂತಹ ಶಕ್ತಿಗಳಿಂದ ಒದಗಬಹುದಾದ ಅಪಾಯಗಳನ್ನು ಅರ್ಥೈಸಿಕೊಂಡು ಎಲ್ಲ ಶೋಷಿತರು ಐಕ್ಯ ಹೋರಾಟವನ್ನು ಕಟ್ಟಿ ಸಂವಿಧಾನವನ್ನು ಸಂರಕ್ಷಿಸಲು ಪಣ ತೊಡಬೇಕಾಗಿದೆ. ಆಗ ಮಾತ್ರ ಅಂಬೇಡ್ಕರ್ ರವರ ಜಯಂತಿಗೆ ಅರ್ಥ ಬರಲು ಸಾಧ್ಯವೆಂದು ಪ್ರತಿಪಾದಿಸಿದರು.

ಅಸ್ಪಶ್ಯತೆಯ ಸಾಮಾಜಿಕ ಅಪಮಾನದಿಂದ ನೊಂದ ದಲಿತ ಸಮುದಾಯಗಳು ಊರ ಹೊರಗೆ ತಮ್ಮ ಬದುಕನ್ನು ಕಟ್ಟಿಕೊಂಡು ಅನಕ್ಷರತೆ, ಬಡತನ, ಭೂಮಿ ವಂಚನೆಗೆ ಈಡಾಗಿ ಸಾಮಾಜಿಕ ತಾರತಮ್ಯಕ್ಕೀಡಾದವರಿಗೆ ಮೀಸಲಾತಿ ಸೌಲಭ್ಯವನ್ನು ಪ್ರತಿಪಾದಿಸದ ಮಠಾಧಿಪತಿಗಳು ಈಗ ಜಾತಿವಾದವನು ಮೈಗೂಡಿಸಿಕೊಂಡು ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಬೇಕೆಂದು ಬೀದಿಗಿಳಿದಿರುವುದನ್ನು ನೋಡಿದರೆ, ದೇಶ ಎತ್ತ ಸಾಗುತ್ತಿದೆ ಎಂಬುದು ಅರಿವಾಗುತ್ತಿದೆ. ಮೀಸಲಾತಿಯ ಪ್ರಮಾಣ ಶೇ.50 ರಷ್ಟನ್ನು ಮೀರಬಾರದೆನ್ನುವ ಸರ್ವೋಚ್ಚ ನ್ಯಾಯಾಲಯದ ಆದೇಶದ ಅರಿವಿದ್ದರೂ ಸಹ ಮೀಸಲಾತಿಯ ಬೇಡಿಕೆಯನ್ನು ಸೃಷ್ಟಿಸುವ ಮೂಲಕ ಮೀಸಲಾತಿಯ ಮೂಲ ಆಶಯವನ್ನೇ ನಿರ್ನಾಮಗೊಳಿಸಲು ಒಳಸಂಚು ನಡೆಯುತ್ತಿರುವುದನ್ನು ಶೋಷಿತ ಸಮುದಾಯ ಅರ್ಥ ಮಾಡಿಕೊಳ್ಳಬೇಕಾಗಿದೆ. ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಸಹ ದಿಕ್ಕು ತಪ್ಪಿಸುತ್ತಿರುವ ಕೋಮುವಾದಿ ಶಕ್ತಿಗಳು ಮೀಸಲಾತಿ ಮೂಲಭೂತ ಹಕ್ಕಲ್ಲ ಎಂದು ತೀರ್ಪು ಕೊಡಿಸಲೂ ಸಹ ಮುಂದಾಗಿದ್ದಾರೆ. ಮಾತ್ರವಲ್ಲ, ದಲಿತರ ಮೇಲಿನ ದೌರ್ಜನ್ಯ ದಬ್ಬಾಳಿಕೆಯನ್ನು ನಿಯಂತ್ರಿಸಲಾಗದೆ ಅಪರಾಧಿಗಳನ್ನು ರಕ್ಷಿಸುವ, ಸಾಕ್ಷಿಗಳನ್ನೇ ನಾಶ ಮಾಡುವ ಮೂಲಕ ರೈತರ, ಕಾರ್ಮಿಕರ, ಆದಿವಾಸಿಗಳ ಬದುಕನ್ನು ಸುಧಾರಿಸದೆ ಜನಪರ ಚಳುವಳಿಗಳನ್ನು ದಮನ ಮಾಡಲು ನಡೆಯುತ್ತಿರುವ ಒಳಸಂಚುಗಳನ್ನು ಹಿಮ್ಮೆಟ್ಟಿಸಿ ಸಂವಿಧಾನವನ್ನು ರಕ್ಷಿಸಲು ನಾವೆಲ್ಲ ಪಣ ತೊಡಬೇಕಾಗಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮವನ್ನುದ್ದೇಶಿಸಿ, ಡಿ.ಹೆಚ್.ಎಸ್. ರಾಜ್ಯ ಸಹ ಸಂಚಾಲಕರಾದ ಎನ್. ರಾಜಣ್ಣ, ಡಿ.ಹೆಚ್.ಎಸ್. ಮುಖಂಡರಾದ ಬಿ. ಸುರೇಶ್, ಗೌಡಗೆರೆ ಮಾಯುಶ್ರೀ, ಚಂದ್ರಪ್ಪ, ಶಿವಶಂಕರಯ್ಯ ಮೊದಲಾದವರು ಮಾತನಾಡಿದರು. ಹಿರಿಯ ಮುಖಂಡರಾದ ಚಂದ್ರಶೇಖರ್, ಆರ್.ಬಿ.ಐ. ಶ್ರೀನಿವಾಸ್, ಪಿಹೆಚ್‌ಇ ರಾಜು, ಗೋವಿಂದರಾಜು, ಮೊದಲಾದವರು ಉಪಸ್ಥಿತರಿದ್ದರು.

ವರದಿ: ಗೌಡಗೆರೆ ಮಾಯುಶ್ರೀ








ರಾಜ್ಯ ರಸ್ತೆ ಸಾರಿಗೆ ನೌಕರರ ಚರಿತ್ರಾರ್ಹ ಮುಷ್ಕರಕ್ಕೆ ಜನ ಬೆಂಬಲ ಹರಿದು ಬರಲಿ





JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**